# ದೆಹಲಿ ಕರ್ನಾಟಕ ಸಂಘದ ಅಭಿಮತ

ಫೆಬ್ರವರಿ 2013
ಬೆಲೆ ರೂ. 1









## ಕೈಬೀಸಿ ಕರೆಯುತ್ತಿದೆ ಕರ್ನಾಟಕ

### ಸೂರಜ್‌ಕುಂಡ್ ಮೇಳದಲ್ಲಿ



ಅಭಿನಂದನೆ

# ಕನ್ನಡಿಗರಿಗೆ ಪದ್ಮ–ಕನ್ನಡಿಗರ ಹೆಮ್ಮೆ



**ಪದ್ಮವಿಭೂಷಣ: (ವಿಜ್ಞಾನ) – ಪ್ರೊ.ರೊದ್ದಂ ನರಸಿಂಹ** ಬೆಂಗಳೂರಿನ ಜಕ್ಕೂರಿನಲ್ಲಿರುವ ಜವಾಹರಲಾಲ್ ಉನ್ನತ ಸಂಶೋಧನಾ ಕೇಂದ್ರದಲ್ಲಿ ಮೆಕ್ಯಾನಿಕಲ್ ಇಂಜಿನಿಯರಿಂಗ್ ಬೋಧಿಸುವ ರೊದ್ದಂ ನರಸಿಂಹ ಅವರು ಐ.ಐ.ಎಸ್.ಸಿ ಆವರಣದಲ್ಲಿರುವ 'ರಾಷ್ಟ್ರೀಯ ಉನ್ನತ ಅಧ್ಯಯನಗಳಸಂಸ್ಥೆ'ಯ ನಿರ್ದೇಶಕರಾಗಿದ್ದರು. ಎನ್.ಎ.ಎಲ್ ನ ನಿರ್ದೇಶಕರೂ ಆಗಿದ್ದ ಅವರು ಪ್ರಧಾನ ಮಂತ್ರಿಗಳ ಸಲಹಾ ಮಂಡಲಿ ಹಾಗೂ ಬಾಹ್ಯಾಕಾಶ ಆಯೋಗದ ಸದಸ್ಯರಾಗಿದ್ದು, ದೇಶದ ಎಲ್ಲ ವೈಮಾನಂತರಿಕ್ಷ ಯೋಜನೆಗಳಿಗೆ ನಿರಂತರವಾಗಿ ಮಾರ್ಗದರ್ಶನ ಮಾಡುತ್ತಿದ್ದಾರೆ. ಭಾರತೀಯ ವಿಮಾನ ವಿಜ್ಞಾನಿಗೆ 2008 ರಲ್ಲಿ ಇಟಲಿಯ ಅತ್ಯುನ್ನತ ವಿಜ್ಞಾನ ಪ್ರಶಸ್ತಿಯಾದ ಟ್ರೀಸ್ಟೆ ಪುರಸ್ಕಾರವೂ ಲಭಿಸಿದೆ.




**ಪದ್ಮಭೂಷಣ: (ಅಂತರಿಕ್ಷ ವಿಜ್ಞಾನ) – ಡಾ.ಬಿ.ಎನ್.ಸುರೇಶ್** ವಿಕ್ರಮ್ ಸಾರಾಭಾಯಿ ಅಂತರಿಕ್ಷ ಕೇಂದ್ರದ ಮಾಜಿ ನಿರ್ದೇಶಕರು ಹಾಗೂ ಭಾರತೀಯ ಬಾಹ್ಯಾಕಾಶ ತಂತ್ರಜ್ಞಾನ ಸಂಸ್ಥೆಯ ಮಾಜೀ ನಿರ್ದೇಶಕರು ಹಾಗೂ ವಿಶ್ವಸಂಸ್ಥೆಯ ವಿಜ್ಞಾನ ಮತ್ತು ತಾಂತ್ರಿಕ ಸಮಿತಿಯ ಚುನಾಯಿತ ಅಧ್ಯಕ್ಷರು. ಡಾ.ಬಿ.ಎನ್.ಸುರೇಶ್ ಉಡಾವಣಾ ತಂತ್ರಜ್ಞಾನದ ಅಭಿವೃದ್ಧಿಗೆ ಗಮನಾರ್ಹ ಕೊಡುಗೆ ನೀಡಿದ್ದಾರೆ. ಇಸ್ರೋ ಮತ್ತು ಬಾಹ್ಯಾಕಾಶ ಸಂಸ್ಥೆಗಳ ಎರಡೂ ಪಾರ್ಶ್ವ ಸಹಕಾರ ಒಪ್ಪಂದದಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ.



**ಪದ್ಮಭೂಷಣ: (ಕ್ರೀಡೆ) – ಖ್ಯಾತ ಕ್ರಿಕೆಟಿಗ ರಾಹುಲ್ ದ್ರಾವಿಡ್** 'ವಾಲ್' ಎಂದೇ ಖ್ಯಾತರಾಗಿದ್ದ ರಾಹುಲ್ ದ್ರಾವಿಡ್ ತಮ್ಮ 16 ವರ್ಷಗಳ ಕ್ರಿಕೆಟ್ ಪಯಣದಲ್ಲಿ ಯಶಸ್ಸಿನ ಶೃಂಗವನ್ನೇರಿ ಮುನ್ನಡೆದಿದ್ದಾರೆ. ಅಸಂಖ್ಯಾತ ದಾಖಲೆಗಳನ್ನು ಸೃಷ್ಟಿಸಿದ ರಾಹುಲ್ ಕನ್ನಡಿಗರ ಹಿರಿಮೆ ಗರಿಮೆಗಳನ್ನು ವಿಶ್ವಕ್ಕೆ ಸಾರಿದ ಮಹಾನ್ ಆಟಗಾರ. ವಿಶ್ವದ ಶ್ರೇಷ್ಠ ಕ್ರಿಕೆಟಿಗರಲ್ಲಿ ಒಬ್ಬರು. ಟೆಸ್ಟ್ ಪಂದ್ಯಗಳಲ್ಲಿ 10,000 ಕ್ಕೂ ಅಧಿಕ ರನ್ ಗಳಿಸುವುದರಲ್ಲಿ, ಸಚಿನ್ ತೆಂಡೂಲ್ಕರ್ ಮತ್ತು ಸುನಿಲ್ ಗವಾಸ್ಕರ್ ನಂತರ ಮೂರನೇಯ ಭಾರತೀಯ. ಫೆಬ್ರುವರಿ 14, 2007 ರಂದು ಅಂತರರಾಷ್ಟ್ರೀಯ ಪಂದ್ಯಗಳಲ್ಲಿ 10,000ಕ್ಕೂ ಅಧಿಕ ರನ್ನುಗಳನ್ನು ಗಳಿಸಿದ ವಿಶ್ವದಲ್ಲಿ 6ನೇ ಆಟಗಾರ. ರಾಹುಲ್ ದ್ರಾವಿಡ್, ಟೆಸ್ಟ್ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ಕ್ಯಾಚ್ (210) ಹಿಡಿದ ಆಟಗಾರರಾಗಿರುತ್ತಾರೆ. 7 ಅಗಸ್ಟ್ 2011 ರಂದು, ಒಂದು ದಿನದ ಹಾಗೂ ಟಿ20 ಕ್ರಿಕೆಟ್‌ನಿಂದ ನಿವೃತ್ತಿ ಘೋಷಿಸಿದರು. 2012 ಮಾರ್ಚ್ 9 ರಂದು ಟೆಸ್ಟ್ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದರು. 2013ನೇ ಸಾಲಿನ ಪದ್ಮಭೂಷಣ ಪ್ರಶಸ್ತಿಯನ್ನು ಪಡೆದ ಹೆಮ್ಮೆಯ ಕನ್ನಡಿಗ.



**ಪದ್ಮಶ್ರೀ: (ವಿಜ್ಞಾನ) – ಪ್ರೊ.ಅಜಯ್ ಸೂದ್** ಕಳೆದ 23 ವರ್ಷಗಳಿಂದ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಭೌತವಿಜ್ಞಾನದ ಪ್ರಾಧ್ಯಾಪಕರಾಗಿದ್ದಾರೆ. ಬೆಂಗಳೂರಿನ ಜವಾಹರ್ ಲಾಲ್ ನೆಹರೂ ಹೆಚ್ಚುವರಿ ವೈಜ್ಞಾನಿಕ ಸಂಶೋಧನಾ ಕೇಂದ್ರದ ಗೌರವ ಪ್ರಾಧ್ಯಾಪಕ. ಇಂದಿರಾ ಗಾಂಧಿ ಅಣು ಸಂಶೋಧನಾ ಕೇಂದ್ರದ ವಿಜ್ಞಾನಿ. ಭಾರತದ ಪ್ರಧಾನ ಮಂತ್ರಿಯವರ ವೈಜ್ಞಾನಿಕ ಸಲಹಾ ಮಂಡಳಿಯ ಸದಸ್ಯರಾಗಿ, ದೆಹಲಿಯ ನ್ಯಾಷನಲ್ ಫಿಸಿಕಲ್ ಲಾಬೋರೇಟರಿ ರಿಸರ್ಚ್ ಕೌನ್ಸಿಲ್‌ನ ಅಧ್ಯಕ್ಷರಾಗಿ ಭೌತ ವಿಜ್ಞಾನ ಕ್ಷೇತ್ರಕ್ಕೆ ಗುರುತರವಾದ ಸೇವೆಯನ್ನು ಸಲ್ಲಿಸಿದ್ದಾರೆ.



**ಪದ್ಮಶ್ರೀ: (ವಿಜ್ಞಾನ) – ಪ್ರೊ.ಕೃಷ್ಣಸ್ವಾಮಿ ವಿಜಯರಾಘವನ್** ರಾಷ್ಟ್ರೀಯ ಜೈವಿಕ ವಿಜ್ಞಾನ–ಕೇಂದ್ರ ಹಾಗೂ ಟಾಟಾ ಮೂಲಭೂತ ಸಂಶೋಧನಾ ಕೇಂದ್ರದ ಪ್ರಾಧ್ಯಾಪಕ ಹಾಗೂ ನಿರ್ದೇಶಕರೂ ಆಗಿದ್ದಾರೆ. ರಾಷ್ಟ್ರೀಯ ಜೈವಿಕ ವಿಜ್ಞಾನ ಕೇಂದ್ರ ಅವರ ನಾಯಕತ್ವದಲ್ಲಿ ಇಂದು ವಿಶ್ವದರ್ಜೆಯ ಸಂಸ್ಥೆಯೆಂದು ಅಂತಾರಾಷ್ಟ್ರೀಯವಾಗಿ ಮಾನ್ಯತೆ ಪಡೆದಿದೆ. ಅನೇಕ ಹೊಸ ಸಂಸ್ಥೆಗಳನ್ನು ಸ್ಥಾಪಿಸಲು ಕೆಲಸ ಮಾಡಿದ್ದಾರೆ. ಮಹೋನ್ನತ ಬೆಳವಣಿಗೆಯ ತಳಿ ವಿಜ್ಞಾನಿಯಾಗಿರುವ ವಿಜಯರಾಘವನ್ Cellular and Molecular Principles of Adult Muscle Development in Drosofillia ತತ್ವವನ್ನು ಅರ್ಥೈಸಿಕೊಳ್ಳುವಲ್ಲಿ ವಿಜ್ಞಾನಕ್ಕೆ ನೀಡಿರುವ ಕೊಡುಗೆ ಅಪಾರವಾದುದು.



**ಪದ್ಮಶ್ರೀ: (ಕ್ರೀಡೆ) – ಗಿರೀಶ್ ನಾಗರಾಜೇಗೌಡ** ಲಂಡನ್ ಪ್ಯಾರಾಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಮೊದಲ ಬೆಳ್ಳಿಯ ಪದಕವನ್ನು ತಂದುಕೊಟ್ಟು ಇತಿಹಾಸ ನಿರ್ಮಿಸಿದ ಕನ್ನಡದ ಕುವರ ಗಿರೀಶ್ ಹೊಸನಗರ ನಾಗರಾಜೇಗೌಡ ಪದ್ಮಶ್ರೀ ಪುರಸ್ಕಾರಕ್ಕೆ ಭಾಜನರಾಗಿದ್ದು ಕನ್ನಡಿಗರೆಲ್ಲರಿಗೆ ಹೆಮ್ಮೆಯ ವಿಷಯ. 2006ರಲ್ಲಿ ಪಿ.ಯು.ಸಿ. ಓದುವಾಗ ಎತ್ತರ ಜಿಗಿತ ಸ್ಪರ್ಧೆಯಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದ ಗಿರೀಶ್ ಮೈಸೂರು ಮಟ್ಟದ ಕ್ರೀಡಾಕೂಟದಲ್ಲಿ ಸಾಮಾನ್ಯರ ಜೊತೆ ಎರಡು ಬಾರಿ ಕಂಚು ಹಾಗೂ ಎರಡು ಬಾರಿ ಚಿನ್ನದ ಪದಕ ಗೆದ್ದಿದ್ದಾರೆ. ಪಾದದ ಅಂಗವೈಕಲ್ಯವನ್ನು ಮೀರಿ ತಮ್ಮ ಸತತ ಪರಿಶ್ರಮ ಹಾಗೂ ಛಲದಿಂದ ದೇಶಿಯವಾಗಿ ನಡೆದ ಕ್ರೀಡಾಕೂಟಗಳಲ್ಲಷ್ಟೇ ಅಲ್ಲದೇ ಐಯರ್‌ಲ್ಯಾಂಡ್ ಹಾಗೂ ಮಲೇಷಿಯಾದಲ್ಲಿ ಕಂಚು, ಕುವೈತ್‌ನಲ್ಲಿ ಚಿನ್ನ ಹಾಗೂ ಏಶ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕಗಳನ್ನು ಗಳಿಸಿದ್ದಾರೆ.



**ಪದ್ಮಶ್ರೀ: (ರಂಗಭೂಮಿ) – ಬಿ. ಜಯಶ್ರೀ** ಗುಬ್ಬಿ ವೀರಣ್ಣನವರ ಮೊಮ್ಮಗಳಾದ ಬಿ. ಜಯಶ್ರೀ ಅವರು ನಾಲ್ಕು ವರ್ಷದ ವಯಸ್ಸಿನಲ್ಲೇ ನಾಟಕ ರಂಗಕ್ಕೆ ಬಂದವರು. ಮೊದಲು ವೃತ್ತಿ ರಂಗಭೂಮಿ, ನಂತರದಲ್ಲಿ ಹವ್ಯಾಸಿ ರಂಗಭೂಮಿಗೆ ಬಂದು, ಮುಂದೆ ಸಿನಿಮಾ ಮತ್ತು ದೂರದರ್ಶನದಲ್ಲೂ ತಮ್ಮ ಪ್ರತಿಭೆ ಮಾತ್ರದಿಂದ ಪ್ರಕಾಶಿಸುತ್ತಿರುವ ಬಿ. ಜಯಶ್ರೀ ಅವರು ಪ್ರಸಕ್ತದಲ್ಲಿ ರಾಜ್ಯಸಭಾ ಸದಸ್ಯರೂ ಹೌದು.
ದೆಹಲಿಯ ರಾಷ್ಟ್ರೀಯ ನಾಟಕಶಾಲೆಯಲ್ಲಿ ತರಬೇತು ಪಡೆದ ಜಯಶ್ರೀ ಅವರು ಕನ್ನಡ ಹವ್ಯಾಸಿ ರಂಗಭೂಮಿಯಲ್ಲಿ ಪ್ರಧಾನ ಹೆಸರು ಮಾಡಿರುವ 'ಸ್ಪಂದನ' ನಾಟಕ ತಂಡವನ್ನು ಹುಟ್ಟುಹಾಕಿದವರು. ಅವರು ಆದರ್ಶ ಫಿಲಂ ಇನ್ಸ್ಟಿಟ್ಯೂಟಿನ ಉಪನ್ಯಾಸಕಿಯಾಗಿ ಸಹಾ ಜವಾಬ್ದಾರಿ ನಿರ್ವಹಿಸಿದ್ದಾರೆ. ಬಾಲಭವನದಂತಹ ಕೇಂದ್ರಗಳಲ್ಲಿ ಕ್ರಿಯಾತ್ಮಕವಾಗಿ ದುಡಿದಿದ್ದಾರೆ.
ನಾಟಕಗಳಲ್ಲಿ ಅಭಿನಯ, ನಿರ್ದೇಶನಗಳನ್ನು ಒಳಗೊಂಡಂತೆ ಎಲ್ಲ ರೀತಿಯಲ್ಲಿ ಸಕ್ರಿಯರಾಗಿದ್ದ ಜಯಶ್ರೀ ಅವರ ಕಂಚುಕಂಠ ಮೋಹಕವಾದದ್ದು.
ನಾಗಮಂಡಲ, ತಾಯಿ, ಬ್ಯಾರಿಸ್ಟರ್, ಕರಿಮಾಯಿ, ಲಕ್ಷಾಪತಿ ರಾಜನ ಕತೆ, ವೈಶಾಖ ಮುಂತಾದ ಹಲವಾರು ನಾಟಕಗಳು ಬಿ. ಜಯಶ್ರೀ ಅವರ ಅನನ್ಯ ಕಲಾಸೇವೆಯನ್ನು ನಿರಂತರ ಸ್ಮರಿಸುವಂತೆ ಮಾಡಿವೆ. ಗುಬ್ಬಿ ಕಂಪೆನಿಯ ಪ್ರಸಿದ್ಧ ನಾಟಕವಾದ 'ಸದಾರಮೆ'ಗೆ ಕೂಡಾ ಅವರು ಇತ್ತೀಚಿನ ದಿನಗಳಲ್ಲಿ ಪುನರ್ಜೀವ ಕೊಟ್ಟರು. ದೇಶ ವಿದೇಶಗಳಲ್ಲಿ ಅವರ ನಿರ್ಮಾಣ, ನಿರ್ದೇಶನ, ಅಭಿನಯಗಳು ಜನಮೆಚ್ಚುಗೆ ಪಡೆದಿವೆ.
1996ರ ವರ್ಷದ ಅಖಿಲ ಭಾರತ ಸಂಗೀತ ನಾಟಕ ಅಕಾಡೆಮಿ ಗೌರವದ ಪುರಸ್ಕಾರದೊಡನೆ ಕಲೆಗಾಗಿ ತಮ್ಮ ಜೀವನವನ್ನು ಮುಡಿಪಾಗಿಟ್ಟ ಬಿ. ಜಯಶ್ರೀ ಅವರಿಗೆ ವಿವಿಧ ರೀತಿಯ ಗೌರವಗಳು ಸಂದಿವೆ. ರಂಗಭೂಮಿಯಲ್ಲಿ ಅಪಾರ ಸೇವೆ ಸಲ್ಲಿಸುವುದರ ಮೂಲಕ ರಂಗಾಯಣದ ನಿರ್ದೇಶಕಿಯಾಗಿ ಸಹಾ ಕೆಲವು ಕಾಲ ಕೆಲಸ ಮಾಡಿರುವ ಜಯಶ್ರೀ ಅವರಿಗೆ ಪದ್ಮಶ್ರೀ ಗೌರವ ಸಂದಿರುವುದು ಕನ್ನಡಿಗರ ಸಂತಸವನ್ನು ಇಮ್ಮಡಿಸಿದೆ.

**ಪದ್ಮ ಪ್ರಶಸ್ತಿ ಭಾಜನರಾದ ಎಲ್ಲ ಕನ್ನಡದ ಗಣ್ಯರಿಗೆ ದೆಹಲಿ ಕರ್ನಾಟಕ ಸಂಘ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಹೃತ್ಪೂರ್ವಕ ಅಭಿನಂದನೆಗಳು.**

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 23 ಸಂಚಿಕೆ 5
ಫೆಬ್ರವರಿ 2013, ಬೆಲೆ ರೂ. 1

# ಮನದ ಮಾತು

ದೆಹಲಿ ಇರುವುದು ಉತ್ತರ ಭಾರತದ ಹೃದ್ಯ ಭಾಗದಲ್ಲಿ. ಇಲ್ಲಿ ಸಮುದ್ರ, ಅಲ್ಲಿನ ಪ್ರಚಂಡ ಅಲೆಗಳು ಊಹೆಗೂ ಮೀರಿದ ಕಲ್ಪನೆ. ದೇಶವನ್ನಾಳುವ ಅಧಿಕಾರಿಗಳಿಗೆ, ರಾಜಕಾರಣಿಗಳಿಗೆ ಈ ಸಾಗರ, ಅದರ ಪ್ರಕೋಪ ಅಲೆಗಳ ಅನುಭವವಾದದ್ದೇ ಇತ್ತೀಚೆಗೆ ನಮ್ಮ ಯುವಜನ ಅಮಾನುಷ ಅತ್ಯಾಚಾರವನ್ನು ಪ್ರತಿಭಟಿಸಿದಾಗ. ನಿಜಕ್ಕೂ ಹೇಳಬೇಕೆಂದರೆ ಸಾಗರೋಪಾದಿಯಾಗಿ ಜನ, ಯುವಜನ ನೆರೆದರು. ಯಾವುದಕ್ಕೂ ಜಗ್ಗದೇ ಬೃಹತ್ ಅಲೆಗಳಂತೆ ಅಪ್ಪಳಿಸಿದರು. ಈ ಅಲೆಗಳು ಸಹಜ ಆಕ್ರೋಶದಿಂದ ಆವೃತವಾಗಿದ್ದು ರಾಜಕೀಯ ಶಕ್ತಿಗಳನ್ನು ದೂರ ಸರಿಸಿದ್ದವು. ಬೇಡಿಕೆ ಒಂದೇ–ಇದ್ದೂ ಇರದಂತಹ ಪುರಾತನ ದುರ್ಬಲ ಕಾನೂನನ್ನು ಸಬಲೀಕರಿಸಿ; ಪೈಶಾಚಿಕ ಅತ್ಯಾಚಾರಕ್ಕೆ ಕಾರಣರಾದವರನ್ನು ಕಠಿಣವಾಗಿ ಶಿಕ್ಷಿಸಿ; ಹೆಣ್ಣುಮಕ್ಕಳಿಗೆ ಈ ದೇಶದಲ್ಲಿ ನಿರ್ಭಯವಾಗಿ ಬದುಕಲು ರಕ್ಷಣೆ ನೀಡಿ. ಅವ್ಯಾಹತವಾಗಿ ದೇಶದೆಲ್ಲೆಡೆ ನಡೆಯುತ್ತಿರುವ ಈ ಭೀಭತ್ಸ ಹೇಯ ಕೃತ್ಯದ ವಿರುದ್ಧ ಯುವಜನತೆ ಸಿಡಿದೆದ್ದಿತು. ಬಹುಶ: ಸ್ವಾತಂತ್ರೋತ್ತರ ಭಾರತದ ಇತಿಹಾಸದಲ್ಲಿ ಮೊದಲ ಸಲ ನಡೆದ ಈ ಅಪೂರ್ವ ಜನಾಂದೋಲನ (ರಾಜಕೀಯ ಉದ್ದೇಶ ರಹಿತ)ಅಚ್ಚರಿಯ ಅತ್ಯದ್ಭುತ ಫಲಿತಾಂಶ ನೀಡಿದೆ. ರಾಷ್ಟ್ರಪತಿಗಳು ಹೊರಡಿಸಿದ ಸುಗ್ರೀವಾಜ್ಞೆಯ ಮೂಲಕ 'ಅತ್ಯಾಚಾರ'ದ ಕಾನೂನು ಹೆಚ್ಚು ಕಡಿಮೆ 'ಪರಿಪೂರ್ಣ'ವಾಗಿ ಜಾರಿಗೆ ಬಂದಿದೆ. ಅಪರಾಧ ಕಾನೂನು (ತಿದ್ದುಪಡಿ) ಸುಗ್ರೀವಾಜ್ಞೆ–2013 ಈಗ ಆರೋಪಿಗಳನ್ನು ಕಾನೂನಿನ ಇಕ್ಕಳದಲ್ಲಿ ಸಿಲುಕಿಸುವುದು ಬಹುತೇಕ ಖಚಿತ. ಈ ಸುಗ್ರೀವಾಜ್ಞೆ ಇದಕ್ಕಾಗಿಯೇ ನೇಮಕವಾಗಿದ್ದ ನ್ಯಾಯಮೂರ್ತಿ ಜೆ.ಎಸ್.ವರ್ಮ ಅವರ ಶಿಫಾರಸ್ಸುಗಳಲ್ಲಿ ಬಹುತೇಕವನ್ನು ಗರ್ಭೀಕರಿಸಿಕೊಂಡಿದೆ. ಅತ್ಯಾಚಾರಕ್ಕೀಡಾದ ಮಹಿಳೆ ತೀರಿಕೊಂಡರೆ, ಅಥವಾ ಜೀವಚ್ಛವ ಸ್ಥಿತಿಗೆ ತಲುಪಿದರೆ–ಆರೋಪ ಸಾಬೀತಾದಲ್ಲಿ ಅಪರಾಧಿಗಳಿಗೆ ಮರಣದಂಡನೆ ಖಚಿತ. ಅಷ್ಟೇ ಅಲ್ಲ, ಮಹಿಳೆಯ ಹೆಣ್ತನವನ್ನು ಕೆಣಕಿ ಛೇಡಿಸುವವರೂ ಶಿಕ್ಷೆ ಅನುಭವಿಸಬೇಕು. ಆದರೆ ಈ ಸುಗ್ರೀವಾಜ್ಞೆ ಕೆಲವು ಪ್ರಮುಖ, ಅನಿವಾರ್ಯ ಅಪರಾಧಗಳನ್ನು ಶಿಕ್ಷೆಯ ಪರಿಧಿಗೆ ತರಲು ವಿಫಲವಾಗಿದೆ ಎಂಬ ಕೂಗು ಕೇಳಿ ಬರುತ್ತಿದೆ. ವೈವಾಹಿಕ ಬದುಕಿನಲ್ಲಿ 'ಒಪ್ಪಿಗೆ' ಇಲ್ಲದಿದ್ದಾಗ ನಡೆಯುವ ಬಲಾತ್ಕಾರಗಳು, ಹಿಂಸಾತ್ಮಕ ಬಲಾತ್ಕಾರಗಳು, ಅತ್ಯಾಚಾರ ಖ್ಯಾತಿಯ ರಾಜಕಾರಣಿಗಳಿಗೆ ಚುನಾವಣೆಗಳಲ್ಲಿ ಸ್ಪರ್ಧಿಸಲು ನಿಷೇಧ–ಇತ್ಯಾದಿಗಳು ಒಳಗೊಂಡಿಲ್ಲ ಎಂಬುದು ಗಮನಾರ್ಹ. ಅಲ್ಲದೇ ಹೇಯ ಕೃತ್ಯವನ್ನು ಎಸಗುವ ಬಾಲಾಪರಾಧಿಗಳ ವಯಸ್ಸನ್ನು 16ಕ್ಕೆ ಇಳಿಸುವ ಕಾನೂನನ್ನೂ ಸರ್ಕಾರ ಪರಿಗಣಿಸುವ ಸಾಧ್ಯತೆ ಇದೀಗ ಕೇಳಿಬರುತ್ತಿದೆ. ಹೇಗಿದ್ದರೂ ಈ ಸುಗ್ರೀವಾಜ್ಞೆ ಆರು ತಿಂಗಳ ಅವಧಿಯೊಳಗೆ ಸಂಸತ್ತಿನ ಅನುಮೋದನೆ ಪಡೆದುಕೊಳ್ಳಲೇ ಬೇಕು. ಆಗಲಾದರೂ ಈ 'ಬಿಟ್ಟು ಹೋಗಿರುವ' ಶಿಫಾರಸ್ಸುಗಳು ಕಾನೂನಿನ ಪರಿಧಿಯೊಳಗೆ ಸೇರ್ಪಡೆಯಾಗಲಿ ಎಂಬುದು ನಮ್ಮ ಅಭಿಲಾಷೆ. ನಿಜ ಹೇಳಬೇಕೆಂದರೆ ಕಾನೂನಿನ ತಿದ್ದುಪಡಿಗಳು, ಸುಗ್ರೀವಾಜ್ಞೆಗಳು, ಇದಕ್ಕೆ ಅವಶ್ಯವಾದ ಸಂಸತ್ತಿನ ಅನುಮೋದನೆಗಳು ಮಾತ್ರ ನಿರೀಕ್ಷಿತ ಬದಲಾವಣೆಗಳನ್ನು ತರಲು ಸಾಧ್ಯವಿಲ್ಲ. ಆಡಳಿತ ವ್ಯವಸ್ಥೆ ತೆಗೆದುಕೊಳ್ಳುವ ತತ್‌ಕ್ಷಣದ ಕ್ರಮ ಹಾಗೂ ನ್ಯಾಯಾಂಗ ವ್ಯವಸ್ಥೆಯಲ್ಲಿ ತ್ವರಿತ ನ್ಯಾಯ ಒದಗಿಸಲು ತೀವ್ರ ಸುಧಾರಣೆ ಈ ಕಾನೂನಿಗೆ ಬೆಲೆ ತರಬಲ್ಲವು. ಅಷ್ಟೇ ಅಲ್ಲ, ಅಪರಾಧಿಗಳಿಗೆ ಅತ್ಯಂತ ಕಠಿಣ ಶಿಕ್ಷೆ ಕ್ಷಿಪ್ರ ಅವಧಿಯಲ್ಲಿ ಪ್ರಾಪ್ತವಾಗುತ್ತ ಹೋದರೆ ಅಪರಾಧ ಮಾಡುವವರ ಎದೆ ಝಲ್ಲೆನ್ನುತ್ತದೆ; ಹೆಣ್ಣು ಮಗಳು ಸುರಕ್ಷಿತವಾಗಿ ನೆಮ್ಮದಿಯಿಂದ ಬದುಕಲು ಸಾಧ್ಯವಾಗುತ್ತದೆ. ಹೇಗೇ ಇರಲಿ, ಶುರು ಅಂತೂ ಆಗಿದೆ. ಇದು ಮುಂದಡಿ ಇಡಲಿ, ಜನಮಾನಸದಲ್ಲಿ 'ನಿರ್ಭಯ' ನೆಲೆಸಲಿ ಎಂಬುದು ನಮ್ಮ ಹಾರೈಕೆ.

ಈ ಸಂದರ್ಭದಲ್ಲಿ 'ಅಮರ'ಳಾದ ದೆಹಲಿ ಗ್ಯಾಂಗ್ ರೇಪ್‌ನ ಬಲಿಪಶುವಾದ ಹೆಣ್ಣು ಮಗಳನ್ನು ಇಲ್ಲಿ ನಾವು ನೆನೆಸಲೇ ಬೇಕು. ಜೀವಚ್ಛವವಾಗಿದ್ದರೂ ಅಪರಾಧಿಗಳಿಗೆ ಶಿಕ್ಷೆಯಾಗಲೇಬೇಕೆಂದು ಜೀವ ಹಿಡಿಯಾಗಿಟ್ಟುಕೊಂಡು ಅವಶ್ಯ ಹೇಳಿಕೆಗಳನ್ನು ನೀಡಿ ಜನಾಂದೋಲನಕ್ಕೆ ಪ್ರೇರಣೆ ನೀಡಿದ ಆ ಅಪೂರ್ವ ಚೇತನಕ್ಕೆ ನಾವು ಶಿರಸಾ ನಮಿಸಲೇ ಬೇಕು. ಆ ಹೆಣ್ಣು ಮಗಳ ಅಮಾನುಷ ಸಾವು ತೀವ್ರ ದು:ಖ ತಂದಿದ್ದರೂ, ಒಂದು ಆಮೂಲಾಗ್ರ ಬದಲಾವಣೆಗೆ ನಾಂದಿ ಹಾಡಿತಲ್ಲಾ ಎನ್ನುವುದು ಕಿಂಚಿತ್ ಸಮಾಧಾನದ ಸಂಗತಿ.

ಕಳೆದ ಒಂದೆರೆಡು ವರ್ಷಗಳಿಂದ ರಾಷ್ಟ್ರದ ರಾಜಧಾನಿಯಲ್ಲಿ ಕರ್ನಾಟಕ ಪ್ರಸ್ತಾಪವಾಗುತ್ತಿದ್ದುದೇ ಕರ್ 'ನಾಟಕ'ದ ಕಾರಣಗಳಿಗಾಗಿ; ಅಲ್ಲಿನ ರಾಜಕೀಯ ವೈಪರೀತ್ಯಗಳಿಂದಾಗಿ. ಹೀಗಾಗಿ ನಾವು, ದೆಹಲಿ ಕನ್ನಡಿಗರು ತಲೆತಗ್ಗಿಸುವಂತಾಗಿತ್ತು. ಆದರೆ 2013ರ ಶುರು ನಿಜಕ್ಕೂ ನಮಗೆ ಸಂತಸ ತಂದಿದೆ. ಇದಕ್ಕೆ ಕಾರಣ–ಸೂರಜ್ ಕುಂಡ್ ಮೇಳದಲ್ಲಿ ಈ ಸಲದ ಪ್ರಧಾನ ಪಾತ್ರ ನಮ್ಮ ಕರ್ನಾಟಕದ್ದು. ನಾಡಿನ ಕಲೆ, ಸಂಸ್ಕೃತಿ ವೈಭವ ಅಂತಾರಾಷ್ಟ್ರೀಯ ಮಟ್ಟದಲ್ಲಿ ಅತ್ಯಂತ ಅದ್ಭುತ ರೀತಿಯಲ್ಲಿ ಅನಾವರಣಗೊಂಡಿದೆ. ಇದು ವ್ಯಾಪಕ ಪ್ರಶಂಸೆಗೆ ಪಾತ್ರವಾಗಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ. ಅಷ್ಟೇ ಅಲ್ಲ, ಈ ಬಾರಿಯ ಗಣರಾಜ್ಯೋತ್ಸವ ಪೆರೇಡ್‌ನಲ್ಲಿ ಕಿನ್ನಾಳ ಕಲೆಯನ್ನು ಪ್ರತಿಬಿಂಬಿಸುವ ಸ್ತಬ್ಧ ಚಿತ್ರ ಅತ್ಯಂತ ಸುಂದರ ರೀತಿಯಲ್ಲಿ ನಾಡನ್ನು ಪ್ರತಿನಿಧಿಸಿತ್ತು. ಪೆರೇಡ್‌ನಲ್ಲಿ ಶೌರ್ಯ ಪ್ರಶಸ್ತಿ ಪಡೆದ ನಮ್ಮ ಕೊಡಗಿನ ವೀರ ಬಾಲಕ ಸೊಹೇಲ್ ಪಾಲ್ಗೊಂಡಿದ್ದ. ಇದಕ್ಕಾಗಿ ಶ್ರಮಿಸಿದ ಕರ್ನಾಟಕ ಸರ್ಕಾರ, ಪ್ರವಾಸೋದ್ಯಮ ಇಲಾಖೆ, ವಾರ್ತಾ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧಿಕಾರಿ ವರ್ಗ ಹಾಗೂ ನಮ್ಮ ರಾಜ್ಯದ ಎಲ್ಲ ಕುಶಲ ಕರ್ಮಿಗಳಿಗೆ, ಕಲಾವಿದರಿಗೆ ಹೊರನಾಡ ಕನ್ನಡಿಗರ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು.

ಇವೆಲ್ಲ ಸಂತಸಗಳ ನಡುವೆ ನಮ್ಮ ನಾಡಿನ ಸೋದರ ಭಾಷೆಯಾದ ಕರಾವಳಿಯ ತುಳು ಭಾಷೆಯನ್ನು ಎಂಟನೇ ಪರಿಚ್ಛೇದಕ್ಕೆ ಸೇರಿಸಲು ಒತ್ತಾಯಿಸುವ ಸಲುವಾಗಿ ಇದೇ ಫೆಬ್ರವರಿ 24ರಂದು ಬೃಹತ್ 'ದೆಹಲಿ ತುಳು ಸಿರಿ' ಸಮಾವೇಶವನ್ನು ಆಯೋಜಿಸಲಾಗಿದೆ. ಇದಕ್ಕಾಗಿ ಈ ಬಾರಿ ಅತ್ಯಂತ ಜವಾಬ್ದಾರಿಯುತ ಗಂಭೀರ ಪ್ರಯತ್ನ ಮಾಡಲಾಗುತ್ತಿದೆ. ದೀರ್ಘಕಾಲದಿಂದ ನೆನೆಗುದಿಗೆ ಬಿದ್ದಿರುವ ಈ ಹೋರಾಟಕ್ಕೆ ಯಶಸ್ಸು ಸಿಗಲಿ, ಕನ್ನಡ ಲಿಪಿಯುಳ್ಳ ಸುದೀರ್ಘ ಇತಿಹಾಸವುಳ್ಳ ತುಳು ಭಾಷೆ ಎಂಟನೇ ಪರಿಚ್ಛೇದಕ್ಕೆ ಸೇರ್ಪಡೆಯಾಗಲಿ ಎಂಬುದು ನಮ್ಮ ಕಳಕಳಿಯ ಬೇಡಿಕೆ.

❑ ಉಷಾ ಭರತಾದ್ರಿ

ಪ್ರಧಾನ ಸಂಪಾದಕರು
ಉಷಾ ಭರತಾದ್ರಿ

ಸಂಪಾದಕ ಮಂಡಳಿ
ಚೆನ್ನು ಎಸ್. ಮಠದ
ರೇಣುಕಾ ಎಸ್. ನಿಡಗುಂದಿ
ಸಂತೋಷ್ ಕುಮಾರ್ ಉಪಾಧ್ಯಾಯ

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷರು
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಉಷಾ ಭರತಾದ್ರಿ
ಬಿ.ಕೆ. ಬಸವರಾಜು

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಖಜಾಂಚಿ
ಕೆ.ಆರ್. ರಾಮಮೂರ್ತಿ

ಜಂಟಿ ಕಾರ್ಯದರ್ಶಿಗಳು
ಎನ್.ಆರ್. ಶ್ರೀನಾಥ್
ರೇಣುಕಾ ಎಸ್. ನಿಡಗುಂದಿ

ಸಮಿತಿ ಸದಸ್ಯರು
ಆಂಜನಿ ಗೌಡ
ಎಸ್.ಸಿ. ಹೇಮಲತ
ಟಿ.ಎಂ. ಮೈಲಾರಪ್ಪ
ಪಿ.ಸಿ. ಶ್ರೀನಿವಾಸ
ಸಿ.ಆರ್. ಶ್ರೀನಿವಾಸ
ಜಿ.ಬಿ. ಹೆಗಡಿ
ಆನಂದ ಈಶ್ವರಪ್ಪ ಮುರಗೋಡ
ಬಿ. ನಾರಾಯಣ
ಆರ್. ರೇಣುಕುಮಾರ್
ಎಸ್. ಕೃಷ್ಣ ಭಟ್
ಶಶಿಕಾಂತ್ ಪಾಟೀಲ್

ಮುಖಪುಟ ಚಿತ್ರ: ಬಸ್ತಿ ದಿನೇಶ್ ಶೆಣೈ

**DELHI KARNATAKA SANGHA**
Rao Tularam Marg, Sector-12, R K Puram,
New Delhi-110022.
Phone: 011-26109615. 011-65643615
email:dksangha@gmail.com
website : www.delhikarnatakasangha.com

# ದೆಹಲಿಯ ಚಳಿಯ ಕಥೆ

ಹವಾಮಾನದ ಕುರಿತಾಗಿ ಪತ್ರಿಕೆಗಳಲ್ಲಿ, ಟಿವಿಯ ಪರದೆಗಳ ಮೇಲೆ ಹಸಿಬಿಸಿ ಸುದ್ದಿಗಳು ವಿಶೇಷವಾಗಿ ಬರುವುದು ಕಳೆದ ಹಲವಾರು ವರ್ಷಗಳಿಂದ ನಮಗೆಲ್ಲಾ ಪರಿಚಿತವಾಗಿದೆ. ಅದಕ್ಕಾಗಿಯೇ ನಾವೆಲ್ಲ ಕಾಯುತ್ತಿರುವಂತೆ ಈ ಸುದ್ದಿಗಳು ಮೂಡಿ ಬರುತ್ತಿರುತ್ತವೆ. ಉದಾಹರಣೆಗೆ ನೋಡಿ. 'ಕಳೆದ ಐವತ್ತು ವರ್ಷಗಳಲ್ಲಿ ಈ ಬಗೆಯ ಚಳಿ ದೆಹಲಿಯಲ್ಲಿ ಬಿದ್ದಿದ್ದು ಇದೇ ಮೊದಲ ಬಾರಿಗೆ'...ನಿನ್ನೆ ಈ ಚಳಿಗಾಲದ ತಿಂಗಳುಗಳ ಅತ್ಯಂತ ಚಳಿಯ ದಿನ'...ಬೇಸಿಗೆಯ ಅತ್ಯಂತ ಬೇಗೆಯ ದಿನ.'...ಎಂದೆಲ್ಲಾ ಪತ್ರಿಕೆಯಲ್ಲಿ ಓದಿ ಬಿಟ್ಟರೆ ನಮಗೂ ಒಂದು ಸಂತಸ. ಯಾವುದೋ ಅದ್ಭುತವಾದದ್ದು, ಯಾರಿಗೂ ಕಳೆದ ಐವತ್ತು ವರ್ಷಗಳಲ್ಲಿ ಆಗದಿದ್ದು ನಮಗೆ ಆಗುತ್ತಿದೆ ಎಂಬ ಹೆಗ್ಗಳಿಕೆಯ ಭಾವ ನಮ್ಮನ್ನು ಆವರಿಸುವುದು ಸಹಜ. ಯಾವುದೊ ಚರಿತ್ರಾರ್ಹ ಘಟನೆಯಲ್ಲಿ ನಾವು ಪಾಲುಗಾರರಾಗುತ್ತಿದ್ದೇವೆ ಎಂದುಕೊಂಡು ಅದೇ ದೊಡ್ಡ ಚರ್ಚೆಯ ವಿಷಯವಾಗಿ ಬಿಡುತ್ತದೆ. ಅದರಲ್ಲೂ ನಾವು ದೆಹಲಿಗರು ಹಾಗೂ ಕನ್ನಡಿಗರು ತೀರಾ ಸಾಹಸದಿಂದ ದೆಹಲಿಯ, ಅದರಲ್ಲೂ ಉತ್ತರ ಭಾರತದ, ಹವಾಮಾನದ ವೈರುಧ್ಯಗಳ ನಡುವೆ ಬದುಕಲು ಕಲಿತಿದ್ದೇವೆ ಎಂಬುದು ಸಹ ನಮ್ಮನ್ನು ದಕ್ಷಿಣದವರಿಗಿಂತ ವಿಶಿಷ್ಟ ವ್ಯಕ್ತಿಗಳನ್ನಾಗಿ ಮಾಡಿಬಿಡುತ್ತದೆ.

ಅತ್ತ ದೂರದ ಊರಿನ ಜನ, ಟಿವಿಯಲ್ಲಿ, ಪತ್ರಿಕೆಯಲ್ಲಿ, ಬಂದ ಈ ಸುದ್ದಿಯನ್ನು ಓದಿಕೊಂಡು ನಮ್ಮನ್ನು ಅತಿಮಾನವರಂತೆ ಕಾಣುವುದು ನಮಗೆ ಒಂದು ಬಗೆಯ ಖುಷಿಯನ್ನು ನೀಡುತ್ತದೆ. 'ಈ ಚಳಿಯಲ್ಲಿ...ಆ ಬೇಸಿಗೆಯ ಬೇಗೆಯಲ್ಲಿ ಹೇಗೆ ಇರುತ್ತಿರಪ್ಪ' ಎಂದು ಊರಿನವರು  ಮಾರ್ಮಿಕವಾಗಿ ಕೇಳುವಾಗ ನಮಗೂ ರೋಮಾಂಚನ. ಹಾಗೆಂದು ಊರ ಕಡೆಯಿಂದ ಪ್ರವಾಸಕ್ಕೊ, ಇನ್ನಾವುದೊ ಕೆಲಸಕ್ಕೆ ಬಂದವರು ಡಿಸೆಂಬರ್ ತಿಂಗಳಿನಲ್ಲಿ 'ಚಳಿಯೇ ಇಲ್ಲವಲ್ಲ ಮಾರಾಯರೇ' ಎಂದು ಉಲಿಯುತ್ತ ಬರಿ ಅಂಗಿ–ಬನಿಯನ್ನು, ತೋಳಿಲ್ಲದ ಸ್ವೆಟರ್‌ಗಳನ್ನು ಹಾಕಿಕೊಂಡು ಮಸ್ತಾಗಿ ದೆಹಲಿಯಲ್ಲಿ ಓಡಾಡಿದರೆ ನಮಗೂ, ಈ ದೆಹಲಿಯ ಹವಮಾನದ ಹೆಗ್ಗಳಿಕೆಯ ಮೇಲೆ ಬರೆ ಎಳೆದಂತಾಗುತ್ತದೆ. 'ನೋಡಿ ಹಾಗೆಲ್ಲ ಚಳಿಯಿಲ್ಲ ಎಂದು ಬರಿ ಮೈಯಲ್ಲಿ ಓಡಾಡಬೇಡಿರಪ್ಪ. ಈ ಬಗೆಯ ಚಳಿ ನಾಲ್ಕು ದಿನ ನಿಮ್ಮನ್ನು ಮಲಗಿಸಿದರೆ ಚಳಿಯ ಪ್ರಕೋಪ ತಮಗೆಲ್ಲ ಗೊತ್ತಾದೀತು' ಎಂಬ ಎಚ್ಚರಿಕೆ ಗಂಟೆಯನ್ನು ಬಾರಿಸುವವರೂ ನಾವೇ.

ಹವಾಮಾನದ ವೈಪರೀತ್ಯ ದಿನನಿತ್ಯದ ಜನಜೀವನವನ್ನು ಅಸ್ತವ್ಯಸ್ತಗೊಳಿಸುವುದರ ಬಗ್ಗೆ ಎರಡು ಮಾತಿಲ್ಲ. ನಮಗೆಲ್ಲ ಅನುಭವವಿರುವಂತೆ ನವೆಂಬರ್ ತಿಂಗಳಿನ ತನಕ ದೆಹಲಿಯ 'ವೆದರ್' ಹೆಚ್ಚುಕಡಿಮೆ ಚೆನ್ನಾಗಿಯೇ ಇರುತ್ತದೆ. ಬಿಸಿಲಿನ ಝಳದಲ್ಲಿ ತಂಪಿನ ಲೇಪ ಎಂದರೆ ತಪ್ಪಿಲ್ಲ. ಬಿಸಿಲಿನಲ್ಲಿ ಕುಳಿತರೆ ಒಂದು ಬಗೆಯ ಮತ್ತು ಮನವನ್ನಾವರಿಸುತ್ತದೆ. ಡಿಸೆಂಬರ್‌ನ ಕೊನೆ ತಲುಪುತ್ತಿದ್ದ ಹಾಗೆಯೆ ಕೊರೆಯುವ ಚಳಿ ಪ್ರಾರಂಭವಾದರೆ ಏನು ಮಾಡಬೇಕೆಂದು ತೋರುವುದಿಲ್ಲ. ಈ ಚಳಿಯ ಝಳಕ್ಕಿಂತ ಬೇಸಿಗೆಯ ಝಳವೇ ಲೇಸು ಎಂದು ಅನಿಸುವಷ್ಟರ ಮಟ್ಟಿಗೆ ಈ ಚಳಿಯ ಪ್ರಕೋಪ ಎಲ್ಲವನ್ನೂ ಆವರಿಸುತ್ತದೆ. ಹಾಸಿಗೆಯೊಳಕ್ಕೆ, ರಝಾಯಿಯೊಳಕ್ಕೆ ತೂರಿಕೊಂಡರೂ ಈ ಚಳಿ ಅಷ್ಟು ಸುಲಭವಾಗಿ ಹೋಗದು.

ಇಡೀ ಪ್ರಪಂಚವನ್ನೆ ತಣ್ಣನೆಯ ಬರ್ಫ್ ಆವರಿಸಿದಂತೆ ಆಕಾಶದಲ್ಲಿ ಕಾಣುವ ಸೂರ್ಯ, ಅವನಿಂದ ಹೊಮ್ಮಿ ಬರುವ ಕಿರಣಗಳಲ್ಲಿ ಲವಲೇಶದಷ್ಟೂ ಬಿಸಿಯೆಂಬುದೇ ಇಲ್ಲ. ದಿನದ ಸೂರ್ಯ ಒಂದು ಬಗೆಯಲ್ಲಿ ಚಂದ್ರನಂತಾಗಿ ಬಿಡುತ್ತಾನೆ. ಅವನಿಂದ ಹೊರಹೊಮ್ಮುವ ಕಿರಣಗಳಲ್ಲಿ ಚಳಿಗಾಳಿಯೆ ತುಂಬಿರುತ್ತದೆ. ಬಾನಿನಂಗಳದಲ್ಲಿ ಬಿಳಿ–ಕೆಂಪು ಮುದ್ದೆಯಾಗಿ ಅವನು ತೇಲುತ್ತಿರುತ್ತಾನೆ. ಅವನಿಗೂ ಚಳಿ ಹೆಚ್ಚಾಗಿ ಎಷ್ಟು ಬೇಗ ತಾನು ದಿಗಂತದೊಳಕ್ಕೆ ಸೇರಿಕೊಳ್ಳುವೇನೊ ಎಂಬ ಕಾತುರದಲ್ಲಿ ಇದ್ದಂತೆ ತೋರುತ್ತಾನೆ. ಒಮ್ಮೊಮ್ಮೆಯಂತೂ ಮಂಜಿನ ತೆರೆಯಲ್ಲಿ ಸಿಲುಕಿಕೊಂಡವನು ಹೊರಬರಲಾಗದೆ ಆತ ಚಡಪಡಿಸುವುದನ್ನು ಕಂಡಾಗ ನಮ್ಮ ಪಾಡಿಗಿಂತ ಅವನ ಪಾಡೇ ತೀರಾ ದು:ಖದಾಯಕವೆಂದು ಅನಿಸುತ್ತದೆ. ಹೋಗಲಿ, ಅವನಿಗೂ ಹತ್ತಾರು ದಿನಗಳ ರಜೆಯನ್ನು ಕೊಟ್ಟುಬಿಟ್ಟರೆ ಬರುವ ವರ್ಷದಲ್ಲಿ ಸಾಕಷ್ಟು ಬಲವಂತನಾಗಿ ಆತ ಹೊರಹೊಮ್ಮಬಹುದೆಂದು ನಾನು ಎಷ್ಟೋ ಬಾರಿ ಅಂದುಕೊಳ್ಳುವುದು ಸಾಕಷ್ಟು ಬಾಲಿಶವಾಗಿ ಕಾಣಬಹುದು. ಏನೇ ಆದರೂ ಅವರವರ ಕನಸುಗಳು ಅವರದ್ದೇ ತಾನೆ. ಹೊಸವರ್ಷದ ಹೊಸ್ತಿಲಲ್ಲಿ ಕಾಲಿಡುವ ಮುನ್ನ ಈ ಬಗೆಯ ಸೂರ್ಯನ ತಳಮಳ ಪ್ರತಿವರ್ಷ ಇದ್ದದ್ದೇ. ಉತ್ತರದಲ್ಲಿ ಹಿಮ, ಮಳೆ ಹಾಗೂ ಚಳಿಯ ಪ್ರಕೋಪ ಜನವರಿ ತಿಂಗಳ ಕೊನೆಯ ಹೊತ್ತಿಗೆ ಒಂದು ಹದಕ್ಕೆ ಬರುವಂತಾಗುತ್ತದೆ. ಚಳಿಯೊಳಗಿನ ನವಿರಾದ ಕುಟುಕು ನಿಧಾನವಾಗಿ ತನ್ನ ಮೊನೆಯನ್ನು ಕಳೆದುಕೊಳ್ಳುವ ಪರಿಯನ್ನು ಕಂಡೇ ಅನಂದಿಸಬೇಕು. ಇಲ್ಲಿ ಬರೆದು, ಮಾತಿನಲ್ಲಿ ಹೇಳಿಕೊಂಡು ಪ್ರಯೋಜನವಿಲ್ಲ.

ಜನವರಿಯನ್ನು ದಾಟಿ ನಾವು ಈಗ ಫೆಬ್ರವರಿಯಲ್ಲಿ ಕಾಲಿಟ್ಟಿದ್ದೇವೆ. ಇದರೊಂದಿಗೆ ದೆಹಲಿಯ, ಅದರಲ್ಲೂ ಉತ್ತರ ಭಾರತದ ಚಳಿ, ಈಗ ಒಂದು ಹದಕ್ಕೆ ಬಂದಂತಿದೆ. ಇದನ್ನು ಬರೆಯುವ ಹೊತ್ತಿಗೆ ಈ ನನ್ನ ಮಾತನ್ನು ಸುಳ್ಳು ಮಾಡುವುದಕ್ಕೋಸ್ಕರವೆಂಬಂತೆ ಉತ್ತರಭಾರತದಲ್ಲಿ ಮತ್ತೆ ಮಳೆ–ಗಾಳಿ ಪ್ರಾರಂಭವಾಗಿದೆ. ಹಿಮಾಲಯದಲ್ಲಿ, ಅದರ ಆಸುಪಾಸಿನಲ್ಲಿ, ಎಡಬಿಡದ ಹಿಮಪಾತ ಜನಜೀವನವನ್ನೇ ಅಸ್ತವ್ಯಸ್ತಗೊಳಿಸಿದೆ. ಮನಾಲಿ, ಸಿಮ್ಲಾ, ನೈನಿತಾಲ...ಈ ಎಲ್ಲ ಜಾಗೆಗಳು ನಮಗೆಲ್ಲರಿಗೂ ತೀರಾ ಪರಿಚಿತ. ಕೆಲೊಂಗ್, ರಿಕೊಂಗ್ ಪೊಯ್, ಕಾಜಾ, ಕಲ್ಪಾ...ಈ ಕೆಲ ಜಾಗೆಗಳ ವಿಚಾರ ಸಾಕಷ್ಟು ಜನರಿಗೆ ಗೊತ್ತಿರಲಿಕ್ಕಿಲ್ಲ. ಪತ್ರಿಕೆಯಲ್ಲಿ ಓದಿದರೂ ಗಮನಿಸುವಷ್ಟು ವ್ಯವಧಾನವು ನಮಗೆ ಇರುವುದಿಲ್ಲ. ಏನೇ ಇರಲಿ. ನಾವೆಲ್ಲ ಹಿಮಾಚಲ ಪ್ರದೇಶದ ಕಿನೊರ್ ಹಾಗೂ ಲಾಹೊಲ್ ಮತ್ತು  ಸ್ಪಿತಿ ಎಂಬ ಎರಡು ಜಿಲ್ಲೆಗಳ ಹೆಸರನ್ನಾದರೂ ಕೇಳಿರುತ್ತೇವೆ. ಕಿನೊರ್ ನ್ ಸೇಬು ಹಣ್ಣು ಜಗತ್ಪ್ರಸಿದ್ಧಿಯಾಗಿದೆ. ರಿಕೊಂಗ್ ಪೊಯ್ ಕಿನೊರ್ ಜಿಲ್ಲೆಯ ಮುಖ್ಯ ಜಿಲ್ಲಾ ಕೇಂದ್ರ. ರಿಕೊಂಗ್ ಪೊಯ್ ನಿಂದ ಇನ್ನೊ ಸ್ವಲ್ಪ ಮೇಲೆ ಸುಂದರವಾದ ಕಲ್ಪಾ ಎಂಬ ಜಾಗೆಯಿದೆ. ಸಿಮ್ಲಾದಿಂದ ಸುಮಾರು ಇನ್ನೂರು ಕಿಲೋಮೀಟರಗಳಷ್ಟು ದೂರದಲ್ಲಿ ಈ ಜಾಗೆಗಳಿವೆ. ಕಾಜಾ ಎಂಬ ಜಾಗೆ ಇನ್ನೂ ಒಳಕ್ಕೆ, ಅಂದರೆ ಚೀನಾದ ಗಡಿಯ ಹತ್ತಿರ, ಟಿಬೆಟ್ ಬಳಿ. ಇಲ್ಲಿ ಚಳಿಗಾಲದಲ್ಲಿ ಹಿಮ ತುಂಬಿರುತ್ತದೆ. ಕೆಲೊಂಗ್ ಕೂಡಾ ಅಷ್ಟೆ. ಲಾಹೊಲ್ ಜಿಲ್ಲೆಯ ಜಿಲ್ಲಾ ಕೇಂದ್ರವಿದು. ಮನಾಲಿಯಿಂದ, ರೊಟಂಗ್ ಪಾಸ್ ನ್ನು ಹಾದು ಇಲ್ಲಿಗೆ ಬರಬೇಕು. ಕೆಲೊಂಗ್ ಮೂಲಕ ಲೇಹ್ ಕಡೆ ಹೋಗಬಹುದು.

ಬೇಸಿಗೆಯ ನಾಲ್ಕಾರು ತಿಂಗಳು ಮಾತ್ರ ನಾವೆಲ್ಲ ಕೆಲೊಂಗ್, ಕಾಜಾದ ಕಡೆ ಹೋಗಬಹುದು. ಚಳಿಗಾಲದ ಆರೆಂಟು ತಿಂಗಳು ಈ ಎಲ್ಲ ಜಾಗೆಗಳು ಹಿಮದಿಂದ ಆವೃತವಾಗಿ ಯಾರೂ ಹೋಗಲಾರದ ಸ್ಥಿತಿಯಲ್ಲಿರುತ್ತವೆ. ಈ ಚಳಿಗಾಲದ ಆರೆಂಟು ತಿಂಗಳು ಇಲ್ಲಿ ಹಿಮದಂತೆ ಜನಜೀವನವೂ ಸ್ತಬ್ಧ. ಜಿಲ್ಲಾ ಕೇಂದ್ರವಾಗಿರುವುದರಿಂದ ಸರಕಾರದ ಚುಕ್ಕಾಣಿ ಹಿಡಿದವರು ಅಲ್ಲಿರಬೇಕಾಗುತ್ತದೆ. ಈ ಎಲ್ಲ ಜಾಗೆಗಳಲ್ಲಿ ಉಳಿಯುವ ಸರಕಾರಿ ಅಧಿಕಾರಿಗಳಿಗೆ ಆರೆಂಟು ತಿಂಗಳ ಸಂಬಳ, ಬೇಕಾದ ದವಸಧಾನ್ಯಗಳನ್ನು ಸರಬರಾಜು ಮಾಡಿಡಲಾಗುತ್ತದೆ. ಈ ಅಧಿಕಾರಿಗಳು ಅಲ್ಲಿರಬೇಕಷ್ಟೆ. ಅಲ್ಲಿದ್ದು, ಎಡಬಿಡದೆ ಬೀಳುವ ಹಿಮದ ಝಳವನ್ನು ಸಹಿಸಿಕೊಂಡು ಇರುವುದಾದರೂ ಹೇಗೆ? 'ಮಾಡುವುದಾದರೂ ಏನು'? ಈ ಜಾಗೆಗಳಲ್ಲಿರುವ ಹಲವಾರು ಭೌದ್ಧ ಮಠಗಳು ಸಾವಿರಾರು ವರ್ಷಗಳಷ್ಟು ಹಳೆಯವು. ಅವುಗಳಲ್ಲಿ ಭೌದ್ಧ ಭಿಕ್ಷುಗಳು ಮಳೆ–ಚಳಿಯೆನ್ನದೆ ತಮ್ಮ ಧ್ಯಾನ ಹಾಗು ಪೂಜೆಗಳನ್ನು ಮಾಡಿಕೊಂಡು, ಹಳೆಯ ಕಡತಗಳನ್ನು ಓದಿಕೊಂಡು, ಈ ಮಠಗಳಲ್ಲಿರುತ್ತಾರೆ. ಹೊರಗಡೆ ವಿಸ್ತಾರವಾಗಿ ಹರಡಿದ ಹಿಮ. ಚಳಿಯೆಂಬುದಕ್ಕೆ ಅರ್ಥವೇ ಇಲ್ಲ. ಗೂಡಿನಂತಹ ಮನೆಯೊಳಕ್ಕೆ, ಒಂಟಿಯಾಗಿ ಬದುಕಿನ ಅರ್ಥವನ್ನು ಕಂಡು ಹಿಡಿಯಲು ಕುಳಿತವರು. ಮನಸ್ಸನ್ನು ಹಿಮದಂತೆ ಗಟ್ಟಿಯಾಗಿ ಹಿಡಿದು ಕುಳಿತವರು.

ಹಿಮಾಲಯದಿಂದ ಗಾಳಿಯಲ್ಲಿ ಬೀಸಿ ಬರುವ ಈ ಚಳಿಗೆ ನೂರು ಬಗೆ...ನೂರು ಅರ್ಥ... ಬೇಸಿಗೆಯಲ್ಲಿ ರಾಜಸ್ಥಾನ ಹಾಗೂ ಗುಜರಾತ್ ಕಡೆಯಿಂದ ಬೀಸಿ ಬರುವ ಬಿಸಿಗಾಳಿ ಇನ್ನೊಂದು ಬಗೆ...ಅದಕ್ಕೆ ಇನ್ನೊಂದು ಅರ್ಥ. ಒಟ್ಟಾರೆ ದೆಹಲಿಗೆ ಅದರದ್ದೇ ಆದ ಸ್ವಂತ ಹವಾಮಾನವಿಲ್ಲ. ಹಿಮಾಲಯದಲ್ಲಿ ಹಿಮ ಬಿದ್ದರೆ, ದೆಹಲಿಗೆ ರಝಾಯಿ ಹೊದಿಸಬೇಕು. ಆ ಕಡೆಯಿಂದ ಈ ಕಡೆ...ಈ ಕಡೆಯಿಂದ ಆ ಕಡೆ...ಇದೇ ದೆಹಲಿ.

❑ **ಡಾ। ವೆಂಕಟಾಚಲ ಹೆಗಡೆ**



ಪರಮಪೂಜ್ಯ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು ದೈವಾಧೀನರಾಗಿದ್ದಾರೆ. ಇದು ಕರ್ನಾಟಕಕ್ಕೆ ಹಾಗೂ ದೇಶಕ್ಕೆ ತುಂಬಲಾರದ ನಷ್ಟವಾಗಿದೆ. ಮನುಕುಲದ ಕಲ್ಯಾಣಕ್ಕಾಗಿಯೇ ತಮ್ಮ ಬದುಕನ್ನು ಮೀಸಲಾಗಿಟ್ಟ ಶ್ರೀಗಳವರು ಸರ್ವರೂ ಸಮಾಜದಲ್ಲಿ ಒಂದಾಗಿ ಬಾಳಬೇಕು ಎನ್ನುವ ಮೂಲ ಧ್ಯೇಯವನ್ನು ಹೊಂದಿದ್ದರು. ಜಾನಪದ ಕಲೆ ಹಾಗೂ ಸಾಹಿತ್ಯದ ಆರಾಧಕರಾಗಿದ್ದ ಶ್ರೀಗಳವರು ಕಲಾವಿದರನ್ನು ಸನ್ಮಾನಿಸಿ, ಗೌರವಿಸಿ ಪ್ರೋತ್ಸಾಹಿಸುತ್ತಿದ್ದರು. ಗೋವುಗಳ ರಕ್ಷಣೆಗಾಗಿ ಗೋಶಾಲೆಗಳನ್ನು ನಿರ್ಮಿಸಿದ ಶ್ರೀಗಳವರು ಗೋಹತ್ಯೆಯನ್ನು ಖಂಡಿಸಿದ್ದರು. 5 ಕೋಟಿ ಸಸಿಗಳನ್ನು ನೆಟ್ಟು ಹಸಿರು ಕ್ರಾಂತಿಗೆ ನಾಂದಿ ಹಾಡಿದವರು. ಶ್ರೀಕ್ಷೇತ್ರ ಕೇವಲ ಮಠವಾಗಿ ಉಳಿದಿಲ್ಲ, ಹಿಂದುಳಿದ ವರ್ಗದವರನ್ನು ಹಾಗೂ ಹಳ್ಳಿಗಾಡಿನಿಂದ ಬರುವ ಬಡ ಮಕ್ಕಳಿಗೆ ವಿದ್ಯಾಭ್ಯಾಸವನ್ನು ನೀಡಿದವರು ಶ್ರೀಗಳವರು. ಇವರ ಕೆಲಸ–ಕಾರ್ಯಗಳನ್ನು ಗುರುತಿಸಿ ವಿದೇಶದಿಂದ ಡಾಕ್ಟರೇಟ್ ಗೌರವ ದೊರೆತಿದೆ. ಕೇಂದ್ರ ಸರ್ಕಾರ ಪದ್ಮಭೂಷಣ ಪ್ರಶಸ್ತಿ ನೀಡಿ ಗೌರವಿಸಿದೆ. ಧಾರ್ಮಿಕ ಕೆಲಸಗಳನ್ನು ಮಾಡುವುದರ ಮೂಲಕ ಅನ್ನ, ಅಕ್ಷರ ದಾಸ ಯೋಗಿ ಆಗುವ ಮೂಲಕ ಕರ್ಮಯೋಗಿ ಆದವರು ಶ್ರೀಗಳು. ಅವರು ನಮ್ಮ ನಾಡಿನಲ್ಲೇ ಮತ್ತೊಮ್ಮೆ ಹುಟ್ಟಿ ಬರಲೆಂದು ಆಶಿಸೋಣ. ಶ್ರೀಗಳವರು ದೆಹಲಿ ಕರ್ನಾಟಕ ಸಂಘದ ಸಾಂಸ್ಕೃತಿಕ ಸಮುಚ್ಚಯದ ಶಂಕುಸ್ಥಾಪನೆಯನ್ನು ನೆರವೇರಿಸಿದ್ದನ್ನು ಇಲ್ಲಿ ಸ್ಮರಿಸುತ್ತಿದ್ದೇನೆ. ಇವರಿಗೆ ದೆಹಲಿ ಕರ್ನಾಟಕ ಸಂಘ ಹಾಗೂ ಹೊರನಾಡ ಕನ್ನಡಿಗರ ಪರವಾಗಿ ಶ್ರದ್ಧಾಂಜಲಿಯನ್ನು ಅರ್ಪಿಸೋಣ.

ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ ಪ್ರಿಯ ಶಿಷ್ಯರಾದ ಶ್ರೀ ನಿರ್ಮಲಾನಂದ ಸ್ವಾಮೀಜಿಯವರು ನೂತನ ಪೀಠಾಧಿಕಾರಿಗಳಾಗಿ ಮಠದ ಜವಾಬ್ದಾರಿಯನ್ನು ವಹಿಸಿಕೊಂಡಿದ್ದಾರೆ. ನೂತನ ಶ್ರೀಗಳಿಗೆ ದೆಹಲಿ ಕರ್ನಾಟಕ ಸಂಘದ ಹಾಗೂ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು.

ಪಂಚ ದ್ರಾವಿಡ ಭಾಷೆಗಳಲ್ಲೊಂದಾದ ತುಳು ಭಾಷೆಯನ್ನು ಭಾರತದ ಸಂವಿಧಾನದ 8ನೇ ಪರಿಚ್ಛೇದದಲ್ಲಿ ಸೇರಿಸುವ ಬಗ್ಗೆ 'ದೆಹಲಿ ತುಳು ಸಿರಿ' ಎನ್ನುವ ಸಾಹಿತ್ಯ ಹಾಗೂ ಸಾಂಸ್ಕೃತಿಕ ಉತ್ಸವ ದೆಹಲಿ ಕನ್ನಡ ಶಾಲೆಯ ಆವರಣದಲ್ಲಿ ಫೆಬ್ರವರಿ 24ರಂದು ನಡೆಯಲಿದೆ. ಕರ್ನಾಟಕದ ಕರಾವಳಿಯ ತುಳು ಭಾಷೆಯ ಕುರಿತು ಜರಗಲಿರುವ ಈ ಕಾರ್ಯಕ್ರಮ ಕನ್ನಡ ಭಾಷೆಯಲ್ಲಿಯೇ ನಡೆಯಲಿದೆ. ಕಾರ್ಯಕ್ರಮದಲ್ಲಿ ಪ್ರಸಿದ್ಧ ಕನ್ನಡ ಚಲನಚಿತ್ರದ ನಟ–ನಟಿಯರು, ವಿದ್ವಾಂಸರುಗಳು, ಕೇಂದ್ರ ಮತ್ತು ರಾಜ್ಯದ ಮಂತ್ರಿಗಳು, ರಾಜಕಾರಣಿಗಳು ಭಾಗವಹಿಸಲಿರುವ ಈ ಕಾರ್ಯಕ್ರಮವನ್ನು ಸಮಸ್ತ ಕನ್ನಡಿಗರು ಪ್ರೋತ್ಸಾಹಿಸಬೇಕು, ದಯವಿಟ್ಟು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಿ.

ಈ ಬಾರಿ ಕರ್ನಾಟಕಕ್ಕೆ 7 ಪದ್ಮಪ್ರಶಸ್ತಿಗಳು ಬಂದಿರುವುದು ಕನ್ನಡಿಗರಿಗೆ ಹೆಮ್ಮೆಯ ವಿಷಯ. ಕರ್ನಾಟಕಕ್ಕೆ ಹೆಮ್ಮೆಯ ಗರಿಯನ್ನು ಏರಿಸಿದ ಮಹನೀಯರುಗಳಿಗೆ ದೆಹಲಿ ಕರ್ನಾಟಕ ಸಂಘದ ಹಾಗೂ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು.

ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿ ಹಾಗೂ ವಾರ್ಷಿಕ ಆಟೋಟ ಸ್ಪರ್ಧೆಗಳನ್ನು ಮಾರ್ಚ್ ತಿಂಗಳಿನಲ್ಲಿ ಆಯೋಜಿಸಲಾಗುವುದು. ಈಗಾಗಲೇ ಸಂಘದ ಚುನಾವಣೆಗೆ ಪೂರ್ವಭಾವಿ ಸಿದ್ಧತೆಗಳು ನಡೆಯುತ್ತಿದ್ದು ಕಾರ್ಯಕಾರಿ ಸಮಿತಿಯು ಒಪ್ಪಿಗೆ ನೀಡಿದ ಕೂಡಲೇ ಪ್ರಕ್ರಿಯೆಯನ್ನು ಆರಂಭಿಸಲಾಗುವುದು.

❑ ಸಿ.ಎಂ.ನಾಗರಾಜ

**ರಾಜೇಂದ್ರ ನಗರ ಕನ್ನಡ ಬಳಗದಲ್ಲಿ ಸಾಮೂಹಿಕ ಸತ್ಯನಾರಾಯಣ ಪೂಜೆ : ಭಾನುವಾರ ಮಾರ್ಚ್ 3, 2013ರಂದು ಬೆಳಿಗ್ಗೆ 10ಗಂಟೆಯಿಂದ ನ್ಯೂ ರಾಜೇಂದ್ರ ನಗರದ ಶ್ರೀ ಗೀತಾಮಂದಿರದಲ್ಲಿ ಶ್ರೀ ಸತ್ಯನಾರಾಯಣ ಪೂಜೆಯನ್ನು ಹಮ್ಮಿಕೊಳ್ಳಲಾಗಿದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ದೇವರ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ಅಧ್ಯಕ್ಷರು–ಅಶ್ವಥ್‌ನಾರಾಯಣ ಶೆಟ್ಟಿ, (9868904455) ಕಾರ್ಯದರ್ಶಿ–ರವೀಂದ್ರನಾಥ್ ಬಿ. (9868101880)**

ಕರ್ನಾಟಕ ಸರ್ಕಾರ
ವಾರ್ತಾ ಇಲಾಖೆ
ಕರ್ನಾಟಕ ವಾರ್ತಾ ಕೇಂದ್ರ, ನವದೆಹಲಿ
ಹಾಗೂ
ದೆಹಲಿ ಕರ್ನಾಟಕ ಸಂಘ, ನವದೆಹಲಿ
ಇವರ ಸಂಯುಕ್ತ ಆಶ್ರಯದಲ್ಲಿ

ಕನ್ನಡ ಚಲನಚಿತ್ರ ಪ್ರದರ್ಶನ

**ಸ್ಥಳ: ದೆಹಲಿ ಕರ್ನಾಟಕ ಸಂಘದ ಸಭಾಂಗಣ**
**ರಾವ್ ತುಲಾರಾಂ ಮಾರ್ಗ್, ಸೆಕ್ಟರ್–12, ಆರ್.ಕೆ. ಪುರಂ, ನವದೆಹಲಿ– 110022**




**ದಿನಾಂಕ : 17.02.2013ರ ಭಾನುವಾರ**
**ಸಂಜೆ : 4 ಘಂಟೆಗೆ**
ಉಪೇಂದ್ರ ಹಾಗೂ ನಯನ್‌ತಾರಾ ಅಭಿನಯದ

# ಸೂಪರ್

ನಿರ್ದೇಶನ : ಉಪೇಂದ್ರ

**ಬಿಜಾಪುರ ಜಿಲ್ಲಾ ಅವಲೋಕನ ಕುರಿತ**
**ಸಾಕ್ಷ್ಯ ಚಿತ್ರ**
**ನಿರ್ಮಾಣ : ವಾರ್ತಾ ಇಲಾಖೆ**

ನೀವೂ ಬನ್ನಿ, ನಿಮ್ಮ ಕುಟುಂಬದವರು ಮತ್ತು ಸ್ನೇಹಿತರನ್ನೂ ಕರೆತನ್ನಿ!
ಉಪ ನಿರ್ದೇಶಕರು, ಕರ್ನಾಟಕ ವಾರ್ತಾ ಕೇಂದ್ರ
ಕರ್ನಾಟಕ ಭವನ–2, ನಂ. 6. ಸರ್ದಾರ್ ಪಟೇಲ್ ಮಾರ್ಗ್, ಚಾಣಕ್ಯಪುರಿ, ನವದೆಹಲಿ– 110021.
ದೂರವಾಣಿ: 011–24102263, ಮೊಬೈಲ್: +91 99686 52139

# ನಾಡಪ್ರೇಮಿಗೆ ನುಡಿಹಬ್ಬದ ಅಗ್ರಪೀಠ

## ಬಿಜಾಪುರದಲ್ಲಿ ಫೆಬ್ರವರಿ 9ರಿಂದ 11ರವರೆಗೆ ನಡೆಯಲಿರುವ 79ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಕೋ.ಚೆನ್ನಬಸಪ್ಪ ಅವರ ಪರಿಚಯ...ನಿಮಗಾಗಿ



ನಮ್ಮ ಪತ್ರಿಕೆ ಯಾವಾಗಲೂ ಪ್ರಗತಿ ಮತ್ತು ಸುಧಾರಣೆಗಾಗಿಯೇ ಹೆಣಗುತ್ತದೆ. ಲಾಭಕೋರತನವನ್ನಾಗಲೀ, ಅನ್ಯಾಯವನ್ನಾಗಲೀ ಎಂದಿಗೂ ಸಹಿಸುವುದಿಲ್ಲ. ಎಲ್ಲ ಪಕ್ಷದ ಬಾಯಿಬಡುಕ ವಾಚಾಳಿ ರಾಜಕಾರಣಿಗಳನ್ನು ಜಗ್ಗಿ ಬರೆಯುತ್ತದೆ. ಯಾವ ಪಕ್ಷಕ್ಕೂ ಸೇರಲಾರೆವು. ಆದರೆ ವಿಶೇಷ ಸೌಲಭ್ಯ ಪಡೆದ ಜಾಲವನ್ನು, ದರೋಡಕೋರರನ್ನು ಯಾವಾಗಲೂ ವಿರೋಧಿಸುತ್ತವೆ...

ಈ ಆದರ್ಶಗಳಿಂದ 'ರೈತ' ದಾರಿ ತಪ್ಪಿದರೆ ನಮ್ಮ ಓದುಗರು ಸದಾ ಎಚ್ಚರಿಸುತ್ತಿರಬೇಕೆಂದು ನಮ್ಮ ಪ್ರಾರ್ಥನೆ.

ಇದು 79ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿಯೋಜಿತ ಅಧ್ಯಕ್ಷರಾದ ಕೋ.ಚೆನ್ನಬಸಪ್ಪ (ಕೋಚೆ) ಅವರು ತಾವು ಹದಿನಾಲ್ಕು ವರ್ಷ ಸಂಪಾದಕರಾಗಿ ಹೊರತಂದ 'ರೈತ' ವಾರ ಪತ್ರಿಕೆಯ 1950 ಏಪ್ರಿಲ್ 9ರ ಸಂಚಿಕೆಯಲ್ಲಿ ವ್ಯಕ್ತಪಡಿಸಿದ ಸಂಪಾದಕೀಯ ಧೋರಣೆ. ತಮ್ಮ ಬದುಕಿನುದ್ದಕ್ಕೂ ಅವರು ಇದೇ ಆದರ್ಶಗಳಿಗಾಗಿ ಶ್ರಮಿಸಿದವರು. ಜನಪರವಾಗಿ ತುಡಿಯುತ್ತಿದ್ದ, ಜನಜೀವನ ಸುಧಾರಣೆಗಾಗಿ ಸಾಹಿತ್ಯ ಶ್ರಮಿಸಬೇಕು ಎಂದು ಪ್ರತಿಪಾದಿಸುತ್ತಿದ್ದ ಕೋಚೆ ಅವರನ್ನು 91ರ ಮಾಗಿದ ವಯಸ್ಸಿನಲ್ಲಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಿದಾಗ ನಾಡಿನಾದ್ಯಂತ ಪ್ರಗತಿಪರ ಮನಸ್ಸುಗಳು ಸಂಭ್ರಮಿಸಿದವು. ಕವಿಯಾಗಿ ಸಾಹಿತ್ಯಕ್ಷೇತ್ರ ಪ್ರವೇಶಿಸಿದ ಕೋಚೆ ಕತೆ, ಕಾದಂಬರಿ, ನಾಟಕ, ಜೀವನ ಚರಿತ್ರೆ, ವಿಮರ್ಶೆ, ಪ್ರಬಂಧ, ಅನುವಾದ ಮತ್ತು ವಿಚಾರ ಸಾಹಿತ್ಯಗಳಲ್ಲಿ ಕೃಷಿ ನಡೆಸಿ ಸಾರ್ಥಕತೆಯನ್ನು ಪಡೆದವರು. ಪತ್ರಕರ್ತರಾಗಿ ಸಾರ್ವಜನಿಕ ಸೇವಾರಂಗ ಪ್ರವೇಶಿಸಿದ ಅವರು ನ್ಯಾಯವಾದಿಯಾಗಿ, ನ್ಯಾಯಾಧೀಶರಾಗಿ ಕರ್ತವ್ಯ ನಿರ್ವಹಿಸಿದವರು. ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿ ಸೆರೆವಾಸ ಅನುಭವಿಸಿದ ಹೋರಾಟಗಾರ ಕೋಚೆ, ನಂತರದ ಕರ್ನಾಟಕ ಏಕೀಕರಣ ಚಳವಳಿಯಲ್ಲಿಯೂ ಹೋರಾಟದ ಮುಂಚೂಣಿಯಲ್ಲಿದ್ದವರು. ನ್ಯಾಯಾಧೀಶರಾಗಿ ನಿವೃತ್ತಿ ಹೊಂದಿದ ನಂತರವೂ ನಾಡಿನ ಹಲವಾರು ಜನಪರ ಹೋರಾಟಗಳಲ್ಲಿ ತೊಡಗಿಸಿಕೊಂಡವರು.

### ಕೌಟಂಬಿಕ ಹಿನ್ನೆಲೆ

ಕೋ.ಚೆನ್ನಬಸಪ್ಪ (ಜನನ:1922, ಫೆಬ್ರುವರಿ 27) ಅವರ ಪೂರ್ವಿಕರಾದ ಕೋಣನ ವೀರಣ್ಣ ಮೈಸೂರು ಸಂಸ್ಥಾನದಿಂದ (ಶಿವಮೊಗ್ಗ ಕಡೆಯಿಂದ) ಬಳ್ಳಾರಿ ಜಿಲ್ಲೆಗೆ 19ನೆಯ ಶತಮಾನದ ಪೂರ್ವಾರ್ಧದಲ್ಲಿ ವಲಸೆ ಬಂದವರು. (ಕೋಣಗಳ ಮೇಲೆ ಹೇರನ್ನು ಸಾಗಿಸುತ್ತಿದ್ದ ವ್ಯಾಪಾರಿ ಕುಂಟುಂಬವಾದ್ದರಿಂದ ಕೋಣನ ಎಂಬುದು ಮನೆತನದ ಅಡ್ಡ ಹೆಸರಾಗಿ ಬಳಕೆಗೆ ಬಂದಿತು.) ಕೂಡ್ಲಿಗಿ ತಾಲ್ಲೂಕಿನ ಮಜರೆ ಗ್ರಾಮ ಕಾನಾಮಡುವು ಎಂಬಲ್ಲಿ ನೆಲೆ ನಿಂತರು. ವೀರಣ್ಣ–ಬಸಮ್ಮ ದಂಪತಿಯ ಹಿರಿಯ ಪುತ್ರರಾಗಿ ಜನಿಸಿದ ಕೋಚೆ ಅವರ ಬಾಲ್ಯದ ವಿದ್ಯಾಭ್ಯಾಸ ತಾಯಿಯ ತವರೂರಿನಲ್ಲಿ ಆಯಿತು. ಹೈಸ್ಕೂಲು ಶಿಕ್ಷಣ ಬಳ್ಳಾರಿಯಲ್ಲಿ ಮತ್ತು ಕಾಲೇಜು ಶಿಕ್ಷಣ ಅನಂತಪುರದಲ್ಲಾಯಿತು. ಬೆಳಗಾವಿಯ ರಾಜಾ ಲಖಮಗೌಡ ಕಾನೂನು ಮಹಾವಿದ್ಯಾಲಯದಲ್ಲಿ ಕಾನೂನು ಪದವಿ ಪಡೆದರು.

ಬಳ್ಳಾರಿಯಲ್ಲಿ ಹೈಸ್ಕೂಲು ವಿದ್ಯಾರ್ಥಿಯಾಗಿದ್ದಾಗ ಪ್ರತಿವರ್ಷ ನವರಾತ್ರಿಯಲ್ಲಿ ಆಚರಿಸಲಾಗುತ್ತಿದ್ದ ನಾಡಹಬ್ಬ ಕೋಚೆ ಅವರಲ್ಲಿ ಸುಪ್ತವಾಗಿದ್ದ ಕಾರಯತ್ರೀ ಪ್ರತಿಭೆಯನ್ನು ಉದ್ದೀಪನಗೊಳಿಸಿತು. ನಾಡಹಬ್ಬದಲ್ಲಿ ನಾಡಿನ ಪ್ರಸಿದ್ಧ ಸಾಹಿತಿಗಳು ಸಾಹಿತ್ಯ ಸಂಸ್ಕೃತಿಯನ್ನು ಕುರಿತು ಸಾಮಾನ್ಯ ಜನರಿಗೆ, ವಿದ್ಯಾರ್ಥಿಗಳಿಗೆ, ವರ್ತಕರಿಗೆ, ವೈದ್ಯರಿಗೆ, ವಕೀಲರಿಗೆ ತಿಳಿಯುವಂತೆ ಗಹನ ವಿಚಾರಗಳನ್ನು ಪ್ರಾಚೀನ ಕನ್ನಡ ಕಾವ್ಯಗಳನ್ನು ಆಧರಿಸಿ ಉಪನ್ಯಾಸ ನೀಡುತ್ತಿದ್ದರು. ಬಳ್ಳಾರಿಯಲ್ಲಿದ್ದ ನಾಲ್ಕೂ ವರ್ಷ ಕೋಚೆ ಆ ಭಾಷಣಗಳನ್ನು ತಪ್ಪದೆ ಕೇಳುತ್ತಿದ್ದರು. 1938ರಲ್ಲಿ ಬಳ್ಳಾರಿಯಲ್ಲಿ ರಂಗನಾಥ ದಿವಾಕರ ಅವರ ಅಧ್ಯಕ್ಷತೆಯಲ್ಲಿ ಸಾಹಿತ್ಯ ಸಮ್ಮೇಳನ ನಡೆದಾಗ ವಿದ್ಯಾರ್ಥಿ ಕೋಚೆ ಅವರು ತಾವಿದ್ದ ವಿದ್ಯಾರ್ಥಿ ನಿಲಯದಲ್ಲಿ ತಂಗಿದ್ದ ಗಣ್ಯ ಅತಿಥಿಗಳಿಗೆ ಸ್ವಯಂಸೇವಕರಾಗಿ ಕಾರ್ಯನಿರ್ವಹಿಸಿದರು. ಬಿಎಂಶ್ರೀ, ಫ.ಗು.ಹಳಕಟ್ಟಿ, ಟಿ.ಎಸ್.ವೆಂಕಣ್ಣಯ್ಯ, ಎ.ಆರ್.ಕೃಷ್ಣಶಾಸ್ತ್ರಿ, ಅ.ನ.ಕೃ. ಜಿ.ಪಿ.ರಾಜರತ್ನಂ ಮೊದಲಾದ ಸಾಹಿತಿಗಳನ್ನು ಹತ್ತಿರದಿಂದ ನೋಡುವ ಅವಕಾಶ ಸಮ್ಮೇಳನಕ್ಕೆ ಬಂದಿದ್ದ ಸಾಹಿತಿಗಳನ್ನು ನೋಡಿ ಅವರ ಕೃತಿಗಳನ್ನು ಓದುವುದರ ಮೂಲಕ ತಮ್ಮ ಸಾಹಿತ್ಯ ಬದುಕಿಗೆ ಭದ್ರ ಬುನಾದಿಯನ್ನು ಹಾಕಿಕೊಂಡರು.

ಕೋಚೆ ಅವರು ಬರೆದ ಮೊದಲ ಕವಿತೆ ಆಗ ಇದ್ದ ಶರಣ ಸಂದೇಶದಲ್ಲಿ ಪ್ರಕಟವಾದಾಗ ಬರೆಯಬಲ್ಲೆನೆಂಬ ವಿಶ್ವಾಸ ಮೂಡಿತು. ಆ ವೇಳೆಗೆ ಜನ ಬದುಕಬೇಕೆಂದು ಕಾವ್ಯ ಮುಖದಿಂ ಪೇಳ್ದೆನ್ ಅನಪೇಕ್ಷೆಯಿಂದ.. ಎಂಬ ರಾಘವಾಂಕನ ಕಾವ್ಯ ದೃಷ್ಟಿಯ ಪರಿಚಯವೂ ಕೋಚೆ ಅವರಿಗೆ ಆಗಿತ್ತು. ತಮ್ಮ ಬರವಣಿಗೆಯ ಆದರ್ಶವೇ ಕಡೆಗಾಣಲೀ ಜೀವ ದೀನರಿಗೆ ಮುಡಿಪಾಗಿ..... ಎಂಬುದಾಗಿತ್ತು.

### ಸಾಹಿತ್ಯ ದಿಗ್ಗಜರ ಪ್ರಭಾವ

ಈ ಸಂಕಲ್ಪದಿಂದ ಸಾಹಿತ್ಯ ಲೋಕಕ್ಕೆ ಕಾಲಿಟ್ಟ ಕೋಚೆ ಅನಂತಪುರ ಕಾಲೇಜಿನಲ್ಲಿ ಓದುತ್ತಿದ್ದಾಗ ಗೆಳೆಯರೊಬ್ಬರ ಮೂಲಕ ಕುವೆಂಪು ಅವರ ಸ್ವಾಮಿ ವಿವೇಕಾನಂದ ಕೃತಿಯ ಪರಿಚಯವಾಯಿತು. ಅದು ಅವರಲ್ಲಿ ಸುಪ್ತವಾಗಿದ್ದ ಆಧ್ಯಾತ್ಮ ಚೇತನವನ್ನು ಜಾಗ್ರತಗೊಳಿಸಿತು. ಬಾಲ್ಯದಿಂದ ಬಂದಿದ್ದ ಶರಣ ಧರ್ಮದ ಸಂಸ್ಕಾರದ ಬುನಾದಿಯ ಮೇಲೆ ಶ್ರೀ ರಾಮಕೃಷ್ಣ ವಿವೇಕಾನಂದರ ಆಧ್ಯಾತ್ಮ ದೃಷ್ಟಿ ಮೇಳೈಸಿತು. ಇದು ಚಿನ್ನಕ್ಕೆ ಪರಿಮಳ ಇಟ್ಟಂತಾಯಿತು. ಕೋಚೆ ಅವರ ಈ ಜೀವನ ದೃಷ್ಟಿ ಅವರ ವಿಪುಲ ಸಾಹಿತ್ಯದ ಹಿಂದಿನ ಪ್ರೇರಣೆ. ಸಾಹಿತ್ಯ ಮಾರ್ಗದಲ್ಲಿ ಒಂದೆಡೆ ಬೇಂದ್ರೆ, ಇನ್ನೊಂದೆಡೆ ಕುವೆಂಪು ಕೋಚೆ ಅವರನ್ನು ಪ್ರಭಾವಿಸಿದರು. ಬೇಂದ್ರೆ ಅವರಿಂದ ಅರವಿಂದ ಸಾಹಿತ್ಯ ದರ್ಶನ ಲಾಭ ಪಡೆದ ಅವರು ಕುವೆಂಪು ಅವರಿಂದ ರಾಮಕೃಷ್ಣ, ವಿವೇಕಾನಂದರ ವೇದಾಂತ ದರ್ಶನದ ಸೆಳೆವಿಗೆ ಒಳಪಟ್ಟರು. ಕೋಚೆ ಅವರ ಬಹುಪಾಲು ಸಾಹಿತ್ಯ ಸೃಷ್ಟಿಯ ಮೂಲ ಸ್ಫೂರ್ತಿ ಕುವೆಂಪು. ಕಾಲಕ್ರಮೇಣ ಕುವೆಂಪು ಅವರ ನಿಕಟವರ್ತಿಯಾದರು ಕೋಚೆ. ಈ ಸಾಂಗತ್ಯದ ಫಲವೇ ಕುವೆಂಪು ಅವರ ಮೇರು ಕೃತಿ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯಕ್ಕೆ ಪ್ರವೇಶಿಕೆಯಂತೆ ರಚಿತವಾಗಿರುವ ಕೋಚೆ ಅವರ 'ಶ್ರೀ ರಾಮಯಾಣ ದರ್ಶನಂ' ಮಹಾಕಾವ್ಯ ಸಮೀಕ್ಷೆ.

ಸುಮಾರು ಅರವತ್ತು ವರ್ಷಗಳಿಂದ ಸಾಹಿತ್ಯ ಕೃಷಿಯಲ್ಲಿ ತೊಡಗಿರುವ ಕೋಚೆ ಕನ್ನಡದ ಯಾವ ಅಕಾಡೆಮಿಕ್ ಸಾಹಿತಿಗೂ ಕಡಿಮೆ ಇಲ್ಲದಷ್ಟು ವೈವಿಧ್ಯಮಯ ಸಾಹಿತ್ಯ ರಚಿಸಿದ್ದಾರೆ. ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಕೃಷಿ ಮಾಡಿದ್ದಾರೆ. ಗ್ರಂಥ ಸಂಪಾದನೆಯಂಥ ಕ್ಲಿಷ್ಟ ಕ್ಷೇತ್ರದಲ್ಲಿಯೂ ಪರಿಶ್ರಮಪಟ್ಟಿದ್ದಾರೆ. ಹರಿಹರ ಕವಿಯ ರಕ್ಷಾಶತಕಂ ಕೋಚೆ ಅವರು ಸಂಪಾದಿಸಿದ ಹಳಗನ್ನಡ ಕಾವ್ಯ. ಅವರು ಕನ್ನಡ ಭಾಷೆಯನ್ನು ಶಾಸ್ತ್ರೀಯವಾಗಿ ಅಧ್ಯಯನ ನಡೆಸಿದವರಲ್ಲ. ಜೀವನ ನಿರ್ವಹಣೆಗೆ ವಕೀಲಿ ವೃತ್ತಿ ಹಿಡಿದಿದ್ದರು. ಕೆಲವು ವರ್ಷ ಸರ್ಕಾರಿ ವಕೀಲರಾಗಿ ಕಾರ್ಯನಿರ್ವಹಿಸಿದರು. ನಂತರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸಿದರು. ನ್ಯಾಯಾಧೀಶರಾಗಿ ನಿವೃತ್ತಿ ಹೊಂದಿದ ನಂತರವೂ ವಕೀಲಿ ವೃತ್ತಿಯನ್ನು ಮುಂದುವರಿಸಿದರು. ಆದರೆ ವೃತ್ತಿಯ ಎಡೆಬಿಡದ ಒತ್ತಡದಲ್ಲಿಯೂ ಸೃಜನಶೀಲ ಸಾಹಿತ್ಯವನ್ನೂ ಅನುವಾದ ಸಾಹಿತ್ಯವನ್ನೂ ವ್ರತದಂತೆ ಮುಂದುವರೆಸಿಕೊಂಡು ಬಂದರು.

### ಪ್ರಾತಃ ಸ್ಮರಣೀಯರ ಸಾಲಿನಲ್ಲಿ

ನ್ಯಾಯಾಧೀಶರಾಗಿದ್ದು ಸಾಹಿತಿಗಳಾದವರ ಪಟ್ಟಿ ಕನ್ನಡದಲ್ಲಿ ದೊಡ್ಡದೇನಲ್ಲ. ಕೆರೂರು ವಾಸುದೇವಾಚಾರ್ಯ, ವಚನಸಾಹಿತ್ಯ ಸಂಗ್ರಹದಲ್ಲಿ ಪಿತಾಮಹರೆಂಬ ಗೌರವಕ್ಕೆ ಪಾತ್ರರಾದ ಫ.ಗು.ಹಳಕಟ್ಟಿ, ಕನ್ನಡ ಕುಲಪುರೋಹಿತರೆಂದು ಮನ್ನಣೆ ಪಡೆದ ಆಲೂರು ವೆಂಕಟರಾಯರು, ಕಪಟರಾಳ ಕೃಷ್ಣರಾವ್, ದಿನಕರ ದೇಸಾಯಿ ಇಂಥ ಪ್ರಾತ:ಸ್ಮರಣೀಯರ ಸಾಲಿನಲ್ಲಿ ಸೇರಿದವರು ಕೋಚೆ. ಇವರಲ್ಲಿ ದಿನಕರ ದೇಸಾಯಿ ರೈತ ಕಾರ್ಮಿಕರ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದವರು. ಕೋಚೆ ಸ್ವಾತಂತ್ರ್ಯ ಹೋರಾಟದಲ್ಲಿ ನೇರವಾಗಿ

ಭಾಗಿಯಾಗಿ ಸೆರೆವಾಸ ಅನುಭವಿಸಿದವರು. ನಂತರ ಕರ್ನಾಟಕ ಏಕೀಕರಣ ಚಳವಳಿಯಲ್ಲಿಯೂ ಮುಂದೆ ನಿಂತು ಆಗ ಮದ್ರಾಸ್ ಪ್ರಾಂತದ ವಶದಲ್ಲಿದ್ದು ನಂತರ ಆಂಧ್ರ ಪ್ರದೇಶಕ್ಕೆ ಸೇರ್ಪಡೆಯಾಗಲಿದ್ದ ಬಳ್ಳಾರಿಯನ್ನು ಕರ್ನಾಟಕದಲ್ಲಿ ಉಳಿಸಿಕೊಳ್ಳಲು ಕಾರಣರಾದರು.

ಕೋಚೆ ಸಾಹಿತ್ಯ ಯಾವ ಪ್ರಕಾರದ್ದೇ ಇರಲಿ, ಅದರಲ್ಲಿರುವುದು ಜನ ಒಳ್ಳೆಯ ಬದುಕನ್ನು ಅನುಸರಿಸಬೇಕು ಎನ್ನುವ ಪುರೋಗಾಮಿ ಧೋರಣೆ. ಜನತೆಗೆ ಅರಿವು ಮೂಡಿಸುವಂಥ ದೃಷ್ಟಿ, ಮಾನವೀಯ ಕಾಳಜಿ ಅವರ ಸಾಹಿತ್ಯದ ಅಂತ:ಸ್ರೋತ ಪ್ರಜಾಸತ್ತೆಯಲ್ಲಿ ಯಾರೊಬ್ಬರೂ ಮೇಲೂ ಅಲ್ಲ, ಕೀಳೂ ಅಲ್ಲ ಎಂಬ ಸರ್ವ ಸಮಾನತೆಯ ಸೂತ್ರಕ್ಕೆ ಧಕ್ಕೆ ಬಂದಾಗಲೆಲ್ಲ ಕೋಚೆ ಸಿಡಿದಿದ್ದಾರೆ. ಕೋಮುವಾದಿ ವಿರೋಧಿ ನೆಲೆಯ ಹೋರಾಟಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಎಲ್ಲ ಜನಾಂಗದವರು ಸಮಾನರಾಗಿ ಬದುಕಬೇಕು, ಎಲ್ಲರಿಗೂ ಸಮಾನವಾದ ಅವಕಾಶಗಳಿರಬೇಕು ಎಂಬ ಆದರ್ಶದ ಚಿಂತನೆಯನ್ನು ಕೋಚೆ ತಮ್ಮ ಬರಹಗಳಲ್ಲಿ ಹಿಡಿದಿಟ್ಟವರು. ಅವರ ಮೂರು ಕವನ ಸಂಕಲನಗಳು (ಪ್ರಾಣಪಕ್ಷಿ, ಜೀವತೀರ್ಥ, ಹೃದಯ ನೈವೇದ್ಯ), ಆರು ಕಥಾಸಂಕಲನ (ಗಡೀಪಾರು, ನಮ್ಮೂರ ದೀಪ ಮತ್ತು ಇತರ ಕತೆಗಳು, ಆ ಮುಖ ಈ ಮುಖ, ಗಾಯಕನಿಲ್ಲದ ಸಂಗೀತ, ಉಂಡವನೇ ಜಾಣ, ನ್ಯಾಯಾಲಯದ ಸತ್ಯಕಥೆಗಳು), ಎಂಟು ಕಾದಂಬರಿಗಳು (ಹಿಂದಿರುಗಿ ಬರಲಿಲ್ಲ, ದಿವಾನ್ ಬಹದ್ದೂರ್, ನೊಗದ ನೇಣು, ವಿಜಯನಗರದ ಶ್ರೀ ಕೃಷ್ಣದೇವರಾಯ, ಪೂರ್ಣವತಿ, ರಕ್ತತರ್ಪಣ, ಬೆಳಕು ಹರಿಯಿತು, ಬೇಡಿ ಕಳಚಿತು ದೇಶ ಒಡೆಯಿತು), ಶ್ರೀ ಅರವಿಂದರು, ಶ್ರೀ ಮಾತೆ, ಶ್ರೀ ಮೃತ್ಯುಂಜಯ ಸ್ವಾಮಿಗಳು, ದೀನಬಂಧು ಬಸವಣ್ಣ, ಶ್ರೀ ನಿಜಲಿಂಗಪ್ಪ ಅವರ ಜೀವನ ಚರಿತ್ರೆಗಳು ಕೋಚೆ ಅವರ ಸಾಹಿತ್ಯ ಸಮೃದ್ಧಿಗೆ ನಿದರ್ಶನಗಳು. ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯ ಸಮೀಕ್ಷೆ ಕೋಚೆ ಅವರ ವಿಮರ್ಶಾ ಕೃತಿಗಳಲ್ಲಿ ಅತ್ಯುತ್ತಮವಾದುದು. ಅರವಿಂದರ ದಿವ್ಯಜೀವನ ಮತ್ತು ಸಾವಿತ್ರಿ ಮಹಾಕಾವ್ಯ ಸೇರಿದಂತೆ ಹದಿನಾರು ಅನುವಾದಿತ ಕೃತಿಗಳನ್ನು ಕೋಚೆ ಪ್ರಕಟಿಸಿದ್ದಾರೆ. ಆಧ್ಯಾತ್ಮಿಕ ಶ್ರದ್ಧೆಗೆ ಒಳಪಟ್ಟ ಅವರ ಅನುವಾದಗಳು ತಾತ್ವಿಕ ಚಿಂತನೆಯಿಂದ ಕೂಡಿವೆ. ಕೋಚೆ ಅವರ ಅನುವಾದ ಕೃತಿಗಳಲ್ಲಿ ಆಧ್ಯಾತ್ಮ, ಇತಿಹಾಸ, ರಾಜಕೀಯದ ಪುನರ್ ಮೌಲ್ಯೀಕರಣ ಮುಖ್ಯ ವಿಷಯಗಳಾಗಿರುವುದು ಕಂಡುಬರುತ್ತದೆ.

**ಬಹುಮುಖ ಸಾಹಿತ್ಯ ಸೇವೆಗೆ ಮನ್ನಣೆ:**

ಕರ್ನಾಟಕ ಏಕೀಕರಣಕ್ಕಾಗಿ ಶ್ರಮಿಸಿದ, ಸ್ವಾತಂತ್ರ್ಯ ಹೋರಾಟಗಾರರಾಗಿ ಸೆರೆವಾಸ ಅನುಭವಿಸಿದ್ದ, ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಜನಪರವಾಗಿ ಚಿಂತನೆ ನಡೆಸಿದ ಹಿರಿಯ ಲೇಖಕ ಕೋಚೆ ಅವರನ್ನು ಬಿಜಾಪುರದಲ್ಲಿ ನಡೆಸಲು ಉದ್ದೇಶಿಸಿದ 79ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡುವ ಮೂಲಕ ಕನ್ನಡ ಸಾಹಿತ್ಯ ಪರಿಷತ್ತು ಕೋಚೆ ಅವರ ಬಹುಮುಖ ಸಾಹಿತ್ಯ ಸೇವೆಗೆ ನಾಡವರ ಕೃತಜ್ಞತೆ ಸಲ್ಲಿಸಿದೆ. ಸಮ್ಮೇಳನದ ಅಧ್ಯಕ್ಷತೆಯನ್ನು ವಶೀಲಿ–ಪ್ರಭಾವಗಳು ನಿರ್ಧರಿಸುತ್ತಿರುವ ಈ ದಿನಗಳಲ್ಲಿಯೂ ವಯಸ್ಸೊಂದನ್ನು ಮಾತ್ರವೇ ಮಾನದಂಡವಾಗಿ ಪರಿಗಣಿಸದೆ ವೈವಿಧ್ಯಮಯ ಮೌಲಿಕ ಸಾಹಿತ್ಯ ಮತ್ತು ಸರ್ವಸಮಾನತೆಯ ಜೀವನ ದೃಷ್ಟಿಯನ್ನು ಪರಿಗಣಿಸಿ ಕೋಚೆ ಅವರನ್ನು ಆಯ್ಕೆ ಮಾಡಿರುವ ರೀತಿಯೇ ಶ್ಲಾಘನೀಯವಾದ್ದು. ನಾಡು ಏಕೀಕರಣಗೊಂಡು ಐದು ದಶಕಗಳು ಸಂದ ನಂತರವೂ ಅಭಿವೃದ್ಧಿಯಲ್ಲಿ ತಾರತಮ್ಯವಾಗಿರುವ ಬಗ್ಗೆ ಅಸಮಾಧಾನದ ಸೊಲ್ಲು ಜೋರಾಗಿಯೇ ಕೇಳುತ್ತಿರುವ ಈ ಸಂದರ್ಭದಲ್ಲಿ ಕೋಚೆ ಅವರಂಥ ಹಿರಿಯರ ಮಾರ್ಗದರ್ಶನ ಪ್ರಭುತ್ವಕ್ಕೆ ಅಗತ್ಯವೆನಿಸಿದೆ. ಆದರೆ ಸಾಹಿತ್ಯ ಪರಿಷತ್ತಿಗೆ ಹಣ ನೀಡಿದರೆ ತನ್ನ ಕರ್ತವ್ಯ ಮುಗಿಯಿತು ಎಂದುಕೊಂಡಿರುವ ರಾಜ್ಯ ಸರ್ಕಾರ ಸಾಹಿತ್ಯ ಸಮ್ಮೇಳನದ ಫಲಶ್ರುತಿಯ ಬಗ್ಗೆ ತಲೆಕೆಡಿಸಿಕೊಂಡ ನಿದರ್ಶನಗಳಿಲ್ಲ. ಸಾಹಿತ್ಯ ಸಮ್ಮೇಳನದಲ್ಲಿ ಕೈಗೊಳ್ಳುವ ನಿರ್ಣಯಗಳನ್ನು ಸರ್ಕಾರ ಇಷ್ಟು ವರ್ಷಗಳ ಕಾಲ ಗಂಭೀರವಾಗಿ ಪರಿಗಣಿಸಿಯೇ ಇಲ್ಲ. ಆದ್ದರಿಂದ ಸಮ್ಮೇಳನಾಧ್ಯಕ್ಷರ ಮಾತು ಸರ್ಕಾರಕ್ಕೆ ಮುಟ್ಟುವುದೆಂದು ನಿರೀಕ್ಷಿಸಲಾಗದು. ಆದರೆ, ಕೋಚೆ ಅವರಂಥ ಹಿರಿಯರ ಮಾರ್ಗದರ್ಶನ ನಾಡಿನ ಜನತೆಗೆ ಇದೆ.

❑ ಲಕ್ಷ್ಮಣ ಕೊಡಸೆ

ಕೃಪೆ: ಈ ಭಾನುವಾರ–ವಾರಪತ್ರಿಕೆ

# ಯಕ್ಷಗಾನ ಕಲಾವಿದೆ ವಿದ್ಯಾ ಕೋಳ್ಯೂರು ಅವರಿಗೆ ಬಿಸ್ಮಿಲ್ಲಾಖಾನ್ ಯುವ ಪುರಸ್ಕಾರ



ಯಕ್ಷಗಾನ ಕಲಾವಿದೆ ವಿದ್ಯಾ ಕೋಳ್ಯೂರು ಅವರಿಗೆ 2011ನೇ ಸಾಲಿನ ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರ ಸಂದಿದೆ. ಪ್ರಸಿದ್ಧ ಯಕ್ಷಗಾನ ಕಲಾವಿದ, ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕೋಳ್ಯೂರು ರಾಮಚಂದ್ರ ರಾವ್ ಅವರ ಪುತ್ರಿಯಾಗಿರುವ ವಿದ್ಯಾ ಯಕ್ಷಗಾನ ಕಲಾವಿದೆಯಾಗಿ ವಿವಿಧ ಪಾತ್ರಗಳಲ್ಲಿ ಮಿಂಚಿದ್ದಾರೆ. ಸಮೃದ್ಧ ಯಕ್ಷಗಾನ ಸಂಪ್ರದಾಯದ ನಡುವೆಯೇ ಹುಟ್ಟಿ ಬೆಳೆದ ವಿದ್ಯಾ ತಮ್ಮ ಏಳನೆಯ ವಯಸ್ಸಿನಿಂದಲೇ ಈ ಕಲೆಯನ್ನು ಕಲಿಯಲು ಪ್ರಾರಂಭಿಸಿದರು. ಆನಂತರ ತಮ್ಮ ತಂದೆಯವರ ಮಾರ್ಗದರ್ಶನದಡಿಯಲ್ಲಿ ಯಕ್ಷಗಾನ ಪಾಂಡಿತ್ಯವನ್ನು ಪಡೆದ ವಿದ್ಯಾ ಅವರು ಕಲಾವಿದೆಯಾಗಿ, ದಾರ್ಶನಿಕರಾಗಿ, ಸಂಘಟಕರಾಗಿ ಹಾಗೂ ಸಂಶೋಧಕರಾಗಿ ಹೊಸತನವನ್ನು ಸೃಷ್ಟಿಸಿದ ಅಪೂರ್ವ ಕಲಾವಿದೆ. ಅವರ ಸೃಜನಾತ್ಮಕ ವಿಧಾನ, ದಕ್ಷ ಕಾರ್ಯಕ್ಷಮತೆ ಹಾಗೂ ನವನವೀನ ನೃತ್ಯ ಆವಿಷ್ಕಾರಗಳು ಕಲಾಜಗತ್ತಿನ ಕಲಾವಿದರು, ತಜ್ಞರು, ವಿಮರ್ಶಕರು ಹಾಗೂ ಅಭಿಮಾನಿಗಳ ವ್ಯಾಪಕ ಪ್ರಶಂಸೆಗೆ ಪಾತ್ರವಾಗಿದೆ. ಅಭಿಮನ್ಯು, ಸುಧನ್ವ, ಬಭ್ರುವಾಹನ, ಅರ್ಜುನ, ರಾಮ, ಕೃಷ್ಣ ಮೊದಲಾದ ಪ್ರಮುಖ ಪುರುಷ ಪಾತ್ರಗಳಷ್ಟೇ ಅಲ್ಲದೇ ರಂಭೆ, ಮೋಹಿನಿ, ತಿಲೋತ್ತಮೆ, ಚಂದ್ರಮತಿ, ಸುಭದ್ರ, ದಾಕ್ಷಾಯಿಣಿ, ಚಿತ್ರಾಂಗದೆ, ಅಂಬೆ ಮೊದಲಾದ ಸ್ತ್ರೀ ಪಾತ್ರಗಳ ಸಮರ್ಥ ಅಭಿನಯ ವಿದ್ಯಾ ಅವರ ಬಹುಮುಖ ಕಲಾತ್ಮಕತೆಗೆ ಸಾಕ್ಷಿಯಾಗಿದೆ. ಯಾವುದೇ ಪಾತ್ರಗಳನ್ನು ತಲ್ಲೀನತೆಯಿಂದ ಭಾವಪೂರ್ಣವಾಗಿ ಪ್ರತಿಬಿಂಬಿಸುವ ಮೂಲಕ ಯಕ್ಷಗಾನ ಕ್ಷೇತ್ರಕ್ಕೆ ತಮ್ಮ ಅಮೂಲ್ಯ ಕೊಡುಗೆಯನ್ನು ನೀಡಿದ್ದಾರೆ. 'ಯಕ್ಷ ಮಂಜೂಷ' ತಂಡದ ರೂವಾರಿಯಾಗಿ ಯಕ್ಷಗಾನ ರಂಗದಲ್ಲಿ ಹೊಸ ಕ್ರಾಂತಿಯ ಅಲೆಗಳನ್ನೇ ಎಬ್ಬಿಸಿರುವ ವಿದ್ಯಾ ಹಲವಾರು ದಾಖಲೆಗಳನ್ನು ಸೃಷ್ಟಿಸಿದ್ದಾರೆ. ಕೇವಲ ಗ್ರಾಮೀಣ ಜನತೆಗೆ ಮೀಸಲಾಗಿದ್ದ ಕಲೆಯನ್ನು ರಾಷ್ಟ್ರೀಯ, ಅಂತಾರಾಷ್ಟ್ರೀಯ ಮಟ್ಟದ ಖ್ಯಾತಿಗೆ ಕೊಂಡೊಯ್ದ ಹೆಗ್ಗಳಿಕೆ ಇವರದ್ದು. ಕರ್ನಾಟಕದ ಕರಾವಳಿಯ ಕಲೆಯನ್ನು ಭಾಷಾವಾರು ಗಡಿ ಮೀರಿ ಭಾರತದ ಎಲ್ಲ ಕಡೆಗಳಲ್ಲೂ ಪಸರಿಸಿ ಜಾಗತಿಕ ಮಟ್ಟದಲ್ಲಿ ಪ್ರೇಕ್ಷಕರನ್ನು ತಲುಪಿದ್ದಾರೆ. ಕನ್ನಡ ಮಾತ್ರವಲ್ಲದೇ ಹಿಂದಿಯಲ್ಲೂ ಯಕ್ಷಗಾನವನ್ನು ಪ್ರದರ್ಶಿಸಿದ ಏಕೈಕ ತಂಡವಾದ 'ಯಕ್ಷ ಮಂಜೂಷ' ಇದುವರೆಗೂ ಭಾರತದ 19 ರಾಜ್ಯಗಳಲ್ಲಿ 500ಕ್ಕೂ ಹೆಚ್ಚು ಪ್ರದರ್ಶನ ನೀಡಿದೆ. ಮಹಿಳಾ ನೇತೃತ್ವದ ತಂಡದ ಯಶಸ್ಸು ಗಳಿಸಿರುವ ವಿದ್ಯಾ ಅವರು ಯಕ್ಷಗಾನ ಪರಂಪರೆಯ ಪ್ರಚಾರಕ್ಕಾಗಿ 'Academy of Thenku Tittu Yakshagana' ಸಂಸ್ಥೆಯನ್ನು ಸ್ಥಾಪಿಸಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಲಾ ಸೇವೆ ಸಲ್ಲಿಸುತ್ತಿದ್ದಾರೆ. 2012ರಲ್ಲಿ 'AKKA' ಸಮ್ಮೇಳನದಲ್ಲಿ ಪ್ರದರ್ಶನ ನೀಡುವುದರ ಜತೆಗೆ ಹತ್ತಾರು ದೇಶಗಳಲ್ಲಿ ನೂರಾರು ಪ್ರದರ್ಶನ ನೀಡಿ ಈಗಾಗಲೇ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ಬಿಸ್ಮಿಲ್ಲಾ ಖಾನ್ ಪುರಸ್ಕಾರವು ಯಕ್ಷಗಾನಕ್ಕೆ ನೀಡಿದ ಮೊದಲ ರಾಷ್ಟ್ರಮಟ್ಟದ ಪುರಸ್ಕಾರ ವಿದ್ಯಾ ಕೋಳ್ಯೂರು ಅವರಿಗೆ ಸಂದಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ. ವಿದ್ಯಾ ಅವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು. ಅವರ ಕಲಾ ಸೇವೆ ನಿರಂತರವಾಗಿ ಸಾಗಲಿ, ಮತ್ತಷ್ಟು ಖ್ಯಾತಿ ಗಳಿಸಲಿ ಎಂದು ಶುಭ ಹಾರೈಸುತ್ತೇವೆ.

# ಗಿರಿಬಾಲೆ ಮತ್ತು ಶಿವರಾತ್ರಿ

## ಎರಡು ವಿನೂತನ ರಂಗ ಪ್ರಯೋಗಗಳು

**ದೆಹಲಿ ಕರ್ನಾಟಕ ಸಂಘದಲ್ಲಿ ಜನವರಿ 20ರಂದು ಪ್ರಯೋಗಗೊಂಡ ಎರಡೂ ನಾಟಕಗಳು ತಮ್ಮ ವಿನೂತನ ರಂಗ ಶೈಲಿಯಿಂದಾಗಿ ಗಮನ ಸೆಳೆದುವು. ಮೈಸೂರಿನ ನಿರಂತರ ಫೌಂಡೇಶನ್‌ನ ಕಲಾವಿದರು ಡಾ.ಚಂದ್ರಶೇಖರ ಕಂಬಾರ ಅವರ ಈಚಿನ ನಾಟಕ "ಶಿವರಾತ್ರಿ " ಯನ್ನು ಆಕರ್ಷಕವಾಗಿ ಪ್ರಸ್ತುತಪಡಿಸಿದರೆ, ಹೆಗ್ಗೋಡಿನ ಕಿನ್ನರ ಮೇಳವು ವೈದೇಹಿ ನಿರೂಪಣೆಯ ಗಿರಿಬಾಲೆಯನ್ನು ಸುಶೀಲಾ ಕೆಳಮನೆಯವರ ಮೂಲಕ ಅದ್ಭುತವಾಗಿ ಪ್ರದರ್ಶಿಸಿತು.**

### ಶಿವರಾತ್ರಿ:

ಹನ್ನೆರಡನೇ ಶತಮಾನದ ವಚನ ಚಳುವಳಿ ನಮಗೆಲ್ಲ ಇನ್ನೂ ಒಂದು ನಿಗೂಢ ವಿಸ್ಮಯವಾಗಿ ಉಳಿದಿದೆ. ಕನ್ನಡದ ಬರೆಹಗಾರರು ಆ ಚಳುವಳಿಯ ಬಗ್ಗೆ ಮತ್ತೆ ಮತ್ತೆ ಬರೆಯುತ್ತಲೇ ಇದ್ದಾರೆ. ಎಷ್ಟು ಬರೆದರೂ ಮುಗಿಯದ ಕಥನಗಳನ್ನು ಆ ಚಳುವಳಿ ತನ್ನೊಡಲಲ್ಲಿ ಇರಿಸಿಕೊಂಡಿದೆಯಾದ್ದರಿಂದ ಕನ್ನಡಿಗರು ಮತ್ತೆ ಮತ್ತೆ ಅದರಿಂದ ರೋಮಾಂಚನಗೊಳ್ಳುತ್ತಲೇ ಬಂದಿದ್ದಾರೆ. ಲಂಕೇಶ್, ಗಿರೀಶ್ ಕಾರ್ನಾಡ್, ಎಂ ಎಂ ಕಲಬುರ್ಗಿ, ಎಚ್ ಎಸ್ ಶಿವಪ್ರಕಾಶ ಅವರಂಥವರು ತಮ್ಮ ನಾಟಕಗಳ ಮೂಲಕ ಈ ಚಳುವಳಿಯ ಮೇಲೆ ಹೊಸ ಒಳನೋಟಗಳನ್ನು ಬೀರಿದ್ದಾರೆ. ಈ ಸಾಲಿಗೆ ಇನ್ನೊಂದು ಸೇರ್ಪಡೆ ಡಾ. ಚಂದ್ರಶೇಖರ ಕಂಬಾರ ಅವರ 'ಶಿವರಾತ್ರಿ'. ಡಾ. ಕಂಬಾರರು ಜ್ಞಾನಪೀಠ ಪ್ರಶಸ್ತಿ ಪಡೆದ ಪ್ರಸಿದ್ಧ ಕವಿ, ನಾಟಕಕಾರ, ಜಾನಪದ ತಜ್ಞ ಮತ್ತು ಚಲನಚಿತ್ರ ನಿರ್ದೇಶಕ. ಅವರು ವಚನ ಚಳುವಳಿಯನ್ನು ಇತರ ಬರೆಹಗಾರರಿಗಿಂತ ಭಿನ್ನವಾಗಿ ನೋಡಿದ್ದಾರೆ.

ಶಿವರಾತ್ರಿ ನಾಟಕವು ಒಂದು ರಾತ್ರಿಯಲ್ಲಿ ನಡೆವ ಘಟನಾವಳಿಗಳನ್ನು ಆಧರಿಸಿ ಬರೆದ ಕಾವ್ಯದಂಥಾ ನಾಟಕ. ನಾಟಕವು ಚಳುವಳಿಯನ್ನು, ಸಾಮಾನ್ಯ ಜನರ ಕಣ್ಣಿನಿಂದ ನೋಡುತ್ತದೆ. ಅಂದರೆ ಈ ನಾಟಕವು ಮೊದಲಿನ ನಾಟಕಗಳ ಹಾಗೆ ಬಸವಣ್ಣ ಮತ್ತು ಬಿಜ್ಜಳ ಕೇಂದ್ರೀಕೃತವಾಗದೆ, ಅವರ ನಡುವಣ ಸಂಘರ್ಷಗಳನ್ನು ಸಾಮಾನ್ಯ ಜನವರ್ಗದ ಕಣ್ಣಿನಿಂದ ನೋಡುತ್ತದೆ. ಹೀಗಾಗಿ ನಾಟಕದಲ್ಲಿ ಲಕ್ಷಾಂತರ ವರಹಗಳ ಬೆಲೆಬಾಳುವ ಮುತ್ತಿನಸರವನ್ನು, ಕಾಶವ್ವ, ಮುದುಕಪ್ಪ, ಮತ್ತು ಸೂಳೆ ಸಾವಂತ್ರಿಯರು ಕಸಕ್ಕಿಂತ ಕಡೆಯಾಗಿ ಕಾಣುತ್ತಾರೆ. ಈ ಸಾಮಾನ್ಯ ಜನರಿಗೆ ತಮ್ಮ ವೃತ್ತಿಯೇ ಅತ್ಯಂತ ಪವಿತ್ರ. ಕಾಯಕವೇ ಕೈಲಾಸ ಮೂಡಿಕೊಂಡ ಕ್ಷಣಗಳವು. ಈ ಅಂಶ ಹೊರತು ಪಡಿಸಿದರೆ, ಬಿಜ್ಜಳ ಮತ್ತು ಬಸವಣ್ಣನವರ ಪಾತ್ರ ಕಲ್ಪನೆಯಲ್ಲಿ ಹೊಸತನವೇನೂ ಇಲ್ಲ. ಅವರ ನಡುವಣ ಸಂಘರ್ಷಗಳು ಪ್ರಸಿದ್ಧವಾದದ್ದೇ. 'ನಿಮ್ಮ ಕನಸಿನಲ್ಲಿ ನನಗೂ ಜಾಗ ಸಿಗುತ್ತದೆಂದು ಕಾದೆ, ಅಂಗೈಯಗಲ ಜಾಗವೂ ಸಿಗಲಿಲ್ಲ' ಎನ್ನುವ ಬಿಜ್ಜಳ ಮತ್ತು 'ನೀವಿರುವ ಜಾಗವನ್ನು ಕೂಡಲಸಂಗಮ ಮಾಡಲು ಹೊರಟೆವು, ಆದರೆ ನೀವು ಕತ್ತಲೆಗೆ ಒಯ್ಯುವ ಹಳೆಯ ದಾರಿಗಳಲ್ಲೇ ನಡೆಯ ಬಯಸಿದಿರಿ' ಎನ್ನುವ ಬಸವಣ್ಣನ ಮಾತುಗಳು ನಮಗೆ ಗೊತ್ತಿರುವಂತಹವೇ. ಆದರೂ ಈ ನಾಟಕ ಕಲ್ಯಾಣದ ದುರಂತವನ್ನು ಶಿವರಾತ್ರಿಯಂದು ನಡೆವ ಘಟನೆಗಳ ಮೂಲಕ ಸೂಕ್ಷ್ಮವಾಗಿ ತೆರೆದಿಡುತ್ತ ಹೋಗುತ್ತದೆ. ಡಾ.ಚಂದ್ರಶೇಖರ ಕಂಬಾರರ ಕಾವ್ಯಮಯ ಭಾಷೆಯ ಸೊಬಗು ನಾಟದ ಸೊಗಸನ್ನು ಹೆಚ್ಚಿಸಿದೆ.

ಕಳೆದ ಹಲವಾರು ವರ್ಷಗಳಿಂದ ವಿಶೇಷವಾದ ಸಾಮಾಜಿಕ ಜವಾಬ್ದಾರಿಗಳಿಂದ ರಂಗಭೂಮಿ, ಜಾನಪದ, ಸಾಹಿತ್ಯ, ಪರಿಸರ ಮುಂತಾದ ಹಲವು ರಂಗಗಳಲ್ಲಿ ಕೆಲಸ ಮಾಡುತ್ತಿರುವ ಮೈಸೂರಿನ ನಿರಂತರ ಫೌಂಡೇಶನ್ ಈ ನಾಟಕವನ್ನು ಪ್ರದರ್ಶಿಸಿದೆ. ಈಗಾಗಲೇ ರಂಗಭೂಮಿ ಕುರಿತಾಗಿ ಕೆಲವು ಪುಸ್ತಕಗಳನ್ನು



ಪ್ರಕಟಿಸಿರುವ ಅವರು ಮಕ್ಕಳಿಗಾಗಿ ಹಾರೋಣ ಬಾ ಎಂಬ ಸಚಿತ್ರ ಮಕ್ಕಳ ಕಾವ್ಯ ಹೊರತಂದಿದೆ. ಜನಪರ ಹೋರಾಟಗಳಲ್ಲಿ ರಂಗಭೂಮಿಯನ್ನು ಪರಿಣಾಮಕಾರಿಯಾಗಿ ಬಳಸುತ್ತಾ ಬಂದಿರುವ ನಿರಂತರದ ಗೆಳೆಯರು ಕರ್ನಾಟಕದಾದ್ಯಂತ ಬಸವಣ್ಣನವರ ವಚನಗಳನ್ನಾಧರಿಸಿದ ಕೂಡಲಸಂಗಮ ದೃಶ್ಯರೂಪಕದ 75 ಪ್ರದರ್ಶನಗಳನ್ನು ನೀಡಿ ಜನಪ್ರಿಯರಾಗಿದ್ದಾರೆ. ಇದೀಗ ಶಿವರಾತ್ರಿ ನಾಟಕವನ್ನು ಖ್ಯಾತ ರಂಗಕರ್ಮಿ ಚಿದಂಬರರಾವ್ ಜಂಬೆಯವರ ನಿರ್ದೇಶನದಲ್ಲಿ ಪ್ರಯೋಗಿಸಿ, ಹೆಸರು ಮಾಡಿದೆ. ಸಮಾಜದ ಉನ್ನತಿ, ಶಿಕ್ಷಣದ ಪ್ರಗತಿ ಮತ್ತು ಸಮಾನತೆಯ ಕನಸಿಗಾಗಿ ನಾಟಕ ಚಟುವಟಿಗೆಗಳನ್ನು ಬಳಸುವ ನಿರಂತರವು ಈ ನಿಟ್ಟಿನಲ್ಲಿ ತುಂಬಾ ಮುಂದೆ ಸಾಗಿದೆ. ಹೀಗಾಗಿಯೇ ಶಿವರಾತ್ರಿ ನಾಟಕದಲ್ಲಿ ಕೆಳ ವರ್ಗದ ಪಾತ್ರಗಳು ಉಜ್ವಲವಾಗಿ ಮೂಡಿಬಂದಿವೆ. ಇದು ಈ ನಾಟಕದ ವಿಶೇಷ.

ಚಿದಂಬರರಾವ್ ಜಂಬೆಯವರ ನಿರ್ದೇಶನ ಎಂದಿನಂತೆ ಅಚ್ಚುಕಟ್ಟು. ರಂಗಕ್ರಿಯೆಯ ಮೂಲಕ ಬದುಕಿನ ಸೂಕ್ಷ್ಮತೆಗಳನ್ನು, ವಿಷಾದಗಳನ್ನು, ಸುಖಗಳನ್ನು ಮಿಡಿಸುವ ಜಂಬೆಯವರ ಸಮರ್ಥ ನಿರ್ದೇಶನದಲ್ಲಿ ಕನ್ನಡದ ಅತ್ಯಂತ ಮಹತ್ವದ ಈ ನಾಟಕ ಜೀವತಳೆದಿದೆ. ಇಕ್ಬಾಲ್ ಅವರ ರಂಗ ವಿನ್ಯಾಸ ಎಂದಿನಂತೆ ಪರಿಣಾಮಕಾರಿ ಯಾಗಿತ್ತು.

### ಗಿರಿಬಾಲೆ:



ಗಿರಿಬಾಲೆ ನಾಟಕವು ಖ್ಯಾತ ಲೇಖಕಿ ಸರಸ್ವತಿ ಬಾಯಿ ರಾಜವಾಡೆಯವರ ಬದುಕಿನ ಕೆಲವು ಮುಖ್ಯ ಘಟನೆಗಳನ್ನು ಆಧರಿಸಿ ರಂಗಕ್ಕೆ ಬಂದಿದೆ. ರಾಜವಾಡೆಯವರ ಕೆಲಸಗಳು ಕಾಲಗರ್ಭದಲ್ಲಿ ಹುದುಗಿಹೋಗುತ್ತಿದ್ದವೋ ಏನೋ. ಕನ್ನಡದಲ್ಲಿ ಮಹಿಳಾ ಚಳುವಳಿ ಆರಂಭವಾಗುತ್ತಿದ್ದಂತೆ ನಮಗೆಲ್ಲ 'ಗಿರಿಬಾಲೆ' ಕಾವ್ಯನಾಮದ ಸರಸ್ವತಿ ಬಾಯಿ ಅವರ ಬಗೆಗೆ ತಿಳಿಯತೊಡಗಿತು. ಸುಪ್ರಸಿದ್ಧ ಲೇಖಕಿ ವೈದೇಹಿ ಅವರು ಬರೆದ ಅವರ ಆತ್ಮಕತೆ 'ಮುಂತಾದ ಕೆಲವು ಪುಟಗಳು' ಮಹಿಳೆಯೊಬ್ಬಳ ಜೀವನ ವೃತ್ತಾಂತದ ಅತ್ಯುತ್ತಮ ನಿರೂಪಣೆಯಾಗಿದೆ. ಬಡತನ, ಶ್ರೀಮಂತಿಕೆ, ಅಲೆದಾಟ, ಬರೆಹ, ಮೊದಲಾದ ಅನೇಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ರಾಜವಾಡೆಯವರ ಬದುಕೇ ನಾಟಕೀಯವಾಗಿರುವುದರಿಂದ ಕಿನ್ನರ ಮೇಳವು ಇದನ್ನು ರಂಗಕ್ಕೆ ತರಲು ಯೋಚಿಸಿರಬೇಕು. ಮೇಳದ ನಿರೀಕ್ಷೆ ಸುಳ್ಳಾಗಿಲ್ಲ. ನಮ್ಮ ಕಾಲದ ಕಲಾತ್ಮಕ ನಟಿಯರಲ್ಲೊಬ್ಬರಾದ ಸುಶೀಲಾ ಕೆಳಮನೆಯವರು ಏಕಾಂಗಿಯಾಗಿಯೇ ರಾಜವಾಡೆಯವರ ಆತ್ಮಕಥನದ ಕೆಲವು ಪುಟಗಳನ್ನು ಪ್ರೇಕ್ಷಕರಿಗೆ ಸುಲಭವಾಗಿ ಸಂವಹಿಸಿದರು. ಪುಸ್ತಕ ಓದುವುದನ್ನು ನೋಡುವ ಹಾಗೆ ಮಾಡಿದ ಕಿನ್ನರ ಮೇಳದ ಸಾಧನೆ ಅಪೂರ್ವವಾದುದು. ಅಭಿನಯದ ಮಧ್ಯೆ ಪ್ರೇಕ್ಷಕರನ್ನು ಮಾತಾಡಿಸುತ್ತಾ ಮುಂದುವರೆದ ನಟಿ, ಎಲ್ಲೂ ನಾಟಕ ಬೇಸರ ಹುಟ್ಟಿಸದಂತೆ ನೋಡಿಕೊಳ್ಳುವಲ್ಲಿ ಯಶಸ್ವಿಯಾದರು.

❑ **ಡಾ.ಪುರುಷೋತ್ತಮ ಬಿಳಿಮಲೆ**

# ಹನ್ನೆರಡನೇ ಶತಮಾನದ ಶರಣ 'ಉರಿಲಿಂಗ ಪೆದ್ದಿ'




ಹನ್ನೆರಡನೇ ಶತಮಾನ ಈ ನಾಡಿನಲ್ಲಿ ಸಾಹಿತ್ಯಿಕ, ಸಾಂಸ್ಕೃತಿಕ, ವೈಚಾರಿಕ ಹಾಗೂ ಸಾಮಾಜಿಕ ಕ್ರಾಂತಿಯನ್ನು ಹುಟ್ಟು ಹಾಕಿದ ಮಹಾನ್ ಕಾಲಘಟ್ಟ. ವರ್ಣ, ವರ್ಗ ಬೇಧಗಳನ್ನು ತೊಡೆದು ಸಮಾನತೆ, ಮಾನವತೆಯನ್ನು ಮೆರೆದ ಕ್ರಾಂತಿಯೋಗಿ ಬಸವಣ್ಣನವರ ಪ್ರಭಾವದಿಂದ ಕೆಳಜಾತಿವರ್ಗದ ಕಳ್ಳ ಪೆದ್ದಿಯು ಪರಿವರ್ತಿತನಾಗಿ ಮುಂದೆ ಒಂದು ಮಠದ ಸ್ವಾಮೀಜಿಯಾಗುವುದು ಯುಗ ಪವಾಡವೇ ಸರಿ. ಈ ಕಥಾವಸ್ತುವುಳ್ಳ ಶರಣ 'ಉರಿಲಿಂಗ ಪೆದ್ದಿ' ನಾಟಕವನ್ನು 'ಯಮುನೆಯ ತಡಿಯಲ್ಲಿ ಕನ್ನಡ ನುಡಿ' ಸಾಂಸ್ಕೃತಿಕ ಮಾಲಿಕೆಯಲ್ಲಿ ಜನವರಿ 12ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಪ್ರದರ್ಶಿಸಲಾಯಿತು. ಡಾ.ಮಹದೇವ ಬಣಕಾರ್ ವಿರಚಿತ, ವೈ. ಡಿ.ಬಾದಾಮಿ ಅವರ ನಿರ್ದೇಶನದ ಈ ನಾಟಕವನ್ನು ಶ್ರೀ ಸಾಣೇಹಳ್ಳಿ ಶಿವಕುಮಾರ್ ಕಲಾ ತಂಡದವರು ಅಭಿನಯಿಸಿದರು. ಪೆದ್ದಿ ಮೂಲತ: ಒಬ್ಬ ಕಳ್ಳ, ಅವನ ಹೆಂಡತಿ ಕಾಳವ್ವೆ ಮಹಾ ಶಿವಶರಣೆ. ಒಂದು ದಿನ ಕಳ್ಳತನ ಮಾಡಲು ಸೂರಯ್ಯ ಎಂಬ ಶರಣನ ಮನೆಗೆ ಹೋದಾಗ ಅಲ್ಲಿ ಉರಿಲಿಂಗ ದೇವರು ಲಿಂಗ ದೀಕ್ಷೆ ನೀಡುವುದನ್ನು ಕಂಡ ಪೆದ್ದಿಯ ಮನ ಪರಿವರ್ತನೆಯಾಗಿ ಮುಂದೆ ಭಕ್ತಿಯಿಂದ ಸಂಸ್ಕಾರವಂತನಾಗಿ ವಚನಗಳನ್ನು ಬರೆದು ಜ್ಞಾನಿಯಾಗಿ ಕಾಲಾಂತರದಲ್ಲಿ ಮಠದ ಸ್ವಾಮಿಯಾಗುವುದೇ ಈ ನಾಟಕದ ಕಥಾ ಸಾರಾಂಶ. ಮಾನವ ಜಾತಿ ಒಂದೇ, ಜಾತಿ ಬೇಧವನ್ನು ಮರೆತವರೇ ನಿಜವಾದ ಶರಣರು ಎಂಬ ಸಂದೇಶವುಳ್ಳ ಈ ನಾಟಕವನ್ನು ಸಾಣೇಹಳ್ಳಿ ಶಿವಕುಮಾರ್ ಕಲಾತಂಡದ ಕಲಾವಿದರು ಉತ್ತಮವಾಗಿ ಪ್ರದರ್ಶಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಗಿನ ನಿರ್ದೇಶಕರಾಗಿದ್ದ ಮನುಬಳಿಗಾರ್ ಅವರು ಪ್ರಾಯೋಜಿಸಿದ 'ಯಮುನೆಯ ತಡಿಯಲ್ಲಿ ಕನ್ನಡ ನುಡಿ' ಸಾಂಸ್ಕೃತಿಕ ಮಾಲಿಕೆಯಲ್ಲಿ 2012ರ ಆಗಸ್ಟ್‌ನಿಂದ ಪ್ರತಿ ತಿಂಗಳು ಎರಡನೇ ಶನಿವಾರದಂದು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಯಶಸ್ವಿಯಾಗಿ ಜರುಗಿ ಜನ ಮನ್ನಣೆ ಪಡೆಯಿತು. ಈ ಮಾಲಿಕೆಯ ಸಮಾರೋಪ ಸಮಾರಂಭವನ್ನು "ಉರಿಲಿಂಗ ಪೆದ್ದಿ' ನಾಟಕ ಪ್ರದರ್ಶನದ ಮೂಲಕ ಆಯೋಜಿಸಲಾಯಿತು. ಕುಡಿಯುವ ನೀರು ಮತ್ತು ನೈರ್ಮಲ್ಯ ಸಚಿವಾಲಯದ ಜಂಟಿ ಕಾರ್ಯದರ್ಶಿ ಹಿರಿಯ ಐ.ಎ.ಎಸ್. ಅಧಿಕಾರಿ ಶ್ರೀ ಟಿ.ಎಂ.ವಿಜಯಭಾಸ್ಕರ್ ಹಾಗೂ ದೆಹಲಿ ಹೈಕೋರ್ಟ್‌ನ ರಿಜಿಸ್ಟ್ರಾರ್ ಶ್ರೀ ಎ.ಎಸ್.ಜಯಚಂದ್ರ ಹಾಗೂ ಹಿರಿಯ ನ್ಯಾಯವಾದಿ ಶ್ರೀ ವಿಶ್ವನಾಥ ಶೆಟ್ಟಿ ಅವರು ಈ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಆಗಮಿಸಿದ್ದರು. ಕರ್ನಾಟಕದ ಸಂಸ್ಕೃತಿ, ಕಲೆಯನ್ನು ನಿರಂತರವಾಗಿ ಬೆಳೆಸಿಕೊಂಡು ಬರುತ್ತಿರುವ ದೆಹಲಿ ಕರ್ನಾಟಕ ಸಂಘವನ್ನು ಅಭಿನಂದಿಸುತ್ತಾ ಕನ್ನಡದ ನಾಟಕವನ್ನು ದೆಹಲಿಯಲ್ಲಿ ಕುಳಿತು ನೋಡುವುದು ನಿಜಕ್ಕೂ ದೆಹಲಿ ಕನ್ನಡಿಗರ ಸುಯೋಗ ಎಂದು ಅತಿಥಿಗಳು ಅಭಿನಂದಿಸಿದರು. ಅಲ್ಲದೇ ಇಡೀ ನಾಟಕವನ್ನು ವೀಕ್ಷಿಸಿ ಅತ್ಯಂತ ಸಂತಸ ವ್ಯಕ್ತಪಡಿಸಿದರು.

❑ ಶಿವಾನಂದ ಇಂಗಳೇಶ್ವರ



# ಮುಂಬೈ ರಾಷ್ಟ್ರೀಯ ಏಕಾಂಕ ನಾಟಕ ಸ್ಪರ್ಧೆಯಲ್ಲಿ ದೆಹಲಿಯ 'ಕನಸು' ತಂಡ

ಮುಂಬೈ ಕರ್ನಾಟಕ ಸಂಘವು ಏರ್ಪಡಿಸಿದ್ದ 17ನೇ ರಾಷ್ಟ್ರೀಯ ಏಕಾಂಕ ನಾಟಕ ಸ್ಪರ್ಧೆಯಲ್ಲಿ ದೆಹಲಿ ಕರ್ನಾಟಕ ಸಂಘದ ಕಲಾವಿದರು ನಾಗರಾಜ ಹೊಸಕೋಟೆ ವಿರಚಿತ, ಟಿ.ಎಂ. ಮೈಲಾರಪ್ಪ ಅವರ ನಿರ್ದೇಶನದ 'ಕನಸು' ನಾಟಕವನ್ನು ಜನವರಿ 19ರಂದು ಪ್ರಸ್ತುತಪಡಿಸಿದರು. ಈ ಸ್ಪರ್ಧೆಯಲ್ಲಿ ಕರ್ನಾಟಕದ ಹೆಸರಾಂತ 13 ನಾಟಕ ತಂಡಗಳು ಪಾಲ್ಗೊಂಡಿದ್ದು ಹೊರನಾಡ ಕನ್ನಡಿಗರ ಏಕೈಕ ತಂಡವಾಗಿ ದೆಹಲಿ ಕರ್ನಾಟಕ ಸಂಘ ಭಾಗವಹಿಸಿತ್ತು. 'ಕನಸು' ನಾಟಕ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು. ಅಲ್ಲದೇ ರಾಷ್ಟ್ರೀಯ ರಾಜಧಾನಿ ದೆಹಲಿಯ ನಾಟಕ ತಂಡ ಭಾಗವಹಿಸಿದ್ದಕ್ಕಾಗಿ ಮುಂಬೈ ಕರ್ನಾಟಕ ಸಂಘದ ಪದಾಧಿಕಾರಿಗಳು ಸಂತಸ ವ್ಯಕ್ತಪಡಿಸಿದರು. ಶ್ಯಾಮಸುಂದರ್, ರಾಮ್‌ಪ್ರಸಾದ್, ಟಿ.ಎಂ. ಮೈಲಾರಪ್ಪ, ಪ್ರತೀಕ್ ಹೆಗಡೆ, ಬಿ. ನಾರಾಯಣ, ಎಸ್. ಕುಮಾರ್, ಶಶಿಧರ ಮನುವಳ್ಳಿ, ಶಶಿಕಾಂತ ಪಾಟೀಲ್, ಬಂಡೆಪ್ಪ, ಹೆಚ್. ಎಸ್. ಜಗದೀಶ್ ಅವರುಗಳು ಸಮರ್ಥ ಅಭಿನಯ ನೀಡಿ ವೀಕ್ಷಕರನ್ನು ರಂಜಿಸುವಲ್ಲಿ ಯಶಸ್ವಿಯಾದರು. ಭೀಮಸೇನ್ ಭಜಂತ್ರಿ, ಸುಧೀರ್ ಪಡ್ನೀಸ್ ಅವರೊಡನೆ ಇದೀಗ ಬೆಂಗಳೂರಿನಲ್ಲಿರುವ ಟಿ.ಎಸ್. ರಮೇಶ್ ಅವರುಗಳು ಹಿನ್ನಲೆ ಸಂಗೀತ ನೀಡಿದರು. ನಾಟಕಕ್ಕೆ ಬೆಳಕು ನೀಡಿದವರು ಯೋಗೇಂದ್ರ ಸಿಂಗ್. ಈ ನಾಟಕದಲ್ಲಿ ರಾಜಕೀಯ ವ್ಯಕ್ತಿಯ ಅತ್ಯುತ್ತಮ ಪ್ರದರ್ಶನ ನೀಡಿದ ಶ್ಯಾಮಸುಂದರ್ ಅವರಿಗೆ ತೀರ್ಪುಗಾರರ ಬಹುಮಾನ ದೊರೆತಿದ್ದು ನಿಜಕ್ಕೂ ಸಂತಸದ ಸಂಗತಿ

ಎಲ್ಲ ಕಲಾವಿದರು ಹಾಗೂ ಬಹುಮಾನ ವಿಜೇತರಾದ ಶ್ಯಾಮಸುಂದರ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾರ್ದಿಕ ಅಭಿನಂದನೆಗಳು.

ದೆಹಲಿಯ ಡಿಸೆಂಬರ್-ಜನವರಿ ತಿಂಗಳ ಕೊರೆಯುವ ಚಳಿಯಲ್ಲೂ ಪ್ರತಿ ದಿನ ಎಲ್ಲರೂ ತಾಲೀಮಿನಲ್ಲಿ ಪಾಲ್ಗೊಂಡು ತಯಾರಿ ನಡೆಸಿದರು. ಇವರಿಗೆ ಶಿವಾನಂದ ಇಂಗಳೇಶ್ವರ ಅವರು ಮಾರ್ಗದರ್ಶನ ಹಾಗೂ ಸಹಕಾರ ನೀಡಿದರು. ಸಂಘದ ಉಪಾಧ್ಯಕ್ಷ ಬಿ. ಕೆ. ಬಸವರಾಜು ಅವರು ಮುಂಬೈಗೆ ಇಡೀ ತಂಡವನ್ನು ವ್ಯವಸ್ಥಿತವಾಗಿ ಕರೆದೊಯ್ದು ತಂಡದ ನೇತೃತ್ವವನ್ನು ನಿರ್ವಹಿಸಿದರು. ರಾಷ್ಟ್ರೀಯ ನಾಟಕೋತ್ಸವದಲ್ಲಿ ಮೂರು ದಿನಗಳ ಕಾಲ ಇತರೇ ನಾಟಕ ತಂಡದ ಕಲಾವಿದರೊಂದಿಗೆ ಒಂದೆಡೆ ಕಲೆಯ ಅನುಭವಗಳನ್ನು ಹಂಚಿಕೊಂಡು ವಿಚಾರ ವಿನಿಮಯ ಮಾಡಿಕೊಂಡಿದ್ದು ಇಡೀ ನಾಟಕ ತಂಡಕ್ಕೆ ನಾಟಕ ಕಾರ್ಯಾಗಾರದಲ್ಲಿ ಭಾಗವಹಿಸಿದಷ್ಟೇ ಸಂತಸವಾಯಿತು. ಈ ಸದವಕಾಶವನ್ನು ಪ್ರಾಯೋಜಿಸಿದ ದೆಹಲಿ ಕರ್ನಾಟಕ ಸಂಘಕ್ಕೆ ಹಾಗೂ ಪ್ರೀತಿಯಿಂದ ಸಹಕರಿಸಿದ ಮುಂಬೈ ಕರ್ನಾಟಕ ಸಂಘಕ್ಕೆ 'ಕನಸು' ನಾಟಕ ತಂಡ ಆಭಾರಿಯಾಗಿದೆ.

❑ ಎಸ್. ಕುಮಾರ್



# ಗಣರಾಜ್ಯೋತ್ಸವ ಪಥ ಸಂಚಲನದಲ್ಲಿ ಮೋಡಿ ಮಾಡಿದ ಕಿನ್ನಾಳ ಕಲೆ




ಕಿನ್ನಾಳ ಕಣ್ಮನ ಸೆಳೆಯುವ ಮನ ಮೋಹಕ ಕರಕುಶಲ ಕಲೆಯ ಹೆಸರು. ಕುಸುರಿ ಕೆಲಸದ ಈ ಕಲೆ ಇರುವುದು ಕಿನ್ನಾಳ ಹಳ್ಳಿಯಲ್ಲಿ. ಕೊಪ್ಪಳದ ಸೆರಗಿನಲ್ಲಿರುವ ಕಿನ್ನಾಳ ತನ್ನಲ್ಲಿ ತಯಾರಾಗುವ ಕರಕುಶಲ ವಸ್ತುಗಳಿಂದ ಈಗಾಗಲೇ ದೇಶ ವಿದೇಶಗಳ ಗಮನ ಸೆಳೆದಿದ್ದು ಇಂದು ನಡೆದ ಪ್ರತಿಷ್ಠಿತ ನವದೆಹಲಿ ಗಣರಾಜ್ಯೋತ್ಸವ ಪಥ ಸಂಚಲನದಲ್ಲಿ ಎಲ್ಲರ ಕಣ್ಮನಸೂರೆಗೊಂಡಿದೆ.

ನಾಡಿನ ಹಿರಿಮೆ-ಗರಿಮೆಗಳನ್ನು ಗಣರಾಜ್ಯೋತ್ಸವ ಪರೇಡ್‌ನಲ್ಲಿ ಸ್ತಬ್ಧಚಿತ್ರಗಳ ಮೂಲಕ ಅನಾವರಣಗೊಳಿಸುವ ಪರಿಪಾಠ ಆರಂಭಗೊಂಡಿದ್ದು 70ರ ದಶಕದ ಆರಂಭದಲ್ಲಿ. ಕೇಂದ್ರ ರಕ್ಷಣಾ ಇಲಾಖೆಯ ಮೇಲ್ವಿಚಾರಣೆಯಲ್ಲಿ ನಡೆಯುವ ಈ ಮಹತ್ವದ ಪರೇಡ್‌ನಲ್ಲಿ ಪಾಲ್ಗೊಳ್ಳುವುದು ಸುಲಭದ ಮಾತಲ್ಲ. ಆದರೆ ಕರ್ನಾಟಕ ಸತತವಾಗಿ 4ನೇ ವರ್ಷವೂ ಪರೇಡ್‌ನಲ್ಲಿ ತನ್ನ ಚಲನ ರೂಪಕವನ್ನು ಬಿಂಬಿಸುವ ಅವಕಾಶ ಪಡೆದುಕೊಂಡಿದೆ. ಪ್ರತಿವರ್ಷ 13 ರಾಜ್ಯಗಳಿಗೆ ಮಾತ್ರ ಇಂತಹ ಅವಕಾಶ ಸಿಗುತ್ತದೆ. ದಕ್ಷಿಣದ ರಾಜ್ಯಗಳ ಪೈಕಿ ಪರೇಡ್‌ಗೆ ಆಯ್ಕೆಯಾದ ಎರಡು ರಾಜ್ಯಗಳಲ್ಲಿ ಕರ್ನಾಟಕವೂ ಒಂದು.

ಗಟ್ಟಿಯಾದ ವಿಷಯ, ಆಳವಾದ ಅಧ್ಯಯನ, ಕೋಟಿ ಕೋಟಿ ಜನರ ಎದುರಿಗೆ ಸಮರ್ಥವಾಗಿ ಬಿಂಬಿಸಬೇಕಾದ ಹೊಣೆಗಾರಿಕೆ. ಪ್ರತಿಯೊಂದು ಅಂಶಕ್ಕೂ ಪರಿಪೂರ್ಣ ಜವಾಬ್ದಾರಿ-ಇವೆಲ್ಲವನ್ನೂ ರಾಜ್ಯ ಸರ್ಕಾರದ ಪರವಾಗಿ ನಿರ್ವಹಿಸುವುದು ಕರ್ನಾಟಕ ವಾರ್ತಾ ಇಲಾಖೆ. ಕಿನ್ನಾಳ ಕಲಾವಿದರ ಮಾದರಿಗಳ ಆಧಾರದ ಮೇಲೆ ಹೆಸರಾಂತ ಕಲಾವಿದ, ಶಶಿಧರ ಅಡಪ ರೂಪಿಸಿರುವ ವಿನ್ಯಾಸ ಆಯ್ಕೆಗೊಂಡಿತು.

ಕಿನ್ನಾಳದ ಮೂಲ ಮಾದರಿಗಳನ್ನು ಸಿದ್ಧ ಮಾಡಿಕೊಟ್ಟಿರುವ ಚಿತ್ರಗಾರರ ಕುಟುಂಬದವರೇ ಚಲನ ರೂಪಕದಲ್ಲೂ ಕಲಾವಿದರಾಗಿ ಪಾಲ್ಗೊಳ್ಳುತ್ತಿದ್ದು ಕೀಮಾಡಲ್‌ನಿಂದ ಮೂವತ್ತು ಅಡಿ ಉದ್ದ 8 ಅಡಿ ಅಗಲದ ನೈಜ ಪ್ರದರ್ಶನ ಸ್ತಬ್ಧ ಚಿತ್ರವನ್ನು ಬೆಂಗಳೂರಿನ ಸಂಜಯ್ ಮಾರ್ಕೆಟಿಂಗ್ ಅಂಡ್ ಪಬ್ಲಿಸಿಟಿ ಸರ್ವೀಸಸ್ ಸಂಸ್ಥೆಯ ಆರ್.ನಾಗರಾಜ್, ಕಲಾವಿದ ರಘು, ಭವಾನಿ ಶಂಕರ್, ಆನಂದ ಕೃಷ್ಣ, ಹಾಗೂ ಕಿನ್ನಾಳದ ಚಿತ್ರಗಾರರೂ ಸೇರಿದಂತೆ 50 ಜನ ಕಲಾವಿದರ ಗುಂಪು ಸಿದ್ಧಪಡಿಸಿತು.

ಬೆಂಗಳೂರಿನ ಸಂಜಯ್ ಸಂಸ್ಥೆ ಕಾರ್ಯಾಗಾರದಲ್ಲಿ ಕಲಾವಿದರು, ಕುಶಲಕರ್ಮಿಗಳು ಒಂದು ತಿಂಗಳಿಂದ 'ಕಿನ್ನಾಳ' ಚಲನರೂಪಕದ ಮುಖ್ಯ ಆಕೃತಿಗಳನ್ನು ಪ್ಲಾಸ್ಟರ್ ಆಫ್ ಪ್ಯಾರೀಸ್, ಉಕ್ಕು, ಬಗೆಬಗೆಯ ಬಣ್ಣಗಳೊಂದಿಗೆ ಬಿಡಿಬಿಡಿಯಾಗಿ ತಯಾರಿಸಿ ನವದೆಹಲಿಗೆ ರವಾನಿಸಿದರು. ಅವು ರಕ್ಷಣಾ ಇಲಾಖೆ ಒದಗಿಸಿದ ಬೃಹತ್ ಟ್ರಾಲಿ ಮೇಲೆ ನೆಲೆಗೊಂಡವು.

ಅಲಂಕಾರಿಕ ವಸ್ತುಗಳಿಗೆ ಹೆಚ್ಚು ಒತ್ತು ಕೊಡುವ ಕಿನ್ನಾಳ ಕಲೆ ಇದೀಗ ನಿತ್ಯ ಉಪಯೋಗಿ ವಸ್ತುಗಳ ತಯಾರಿಕೆಯಲ್ಲೂ ಬಳಕೆಯಾಗುತ್ತಿದೆ. ಪ್ರತಿಮೆ, ಪ್ರಾಣಿ, ಪಕ್ಷಿ, ಮೇಜು, ಚೌಕಿ ಹೀಗೆ ಎಲ್ಲವೂ ಕಿನ್ನಾಳ ಕಲೆಯಿಂದ ಕಳೆಗಟ್ಟುತ್ತವೆ. ಕಲಾವಿದ ಕುಶಲಕರ್ಮಿಗಳು, ಸಂಯೋಜಕರೊಂದಿಗೆ ಸಮನ್ವಯ ಸಾಧಿಸಲು ವಾರ್ತಾ ಇಲಾಖೆ ನಿರ್ದೇಶಕ ಎನ್.ಆರ್.ವಿಶುಕುಮಾರ್, ಎಂ.ರವಿಕುಮಾರ್, ಲಕ್ಷ್ಮೀನಾರಾಯಣ್, ಗಿರೀಶ್, ಚೇತನ್ ಒಳಗೊಂಡ ತಂಡ ತಯಾರಿ ನಡೆಸಿ, ಗಣರಾಜ್ಯೋತ್ಸವ ಪರೇಡ್‌ನಲ್ಲಿ ಅಪ್ಪಟ ದೇಸಿ ಕರಕುಶಲ ಕಲೆ ಕಿನ್ನಾಳ ತನ್ನ ವೈವಿಧ್ಯವನ್ನು ಸಮರ್ಥವಾಗಿ ಮೆರೆದಿದೆ.

## ಕಿನ್ನಾಳ ಕಲೆ

ಈ ಬಾರಿಯ ಗಣರಾಜ್ಯೋತ್ಸವ ಕೊಪ್ಪಳ ಜಿಲ್ಲೆಯ ಪಾಲಿಗೆ ಅತ್ಯಂತ ಮಹತ್ವದ್ದಾಗಿದೆ. ಜಿಲ್ಲೆಯ ಇತಿಹಾಸದಲ್ಲಿಯೇ ಇದೇ ಪ್ರಥಮ ಬಾರಿಗೆ ಕೊಪ್ಪಳ ಜಿಲ್ಲೆಯ ಕಿನ್ನಾಳ ಕಲೆ ರಾಷ್ಟ್ರೀಯ ಅಂತಾರಾಷ್ಟ್ರೀಯ ಮಟ್ಟದ ವೇದಿಕೆಯಲ್ಲಿ ಅನಾವರಣಗೊಂಡಿತು.

ಕೊಪ್ಪಳ ಜಿಲ್ಲಾ ಕೇಂದ್ರದಿಂದ ಕೇವಲ 12 ಕಿ.ಮೀ. ದೂರದಲ್ಲಿದೆ ಕಿನ್ನಾಳ ಗ್ರಾಮ. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಇನ್ನುವಂತೆ ಕೊಪ್ಪಳ ಜಿಲ್ಲೆಯ ಕೊಪ್ಪಳ ತಾಲೂಕಿನ ಕಿನ್ನಾಳ ಗ್ರಾಮದ ಖ್ಯಾತಿ ಪ್ರಪಂಚದಾದ್ಯಂತ ಹಬ್ಬಿದೆ. ವಿವಿಧ ಬಗೆಯ ಗೊಂಬೆಗಳ ಮೂಲಕ ಒಂದು ಹೊಸ ಬಣ್ಣದ ಲೋಕವನ್ನೇ ಸೃಷ್ಟಿಮಾಡುವ ಕಿನ್ನಾಳ ಗ್ರಾಮದ ಚಿತ್ರಗಾರರಿಗೆ ದೊಡ್ಡ ಇತಿಹಾಸ ಹಾಗೂ ಪರಂಪರೆ ಇದೆ. ಕಿನ್ನಾಳ ಕಲೆಗೆ ವಿಜಯನಗರ ಸಾಮ್ರಾಜ್ಯವೇ ಮೂಲ ಕೇಂದ್ರವಾಗಿದ್ದು, ಇದರ ರಾಜಧಾನಿಯಾಗಿದ್ದ ಹಂಪಿಯ ಸಕಲ ಕಲಾ ವೈಭವಕ್ಕೆ ಈ ಕಲೆ ವಿಶೇಷ ಕಾಣಿಕೆ ನೀಡಿದೆ. ಹಂಪಿಯ ವಿರೂಪಾಕ್ಷ ದೇವಾಲಯ, ಪಂಪಾಪತಿ ದೇವಾಲಯಗಳ ಛತ್ತಿನ ಮೇಲೆ ಬಣ್ಣ ಬಣ್ಣಗಳ ವಿಶೇಷ ಚಿತ್ರಕಲೆ ಮೂಡಿರುವುದು, ಈ ಕಲೆಯ ವೈಶಿಷ್ಟ್ಯವನ್ನು ಬಿಂಬಿಸುತ್ತದೆ. ಈ ಸಾಮ್ರಾಜ್ಯದಲ್ಲಿ ರಾಜಾಶ್ರಯದೊಂದಿಗೆ ತಮ್ಮ ಕಲೆಯನ್ನು ನಂಬಿಕೊಂಡು ಜೀವನ ಸಾಗಿಸುತ್ತಿದ್ದ ಚಿತ್ರಗಾರರ ಕುಟುಂಬಗಳು ವಿಜಯನಗರ ಸಾಮ್ರಾಜ್ಯದ ಪತನದ ನಂತರ ದಿಕ್ಕೆಟ್ಟು ಓಡುವಂತಾಯಿತು. ತಮ್ಮ ಕಲೆಗಿಂತ, ಬದುಕು ರೂಪಿಸಿಕೊಳ್ಳುವ ಸಲುವಾಗಿ ವಿವಿಧ ಭಾಗಗಳಿಗೆ ವಲಸೆ ಹೋದರು. ಹೀಗೆ ಕೊಪ್ಪಳ ಜಿಲ್ಲೆಯ ಕಿನ್ನಾಳ ಗ್ರಾಮಕ್ಕೂ ವಲಸೆ ಬಂದ ಕೆಲ ಚಿತ್ರಗಾರರ ಹಲವು ಕುಟುಂಬಗಳು ಇಂದಿಗೂ ಸಾಂಪ್ರದಾಯಕ ಕಿನ್ನಾಳ ಕಲೆಯನ್ನು ಮುಂದುವರೆಸಿಕೊಂಡು, ತಮ್ಮ ಬದುಕು ಕಟ್ಟಿಕೊಂಡಿದ್ದಾರೆ. ನಮ್ಮ ನಾಡಿನಲ್ಲಿ ಕರಕುಶಲ ಕಲೆಗಳಿಗೆ ಶತ ಶತಮಾನಗಳ ರೋಚಕ ಇತಿಹಾಸವಿದೆ. ಇಂದಿನ ಆಧುನಿಕ ಯುಗದಲ್ಲಿಯೂ ಕಿನ್ನಾಳ ಕಲೆ ಜೀವಂತವಾಗಿದೆಯಲ್ಲದೆ, ಕಿನ್ನಾಳ ಕಲೆಯು ತನ್ನದೇ ಆದ ಮಹತ್ವದ ಸ್ಥಾನವನ್ನು ಹೊಂದಿದೆ. ಅನೇಕ ಬಗೆಯ ಬಣ್ಣ ಬಣ್ಣದ ಗೊಂಬೆಗಳ ಕಲೆಗಳ ನಡುವೆಯೂ, ಕಿನ್ನಾಳ ಗೊಂಬೆಗಳ ಬೆಡಗು, ಬಿನ್ನಾಣ, ಗೊಂಬೆಗಳಲ್ಲಿನ ಸಮತೋಲಿತ ವಿನ್ಯಾಸ ಹಾಗೂ ಆಕಾರಗಳು, ಈ ಕಲೆಯ ವೈಶಿಷ್ಟ್ಯಕ್ಕೆ ಬೆರಗಾಗುವಂತೆ ಮಾಡುತ್ತದೆ. ಕಿನ್ನಾಳದ ಪಾರಂಪರಿಕ ಕಲೆ, ಇದೀಗ ವಾಣಿಜ್ಯ ರೂಪ ಪಡೆದು, ವಿವಿಧ ಮಾದರಿಯ ಗೊಂಬೆಗಳ ತಯಾರಿಕೆಗೆ ಬದಲಾಗುತ್ತಿದೆ. ಜನರ ಅಭಿರುಚಿಗಳಿಗೆ ತಕ್ಕಂತೆ, ಚಿಕ್ಕ, ಚಿಕ್ಕ ಗೊಂಬೆಗಳಿಂದ ಮೊದಲುಗೊಂಡು, ದೊಡ್ಡ ಪ್ರಮಾಣದ ಕಲಾ ಮಾದರಿಯ ಗೊಂಬೆಗಳ ತಯಾರಿಕೆಗೆ ಚಿತ್ರಗಾರರು ಹೊಂದಿಕೊಳ್ಳಲಾರಂಭಿಸಿದ್ದಾರೆ.

ಕೊಪ್ಪಳ ಜಿಲ್ಲೆಯ ಕಿನ್ನಾಳ ಕಲೆ ರಾಷ್ಟ್ರ ಮಟ್ಟದಲ್ಲಿ ಅನಾವರಣಗೊಂಡು, ಕಿನ್ನಾಳ ಕಲಾವಿದರ ಕಲಾತ್ಮಕತೆಗೆ ಅಂತರಾಷ್ಟ್ರೀಯ ಮಟ್ಟದಲ್ಲೂ ಮನ್ನಣೆ ದೊರೆಯಲಿ ಎಂಬುದು ಎಲ್ಲರ ಸದಾಶಯವಾಗಿದೆ.

❑ ತುಕಾರಾಂ ರಾವ್ ಬಿ.ವಿ.
ಜಿಲ್ಲಾ ವಾರ್ತಾಧಿಕಾರಿ, ಕೊಪ್ಪಳ

# ಸೂರಜ್‌ಕುಂಡ್ ಮೇಳದಲ್ಲಿ ಅನಾವರಣಗೊಂಡ ಕರ್ನಾಟಕ ದೇಸಿ ಸಂಸ್ಕೃತಿ

**ಎತ್ತೆತ್ತ ನೋಡಿದರತ್ತತ್ತ ಕರ್ನಾಟಕದ ವಾಸ್ತುಶಿಲ್ಪ....ಕಣ್ಮನ ಸೂರೆಗೊಳ್ಳುವ ಕರ್ನಾಟಕ ಕಲಾಕೃತಿ....ಚಂದನದ ನಸುಗಂಪು....ಕಸ್ತೂರಿ ಕನ್ನಡದ ಕಲರವ.... ಜಾನಪದ ಕಲಾ ವೈಭವ...ಮೈನವಿರೇಳಿಸುವ ಡೊಳ್ಳುಕುಣಿತ....ಪೂಜಾಕುಣಿತ....ವೀರಗಾಸೆ.... ಕಂಸಾಳೆ....ಒಂದೆರಡೇ .... ನೂರಾರು ಕಲಾವಿದರು.... ಕರ್ನಾಟಕದ ಸಾಂಸ್ಕೃತಿಕ ವೈವಿಧ್ಯ....ಇಂಪಾದ ಕರ್ನಾಟಕ ಸಂಗೀತದ ತಾಳ–ಮೇಳ... ಕರ್ನಾಟಕದ ಬಗೆಬಗೆಯ ತಿನಿಸುಗಳು.... ಹೆಂಗಳೆಯರ ಮನ ಸೆಳೆವ ರೇಷ್ಮೆ ಸೀರೆಗಳು....ಇಡೀ ಕರ್ನಾಟಕದ ಜಾನಪದ, ಸಾಂಸ್ಕೃತಿಕ, ಐತಿಹಾಸಿಕ ಹಾಗೂ ಸಾಮಾಜಿಕ ಲೋಕವೇ ಹರಿಯಾಣದ ಸೂರಜ್‌ಕುಂಡ್ ಮೇಳದಲ್ಲಿ ಮೇಳೈಸಿದೆ.**

### “ಒಂದು ರಾಜ್ಯ, ಹಲವು ಜಗತ್ತು” ಕೈ ಬೀಸಿ ಕರೆಯುತ್ತಿದೆ ಕರ್ನಾಟಕ




ದೇಸಿ ಕರಕುಶಲ ಕಲೆಗಳ ವಾರ್ಷಿಕ ವೇದಿಕೆ ‘ಸೂರಜ್ ಕುಂಡ್’ ಮೇಳ ದೇಶದ ವಿವಿಧ ಭಾಗಗಳ ಕರಕುಶಲ ಕಲಾವಿದರ ಪ್ರತಿಭೆಯ ಅನಾವರಣಕ್ಕೆ ಅನನ್ಯ ವೇದಿಕೆ. ಪ್ರತಿ ವರ್ಷ ಫೆಬ್ರವರಿ 1 ರಿಂದ 15ರವರೆಗೆ ನಡೆಯುವ ಈ ಮೇಳದಲ್ಲಿ ಈ ಬಾರಿ ಕರ್ನಾಟಕವೇ ಕೇಂದ್ರ ಬಿಂದು ಎಂಬುದು ಕನ್ನಡಿಗರಿಗೆ ಹೆಮ್ಮೆಯ ಸಂಗತಿ. ಎರಡೂವರೆ ದಶಕದಿಂದ ಜಾಗತಿಕ ಕರಕುಶಲ ಕ್ಷೇತ್ರದಲ್ಲಿ ಚಿರಪರಿಚಿತ ಹೆಸರು ಸೂರಜ್‌ಕುಂಡ್. ಭಾರತೀಯ ಕರಕುಶಲ ಕಲೆಗಳ ವೇದಿಕೆಯಾಗಿ ಪ್ರತಿವರ್ಷ ಲಕ್ಷಾಂತರ ಮಂದಿಯ ಗಮನ ಸೆಳೆಯುವ ಸೂರಜ್‌ಕುಂಡ್ ಕರಕುಶಲ ಮೇಳ ಇದೀಗ ಹನ್ನೆರಡು ದೇಶಗಳ ಕಲಾ ಪ್ರದರ್ಶನದ ಜೊತೆ ಅಂತಾರಾಷ್ಟ್ರೀಯ ಮೇಳವಾಗಿ ಪರಿಣಮಿಸಿದೆ. ದೇಶ ವಿದೇಶಗಳ ಪ್ರವಾಸಿಗರನ್ನು ಆಕರ್ಷಿಸುವ ಸೂರಜ್‌ಕುಂಡ್ ಮೇಳ ಕರಕುಶಲ ಉತ್ಪನ್ನ ಮಾರಾಟ ಮಾತ್ರವಲ್ಲದೆ ಕರಕುಶಲ ಕರ್ಮಿಗಳು ಹದಿನೈದು ದಿನ ಇಲ್ಲೇ ನೆಲೆ ನಿಂತು ಕಲಾಕೃತಿ ಪ್ರಾತ್ಯಕ್ಷಿಕೆಗಳನ್ನು ಮಾಡುವ ಅರ್ಥಪೂರ್ಣ ವೇದಿಕೆ. ಪ್ರತಿ ವರ್ಷ ರಾಜ್ಯವೊಂದನ್ನು ಆಯ್ದುಕೊಂಡು ಆ ರಾಜ್ಯದ ಕರಕುಶಲ ಉತ್ಪನ್ನಗಳಿಗೆ ವಿಶೇಷ ಪ್ರಾಧಾನ್ಯತೆ ನೀಡುವುದು ಮೇಳದ ವೈಶಿಷ್ಟ್ಯ. ಸುಮಾರು 19 ವರ್ಷಗಳ ನಂತರ ಈ ಸುಯೋಗ ಕರ್ನಾಟಕದ ಮಡಿಲಿಗೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಕರ್ನಾಟಕದ ವೈವಿಧ್ಯಮಯ ದೇಸಿ ಸಂಸ್ಕೃತಿಯ ಅನಾವರಣ ಸುಮಾರು ವರ್ಷಗಳ ನಂತರ ಇದೇ ಮೊದಲು.

ಶ್ರೀಗಂಧದ ಕಲಾತ್ಮಕ ಕೆತ್ತನೆ, ಆಕರ್ಷಕ ಶಿಲಾಶಿಲ್ಪಗಳು, ಕಣ್ಮನ ಸೆಳೆಯುವ ಕಾಷ್ಠಕಲೆ, ಸುಂದರವಾದ ಕಂಚು, ಹಿತ್ತಾಳೆ, ಪಗಡಿ, ಮಣ್ಣು, ಮರ, ಅರಗಿನ ಆಟಿಕೆಗಳು, ಸೂಕ್ಷ್ಮ ಕುಸುರಿಯ ಬಿದರಿ ವಸ್ತುಗಳು, ಬಿದಿರು ಬೆತ್ತದ ಉತ್ಪನ್ನಗಳು–ಹೀಗೆ ಕರಕುಶಲ ಜಗತ್ತಿಗೆ ಕರ್ನಾಟಕದ ಕೊಡುಗೆ ಅಪಾರ.

ಶ್ರೀಗಂಧದ ಕುಶಲ ಕಲೆಗಳು ಕರ್ನಾಟಕದ ಕರಕೌಶಲ್ಯದ ವಸ್ತುಗಳಲ್ಲಿ ಅಗ್ರಗಣ್ಯ. ಪಶ್ಚಿಮ ಘಟ್ಟಗಳ ಕಾಡುಗಳಲ್ಲಿ ಬೆಳೆಯುವ ಸುವಾಸನೆಯ ಶ್ರೀಗಂಧದ ಮರಗಳಿಂದ ಕೆತ್ತನೆ ಮಾಡಿದ ದೇವಾನುದೇವತೆಗಳ ವಿಗ್ರಹಗಳು, ಆಕರ್ಷಕ ಅಲಂಕಾರಿಕ ವಸ್ತುಗಳು, ನಾಜೂಕಿನಿಂದ ತಯಾರಾಗುವ ಹಾರಗಳು ಕನ್ನಡನಾಡಿನ ಕರಕುಶಲತೆಯನ್ನು ಎತ್ತರಕ್ಕೆ ಕೊಂಡೊಯ್ದಿದೆ.

ಕರ್ನಾಟಕದ ಕಾಡುಗಳಲ್ಲಿ ಸಿಗುವ ತೇಗ, ಹಲಸು, ಮಾವು, ಕರಿ ಮೊದಲಾದ ಜಾತಿ ಮರಗಳಿಂದ ಸಿದ್ಧಗೊಳ್ಳುವ ಕರಕುಶಲ ವಸ್ತು ವಿಶೇಷಗಳು ಹತ್ತು ಹಲವು ಬಗೆ. ಚಿತ್ತಾಕರ್ಷಕ ರಥ, ಸೂಜಿಗಲ್ಲಿನಂತೆ ಸೆಳೆಯುವ ಕಲಾತ್ಮಕ ಬಾಗಿಲುಗಳು, ಸಂಗೀತ ವಾದ್ಯಗಳು, ವಿಗ್ರಹಗಳು, ಆಭರಣ ಪೆಟ್ಟಿಗೆ, ಕುರ್ಚಿ, ಮೇಜು ಇತ್ಯಾದಿ ಬಹುಪಯೋಗದ ಕರಕುಶಲ ವಸ್ತುಗಳು ವಿಖ್ಯಾತ ಕಿನ್ನಾಳ ಮರದಿಂದಲೇ ವಿವಿಧ ರೂಪು ಪಡೆದುಕೊಳ್ಳುವ ಕರಕುಶಲ ಕಲೆ. ಬಗೆಬಗೆಯ ಬಣ್ಣಗಳಿಂದ ಕೂಡಿದ ಮರದ ಚೂರುಗಳಿಂದ ಸಿದ್ಧಗೊಳ್ಳುವ ಪ್ರಸಿದ್ಧ ಹುದುಗು ಕಲೆ, ಕಲಘಟಗಿಯ ರಂಗುರಂಗಿನ ತೊಟ್ಟಿಲು ಮರದಿಂದ ತಯಾರಾಗುವ ಹಸ್ತಶಿಲ್ಪ. . . .

ಮಣ್ಣು ಬಳಸಿ ತಯಾರಾಗುವ ಮಡಿಕೆ ಕುಡಿಕೆ ಬಹುಪ್ರಾಚೀನ. ನಿತ್ಯ ಬಳಸುವ ಪಾತ್ರೆಗಳಿಂದ ಆಟದ ಸಾಮಾನು ಹಾಗೂ ಅಲಂಕಾರಿಕ ವಸ್ತುಗಳವರೆಗೆ ಹರಡಿರುವ ಕಲೆ ಇದು.

ನಾಡಿನ ಬಹಳಷ್ಟು ಆಲಯಗಳಲ್ಲಿ ಕಾಣುವ ಕರಕುಶಲ ಕಲೆಯೇ ಶಿಲ್ಪಕಲೆ. ಶಿಲ್ಪಕಲೆಯ ತೊಟ್ಟಿಲು ಎನ್ನಿಸಿಕೊಂಡ ಐಹೊಳೆ. ಪಟ್ಟದಕಲ್‌ನಿಂದ ಹಿಡಿದು ಬೇಲೂರು–ಹಳೇಬೀಡು, ಹಂಪಿವರೆಗೆ ಕಲ್ಲಿನ ಕೆತ್ತನೆ ಹರಡಿದೆ. ಲೋಹಶಿಲ್ಪ ಶಿಲಾಶಿಲ್ಪದಷ್ಟೇ ಪುರಾತನ. ಕಲ್ಲಿನ ಉಪಯೋಗ ಶುರುವಾದ ಸಂದರ್ಭದಲ್ಲಿ ರೂಢಿಗೆ ಬಂದ ಲೋಹ. ಬಹುಮುಖ್ಯವಾಗಿ ನಿತ್ಯ ಬಳಕೆ ವಸ್ತುಗಳಾಗಿ ರೂಪುಗೊಂಡವು. ಇವುಗಳಲ್ಲಿ ಹಿತ್ತಾಳೆ–ಕಂಚಿನ ಪಾತ್ರೆ ಪಗಡಗಳು ಮುಖ್ಯವಾದವು. ತಾಮ್ರ, ಸತು, ಸೀಸಗಳಿಂದ ರೂಪು ಪಡೆಯುವ ಹಲವು ಕರಕುಶಲ ವಸ್ತುಗಳೂ ನಮ್ಮಲ್ಲಿ ಬೇಕಾದಷ್ಟಿವೆ. ಪ್ರಸಿದ್ಧಿ ಪಡೆದಿರುವ ಬಿದರಿ ಕಲೆ ಇದಕ್ಕೊಂದು ಉದಾಹರಣೆ.

ಉತ್ಸವಮೂರ್ತಿ, ಆಟಿಕೆಗಳಾಗಿ ಬಳಕೆಯಾಗುತ್ತಿದ್ದ ಅರಗು ಕಲೆ ಈಗ ಅಲಂಕಾರಿಕ ವಸ್ತು ತಯಾರಿಕೆಯಲ್ಲೂ ಉಪಯೋಗ ಆಗುತ್ತಿದೆ. ಚನ್ನಪಟ್ಟಣ, ಗೋಕಾಕ, ಮೈಸೂರು ಮೊದಲಾದ ಕಡೆಗಳಲ್ಲಿ ಕರಕುಶಲಿಗಳು ಅರಗು ಕಲೆಯಲ್ಲಿ ನಿಪುಣರು.

ಚಿನ್ನ–ಬೆಳ್ಳಿ ಇತ್ಯಾದಿ ಲೋಹಗಳಿಂದ ಸುಂದರ ಆಭರಣಗಳನ್ನು ತಯಾರಿಸುವ ಕರಕುಶಲಿಗಳು ನಮ್ಮಲ್ಲಿದ್ದಾರೆ. ಬಳೆ, ಗೆಜ್ಜೆ, ಉಂಗುರ, ಸರ ಮೊದಲಾದ ಆಭರಣದ ಮಾದರಿಗಳು ಇಂದಿಗೂ ಬೇಡಿಕೆಯಲ್ಲಿರುವ ಹೆಸರುವಾಸಿ ಆಭರಣಗಳು, ಗಂಡಸರು ಕೆತ್ತನೆ, ಎರಕ, ಹುದುಗು ಕಲೆಗಳಲ್ಲಿ ನೈಪುಣ್ಯ ಸಾಧಿಸಿದರೆ ಮಹಿಳೆಯರು ಹಗುರವಾದ ಬೆಂಡಿನಲ್ಲಿ ಬಾಸಿಂಗ, ಹೂವಿನ ಜಡೆ, ಆಭರಣ, ಮುಖವಾಡ ಹಾರ ಇತ್ಯಾದಿಗಳನ್ನು ತಯಾರಿಸುವಲ್ಲಿ ನಿಪುಣರು.

ಸೂಜಿದಾರ ಉಪಯೋಗಿಸುವ ಕಸೂತಿ, ಲಂಬಾಣಿ ಮಹಿಳೆಯರು ಬಣ್ಣ ಬಣ್ಣದ ಬಟ್ಟೆಗಳೊಂದಿಗೆ ಕನ್ನಡಿ ಚೂರು, ಮಣಿಗಳನ್ನು ಉಡುಗೆ ತೊಡುಗೆಗಳಲ್ಲಿ ಸೇರಿಸಿ ಆಕರ್ಷಕವಾಗಿ ಸಿದ್ಧಪಡಿಸುತ್ತಾರೆ. ನೂರಾರು ವರ್ಷಗಳಿಂದ ಪಾರಂಪರಿಕವಾಗಿ ಬೆಳೆದು ಬಂದಿರುವ ಕರಕುಶಲಕಲೆ ಕಾಲಕ್ಕೆ ತಕ್ಕಂತೆ ಬದಲಾವಣೆ ಹೊಂದಿ ಜೀವಂತವಾಗಿರುವುದೊಂದಿಗೆ ‘ಮಾರುಕಟ್ಟೆ’ ಜಗತ್ತಿಗೂ ಒಗ್ಗಿಕೊಂಡು ಮುಂದುವರೆದಿದೆ. ಸಂಪ್ರದಾಯಬದ್ಧವಾಗಿದ್ದ ಕರಕುಶಲ ಉತ್ಪನ್ನಗಳು ಹೊಸ ಹೊಸ ವಿನ್ಯಾಸಗಳೊಂದಿಗೆ ಸಿದ್ಧಗೊಂಡು ಆಕರ್ಷಿಸುತ್ತಿರುವುದೇ ಇದಕ್ಕೆ ಕಾರಣ. ಪ್ರದರ್ಶನಗಳು, ಕಾಯಂ ನೆಲೆಗಳು ಕರಕುಶಲ ಕಲೆಗೆ ದೊರೆಯುತ್ತಿರುವುದೂ ಇದಕ್ಕೆ ಇನ್ನೊಂದು ಕಾರಣ.






**ರಾಷ್ಟ್ರಪತಿ ಮನಸೆಳೆದ ಕರ್ನಾಟಕದ ವಾಸ್ತುಶಿಲ್ಪ :** ಫೆಬ್ರವರಿ 2ರಂದು ಆರಂಭಗೊಂಡ 27ನೇ ಸೂರಜ್‌ಕುಂಡ್ ಕರಕುಶಲ ಮೇಳದಲ್ಲಿ ಕರ್ನಾಟಕದ ವಿವಿಧ ಶೈಲಿಯ ವಾಸ್ತುಶಿಲ್ಪ ಮಾದರಿಯಲ್ಲಿ ನಿರ್ಮಿಸಲಾಗಿರುವ ಕರ್ನಾಟಕದ ಪ್ರತಿಕೃತಿಗಳು ರಾಷ್ಟ್ರಪತಿ ಪ್ರಣವ್ ಮುಖರ್ಜಿ ಅವರ ಮನಸೆಳೆದವು.



ಮೇಳವನ್ನು ಉದ್ಘಾಟಿಸಿ ಮಾತನಾಡಿದ ರಾಷ್ಟ್ರಪತಿ ಮುಖರ್ಜಿ ತಾವು ಮೈಸೂರು ಅರಮನೆಯ ಸುಂದರ ಮಹಾದ್ವಾರದ ಪ್ರತಿಕೃತಿಯನ್ನು ಖುದ್ದಾಗಿ ಆನಂದಿಸಿದ್ದಾಗಿಯೂ, ಬೇಲೂರು, ಹಂಪಿ, ಜೈನ ಬಸದಿಗಳು ಹಾಗೂ ಬಿಜಾಪುರದ ವಾಸ್ತುಶೈಲಿಗಳನ್ನು ಮೆಚ್ಚಿಕೊಂಡಿದ್ದಾಗಿಯೂ ನುಡಿದರು. ರಾಜ್ಯದ ವಿಶಿಷ್ಟ ಸಾಂಸ್ಕೃತಿಕ ಹಾಗೂ ಪ್ರಾಚ್ಯವಸ್ತು ಪರಂಪರೆಯನ್ನು ಮೇಳದಲ್ಲಿ ಕಣ್ಣಿಗೆ ಕಟ್ಟುವಂತೆ ಪ್ರದರ್ಶಿಸಿದ ಕರ್ನಾಟಕದ ಸರ್ಕಾರವನ್ನು ತಾವು ಅಭಿನಂದಿಸುವುದಾಗಿ ಹೇಳಿದರು.

ಸೂರಜ್‌ಕುಂಡ್ ಮೇಳದ ಯಶಸ್ಸು, ಉಳಿದ ರಾಜ್ಯಗಳೂ ಇಂಥ ಮೇಳ ಸಂಘಟಿಸುವ ಕುರಿತು ಉತ್ಸಾಹ ಮೂಡಿಸಲಿ ಎಂದು ಹಾರೈಸಿದ ರಾಷ್ಟ್ರಪತಿ ಮುಖರ್ಜಿ ಮೇಳವು ಬಣ್ಣತುಂಬಿದ ಹಬ್ಬದ ವಾತಾವರಣ ಮೂಡಿಸಿದೆ. ಮೇಳವು ನಮ್ಮ ದೇಶದ ಕಲಾ ಪ್ರತಿಭೆ ಹಾಗೂ ಕೌಶಲ್ಯಗಳ ಸಂಪತ್ತೇ ನಮ್ಮ ಚೈತನ್ಯ ಮತ್ತು ಹೆಮ್ಮೆ ಕೂಡ ಎಂಬುದನ್ನು ತೋರಿಸಿದೆ ಎಂದರು.

ಕರಕುಶಲ ಹಾಗೂ ಸಾಂಪ್ರದಾಯಿಕ ಕಲೆಗಳು ಭಾರತೀಯ ಜೀವನ ಪದ್ಧತಿಯ ಜೀವಂತ ಉದಾಹರಣೆಯಾಗಿವೆ ಎಂದ ಅವರು ಇವು ಎಂದಿನಿಂದಲೂ ಜನರ ಬದುಕಿಗೆ ಆಧಾರವಾಗಿವೆ. ಅವರ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿ ಸುಧಾರಿಸಿದೆ ಎಂದರು. ಭಾರತದ ಕರಕುಶಲ ಕೈಗಾರಿಕೆಯು ಕಳೆದ ಅನೇಕ ವರ್ಷಗಳಿಂದಲೂ ವಿದೇಶಿ ವಿನಿಮಯ ಆದಾಯ ಹೆಚ್ಚಿಸಲು ಕೊಡುಗೆ ನೀಡಿವೆ ಎಂದರು.

ಮೇಳದ ಉದ್ಘಾಟನೆಗಾಗಿ ಮೇಳದ ಪ್ರವೇಶದ್ವಾರಕ್ಕೆ ಆಗಮಿಸಿದ ರಾಷ್ಟ್ರಪತಿಗಳನ್ನು ಕರ್ನಾಟಕದ ಕಲಾವಿದರು ಬರಮಾಡಿಕೊಂಡರು. ರಾಷ್ಟ್ರಪತಿಗಳಿಗೆ ಮೈಸೂರು ಪೇಟಾ ತೊಡಿಸಿ, ಗಂಧದ ಹಾರ ಹಾಕಿ, ಸಾಂಪ್ರದಾಯಿಕ ಆರತಿಯೆತ್ತಿ ಸ್ವಾಗತಿಸಲಾಯಿತು.



ಪ್ರಧಾನ ವೇದಿಕೆಗೆ ಅವರು ಗಣ್ಯರ ಜತೆ ಆಗಮಿಸಿದ ನಂತರ ಕರ್ನಾಟಕದ ವಿವಿಧ ಕಲಾ ಪ್ರಕಾರಗಳ ಕಲಾವಿದರು ನಾಡಗೀತೆಗೆ ಹೆಜ್ಜೆ ಹಾಕಿದರು. ಆನಂತರ ಪದ್ಮಶ್ರೀ ವಿಜೇತ ರಾಜ್ಯಸಭೆ ಸದಸ್ಯೆ ಶ್ರೀಮತಿ ಬಿ. ಜಯಶ್ರೀ ಅವರ ಎತ್ತರದ ಧ್ವನಿ ಕೇಳಿಬಂದಿತು. ಕಲಾವಿದರ ನಡುವಿನಿಂದ ವೇದಿಕೆಗೆ ಸಂಗಡಿಗರೊಡನೆ ಬಂದ ಅವರು 'ಸಾವಿರದ ಶರಣು ಕರಿಮಾಯಿ' ಗೀತೆ ಹಾಡಿ ಕೆಲ ಕ್ಷಣ ಇಡೀ ವಾತಾವರಣವನ್ನೇ ಸ್ತಬ್ಧಗೊಳಿಸಿದರು.

"ಕರ್ನಾಟಕದ ಬಗ್ಗೆ ಹೊರಗಿನ ರಾಜ್ಯದ ಜನರಿಗೆ ಹೆಚ್ಚಾಗಿ ತಿಳಿದಿಲ್ಲ. ಪ್ರವಾಸಿಗರು ಕೂಡ ಬೇರೆ ರಾಜ್ಯಗಳನ್ನು ಆದ್ಯತೆಯನ್ನಾಗಿ ತೆಗೆದುಕೊಳ್ಳುತ್ತಾರೆಯೇ ವಿನಾ ಕರ್ನಾಟಕದ ಕಡೆ ತಲೆ ಹಾಕುವುದು ಕಡಿಮೆ. ಹಾಗಾಗಿಯೇ ರಾಜ್ಯದ ಪ್ರವಾಸೋದ್ಯಮವನ್ನು ಅತ್ಯಂತ ಪರಿಣಾಮಕಾರಿಯಾಗಿ ಬಿಂಬಿಸಲು ಸೂರಜ್ ಕುಂಡ್ ಮೇಳವನ್ನು ವೇದಿಕೆಯನ್ನಾಗಿ ಬಳಸಿಕೊಳ್ಳಲಿದ್ದೇವೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಕರ್ನಾಟಕ ಇತರ ರಾಜ್ಯದ ಜನರ ಮನಸ್ಸಿಗೆ ಇನ್ನಷ್ಟು ಹತ್ತಿರವಾಗುವಂತೆ ಮಾಡಲಿದ್ದೇವೆ" ಎಂದು ರಾಜ್ಯದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅರವಿಂದ್ ಜಾಧವ್ ಭರವಸೆ ವ್ಯಕ್ತಪಡಿಸಿದ್ದಾರೆ.

ಪ್ರವೇಶದಲ್ಲೇ ನಿಮ್ಮನ್ನು ಸ್ವಾಗತಿಸುವುದು ನಂದಿಧ್ವಜ ಹಾಗೂ ದಸರಾ ಬೃಹತ್ ಬೊಂಬೆಗಳು ಹಾಗೂ ಮೈಸೂರು ಅರಮನೆಯ ಪ್ರವೇಶದ್ವಾರ. ಕರಾವಳಿ ಶೈಲಿಯ ಪತಾಕೆಗಳು ಮೇಳದುದ್ದಕ್ಕೂ ಆಳೆತ್ತರಕ್ಕೆ ಕಾಣಿಸುತ್ತವೆ. ಚಾಲುಕ್ಯ, ಆದಿಲ್ ಶಾಹಿ, ಹೊಯ್ಸಳ, ವಿಜಯನಗರ ಮೊದಲಾದ ವಾಸ್ತುಶಿಲ್ಪ ಆಧರಿಸಿದ ದ್ವಾರಗಳಲ್ಲಿ ಹಾಯ್ದುಹೋದರೆ ಹಂಪಿಯ ಸಾಸಿವೆ ಕಾಳು ಗಣೇಶ, ಉಗ್ರನರಸಿಂಹ, ಪಟ್ಟದಕಲ್ಲಿನ ದುರ್ಗಾ ದೇವಾಲಯ, ಹಂಪಿಯ ಕಲ್ಲಿನ ರಥ,










ಜೈನ ಬಸದಿಗಳು, ಶ್ರವಣ ಬೆಳಗೊಳದ ಗೊಮ್ಮಟೇಶ್ವರ ಮೊದಲಾದವುಗಳನ್ನು ನೋಡಬಹುದು. ಇನ್ನೂ ಇಂಥ ಅನೇಕ ಕಲಾಕೃತಿಗಳ ನಡುವೆ ಹಂಪಿ, ಬೇಲೂರು ಮತ್ತು ಪಟ್ಟದಕಲ್ಲು ವಾಸ್ತುಶಿಲ್ಪ ಶೈಲಿಯ ಪ್ರಧಾನ ವೇದಿಕೆ ಕಾಣುತ್ತದೆ. ಬಲಕ್ಕೆ ಬಿದರಿ ಮತ್ತು ಕಿನ್ನಾಳ ಶೈಲಿಯ ಮಂಟಪದಲ್ಲಿ ಪ್ರವಾಸೋದ್ಯಮ ಮಾಹಿತಿ ಕೇಂದ್ರವಿದೆ. ಪಕ್ಕದಲ್ಲೇ ಸುವರ್ಣ ರಥ ವಿಶೇಷ ರೈಲಿನ ಮಾದರಿಯಿದೆ. ಹಳ್ಳಿಯ ಗುಡಿಸಲುಗಳ ಮಣ್ಣಿನ ಗೋಡೆಗಳ ಮೇಲೆ ಕರ್ನಾಟಕದ ನೇಯ್ಗೆಯ ನವಲಗುಂದ, ಗೋಕಾಕ್ ಜಮಖಾನ, ಕಸೂತಿ, ಲಂಬಾಣಿ ಹಾಗೂ ಇಳಕಲ್ ಸೀರೆಗಳ ಅಂಚಿನ ಚಿತ್ತಾರ ಚಿತ್ತಾಕರ್ಷವಾಗಿದೆ. ಅಲ್ಲದೇ ತೆಂಗಿನ ಗರಿಯ ಪೆಂಡಾಲ್ ವಿಶಿಷ್ಟವಾಗಿದೆ. ಕರ್ನಾಟಕದ ವನ್ಯಜೀವನ ಮತ್ತು ಪರಂಪರೆಯನ್ನು ಪ್ರತಿಬಿಂಬಿಸುವ ಕೆ. ಗುಡಿ ಅರಣ್ಯ ರೆಸಾರ್ಟ್‌ನ ಮಾದರಿಯ ಗುಡಿಸಲು ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿದೆ. ಕರ್ನಾಟಕದ ಇನ್ನೂ ಇಂಥ ಅನೇಕ ಆಕರ್ಷಣೆಗಳನ್ನು ಮೇಳದಲ್ಲಿ ಕಾಣಬಹುದು. ನಾಡಿನ ವಿವಿಧ ಭಾಗಗಳಿಂದ ಆಗಮಿಸಿರುವ ಕಲಾವಸ್ತುಗಳ ಪ್ರದರ್ಶನ ಮತ್ತು ಮಾರಾಟವೂ ಅಂದದ ಮಂಟಪಗಳಲ್ಲಿ ಜರುಗಲಿವೆ. ಅಲ್ಲದೇ ರಾಷ್ಟ್ರೀಯ ಪುರಸ್ಕೃತ ಕುಶಲ ಕರ್ಮಿಗಳು ಪ್ರಾತ್ಯಕ್ಷಿಕೆ ನೀಡಲಿದ್ದಾರೆ.



ಮೇಳದ ಮುಖ್ಯದ್ವಾರದಿಂದ ಹಿಡಿದು ಮೇಳ ಅನಾವರಣಗೊಳ್ಳುವ ಮೈದಾನದಲ್ಲಿ ಕರ್ನಾಟಕದ ವಿವಿಧ ಕಲಾಸಿರಿಗಳು ಕಂಗೊಳಿಸುತ್ತಿದ್ದು, 125 ಮಂದಿ ವಿನ್ಯಾಸ ರಚನೆಯಲ್ಲಿ ಕಳೆದ ಒಂದು ತಿಂಗಳಿಂದ ತೊಡಗಿಸಿಕೊಂಡಿದ್ದಾರೆ. ಕಲಾ ನಿರ್ದೇಶಕ ಶಶಿಧರ ಅಡಪ ಅವರ ನೇತೃತ್ವದಲ್ಲಿ ಮೇಳದ ಮಂಟಪ, ದ್ವಾರ, ಕಂಭ, ಶಿಲ್ಪಕಲೆಗಳನ್ನು ನಿರ್ಮಾಣ ಮಾಡಲಾಗಿದೆ. ಹಲವು ಕಲಾ ಕೆತ್ತನೆಗಳ ಪ್ರತಿಕೃತಿಗಳನ್ನು ಕರ್ನಾಟಕದಿಂದಲೇ ತರಲಾಗಿದೆ ಎಂದು ಅಡಪ ತಿಳಿಸಿದ್ದಾರೆ.

ಕರ್ನಾಟಕದ ವೈನ್ ಉದ್ಯಮವನ್ನೂ ದೇಶ–ವಿದೇಶದ ಜನರಿಗೆ ತೋರಿಸಿಕೊಡುವ ಉದ್ದೇಶದಿಂದ ವೈನ್ ಮಳಿಗೆಯೊಂದನ್ನು ತೆರೆಯಲಾಗಿದೆ. ಜಗದ್ವಿಖ್ಯಾತ ಕಾಫಿ ಉದ್ಯಮ ಹಾಗೂ ಸುಪ್ರಸಿದ್ಧ ಮಲೆನಾಡಿನ ಜೇನು ಮಳಿಗೆಗಳೂ ಕೂಡ ಮಾಹಿತಿ ನೀಡುತ್ತಿವೆ. ರಾಜ್ಯ ವಾರ್ತಾ ಇಲಾಖೆಯ ವಸ್ತುಪ್ರದರ್ಶನ ಮಳಿಗೆಯಲ್ಲಿ ರಾಜ್ಯದ ವಿವಿಧ ಕ್ಷೇತ್ರಗಳ ಸಾಧಕರು, ಐತಿಹಾಸಿಕ ಸ್ಥಳಗಳ ಚಿತ್ರಗಳನ್ನು ಪ್ರದರ್ಶಿಸಲಾಗುತ್ತಿದೆ. ಸುಮಾರು 80 ಚಿತ್ರಗಳನ್ನು ವಸ್ತುಪ್ರದರ್ಶನದಲ್ಲಿ ಪ್ರದರ್ಶಿಸಲಿದ್ದೇವೆ ಎಂದು ವಾರ್ತಾ ಇಲಾಖೆ ನಿರ್ದೇಶಕ ವಿಶುಕುಮಾರ್ ಫೆಬ್ರವರಿ 9ರಂದು ಕರ್ನಾಟಕ ದಿನಾಚರಣೆ ಹಮ್ಮಿಕೊಳ್ಳಲಾಗಿದ್ದು, ಪ್ರಸಾದ್ ಬಿದ್ದಪ್ಪ ಅವರ ತಂಡದಿಂದ ಫ್ಯಾಷನ್ ಲೋಕದ ಅನಾವರಣಗೊಳ್ಳಲಿದೆ.

ಕೊಡವರ 'ಐನ್‌ಮನೆ'ಯೊಂದನ್ನು ನಿರ್ಮಾಣ ಮಾಡಲಾಗಿದ್ದು, ಕೊಡವ ಸಂಸ್ಕೃತಿ, ಕಲೆ ಹಾಗೂ ಜನಜೀವನ ಶೈಲಿಯನ್ನು ಉತ್ತರ ಭಾರತೀಯರಿಗೆ ಪರಿಚಯಿಸುವ ಪ್ರಯತ್ನವನ್ನು ಖುದ್ದು ಕೊಡವರೇ ಮಾಡಿಕೊಡಲಿದ್ದಾರೆ. ಅದಕ್ಕಾಗಿಯೇ ಸುಮಾರು 30 ಮಂದಿ ತಂಡವನ್ನು ಕೊಡಗಿನಿಂದ ಕರೆಸಿಕೊಳ್ಳಲಾಗಿದೆ. 40 ಎಕರೆ ಭೂಪ್ರದೇಶದಲ್ಲಿ ಮೇಳ ಜರುಗುತ್ತಿದ್ದು, 725 ಕರಕುಶಲ ಜೋಪಡಿಗಳ ಜೊತೆಗೆ ಕರ್ನಾಟಕದ ತಿಂಡಿತಿನಿಸುಗಳ ರುಚಿ ನೀಡಲು ಫುಡ್ ಕೋರ್ಟ್‌ವೊಂದನ್ನೂ ತೆರೆಯಲಾಗಿದೆ.

ಕರ್ನಾಟಕದ ಸುಪ್ರಸಿದ್ಧ ಸಾಂಸ್ಕೃತಿಕ ವೈವಿಧ್ಯಮಯ ಕಾರ್ಯಕ್ರಮಗಳು ಆಕರ್ಷಕವಾಗಿವೆ. ಸುಗ್ಗಿ ಕುಣಿತ, ಕೊಡವ ನೃತ್ಯ, ಯಕ್ಷಗಾನ, ವೀರಗಾಸೆ, ಕಂಸಾಳೆ, ಜಗ್ಗಲಿಗೆ, ಡೊಳ್ಳು, ಕೀಲು ಕುದುರೆ, ನಗಾರಿ, ಪೂಜಾ ಕುಣಿತ, ಗೊರವರ ಕುಣಿತ ಮೊದಲಾದ ಪ್ರದರ್ಶನದಲ್ಲಿ ಕರ್ನಾಟಕದ ಸುಮಾರು 300 ಕಲಾವಿದರು ತಮ್ಮ ಕಲೆಯನ್ನು ಪ್ರದರ್ಶಿಸುತ್ತಿದ್ದಾರೆ. ಉತ್ತರ ಕರ್ನಾಟಕ ಕರಾವಳಿ, ಮೈಸೂರು, ಮಲೆನಾಡು ಮೊದಲಾದ ಕರ್ನಾಟಕದ ವೈವಿಧ್ಯಮಯ ವಿಶಿಷ್ಟ ತಿಂಡಿ–ತಿನಿಸು, ಊಟಗಳು ಬಾಯಲ್ಲಿ ನೀರೂರಿಸುತ್ತಿವೆ.


ಈ ಮೇಳವನ್ನು ಅತ್ಯಂತ ಯಶಸ್ವಿಯಾಗಿ ಆಯೋಜಿಸಲು ಕನಾಟಕ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅರವಿಂದ ಜಾಧವ್, ಪ್ರವಾಸೋದ್ಯಮ ಇಲಾಖೆಯ ನಿರ್ದೇಶಕಿ ಸತ್ಯವತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಬಸವರಾಜು, ವಾರ್ತಾ ಇಲಾಖೆಯ ನಿರ್ದೇಶಕ ವಿಶುಕುಮಾರ್, ಕಲಾ ನಿರ್ದೇಶಕ ಶಶಿಧರ್ ಅಡಪ ಹಾಗೂ ರಂಗಕರ್ಮಿ ಕಪ್ಪಣ್ಣ ಅವರುಗಳು ಅವಿರತ ಶ್ರಮ ವಹಿಸಿದ್ದಾರೆ. ಇವರೊಂದಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಭಾವಿಕಟ್ಟಿ, ರಿಜಿಸ್ಟ್ರಾರ್ ಮಲ್ಲಿಕಾರ್ಜುನ ಸ್ವಾಮಿ ಹಾಗೂ ದೆಹಲಿ ವಾರ್ತಾ ಇಲಾಖೆಯ ಉಪನಿರ್ದೇಶಕ ಎಲ್.ಪಿ. ಗಿರೀಶ್ ಹಾಗೂ ನೂರಾರು ಕಲಾವಿದರು ತಮ್ಮ ನೆರವನ್ನು ನೀಡಿದ್ದಾರೆ.

ಕರ್ನಾಟಕದ ಕಲೆ, ಸಂಸ್ಕೃತಿ ವಿಶ್ವದಾದ್ಯಂತ ಪಸರಿಸಲಿ, ಕರ್ನಾಟಕದ ಸೊಬಗನ್ನು ಸವಿಯಲು ಜಗತ್ತಿನಾದ್ಯಂತದಿಂದ ಪ್ರವಾಸಿಗರು ಬರಲಿ ಎಂಬ ಈ ಮೇಳದ ಆಶಯ ಈಡೇರಲಿ ಎಂದು ಆಶಿಸೋಣ.

**❑ ಫೋಟೋ ಕೃಪೆ: ಬಸ್ತಿ ದಿನೇಶ್ ಶೆಣೈ**







# ಅಗಲಿದ ಆದಿಚುಂಚನಗಿರಿ ಮಠಾಧೀಶರಾದ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರಿಗೆ ಅಶ್ರು ನಮನ



ಆದಿಚುಂಚನಗಿರಿ ಮಠಾಧೀಶರಾದ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರು ಜನವರಿ 13ರಂದು ಬೆಂಗಳೂರಿನಲ್ಲಿ ವಿಧಿವಶರಾದರು. ತಮ್ಮ ಬದುಕನ್ನು ಜನ ಸಮುದಾಯದ ಅಭಿವೃದ್ಧಿಗೆ ನಿರಂತರವಾಗಿ ಮೀಸಲಿಟ್ಟು ಬಾಳನ್ನು ಚಂದನದ ಹಾಗೆ ತೇಯ್ದ ಈ ಮಹಾಯೋಗಿಯು ಶಿಕ್ಷಣ, ಆರೋಗ್ಯ ಮತ್ತು ಪರಿಸರದ ವಿಷಯಗಳಲ್ಲಿ ಕ್ರಾಂತಿಕಾರಿ ನಿಲುವುಗಳನ್ನು ತಳೆದು ನಾಡಿನಾದ್ಯಂತ ಪ್ರಸಿದ್ಧರಾದರು.

ಸ್ವಾಮೀಜಿಯವರು ಮೊದಲು ಆದ್ಯತೆ ನೀಡಿದ್ದು ಶಿಕ್ಷಣಕ್ಕೆ. ನಮ್ಮ ಹಳ್ಳಿಗಳು ಮತ್ತು ಹಿಂದುಳಿದ ಜನರು ಪ್ರಗತಿಯಾಗಬೇಕಾದರೆ ಅವರಿಗೆ ಶಿಕ್ಷಣ ನೀಡಬೇಕಾದ್ದು ಅಗತ್ಯವೆಂದು ಭಾವಿಸಿದ್ದ ಅವರು ನಾಡಿನ ಎಲ್ಲಡೆಗಳಲ್ಲಿ ನೂರಾರು ಶಿಕ್ಷಣ ಸಂಸ್ಥೆಗಳನ್ನು ತೆರೆದು ಲಕ್ಷಾಂತರ ಮಂದಿಗಳ ಬಾಳಿಗೆ ಬೆಳಕಾದರು. ಹಸಿದು ಬಂದವರಿಗೆ ಅನ್ನ ನೀಡುವ, ಅಗತ್ಯವಿರುವ ಬಡವರಿಗೆ ಉಚಿತ ವೈದ್ಯಕೀಯ ಸಹಾಯ ನೀಡುವ ಶ್ರೀ ಸ್ವಾಮೀಜಿಯವರ ಕೆಲಸಗಳು ದೇಶದಾದ್ಯಂತ ಮನ್ನಣೆ ಪಡೆದವು. ದೇಶ ವಿದೇಶಗಳನ್ನು ಸುತ್ತಿದ್ದ ಸ್ವಾಮೀಜಿಯವರು ತಾವು ನಂಬಿದ ಸಾಮಾಜಿಕ ಮತ್ತು ಧಾರ್ಮಿಕ ನಂಬಿಕೆಗಳನ್ನು ತಾವು ಹೋದಲೆಲ್ಲ ಜನಗಳಿಗೆ ತಲುಪಿಸಿದರು

ದೆಹಲಿ ಕರ್ನಾಟಕ ಸಂಘದೊಂದಿಗೆ ನಿಕಟ ಸಂಪರ್ಕ ಹೊಂದಿದ್ದ ಸ್ವಾಮೀಜಿಯವರು ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮಾರ್ಗದರ್ಶನ ಮಾಡಿದ್ದರು ಹಾಗೂ ಕರ್ನಾಟಕ ಸಂಘದ ಹೊಸ ಕಟ್ಟಡಕ್ಕೆ ಶಂಕುಸ್ಥಾಪನೆ ಮಾಡಿದ್ದರು. ಇವರಿಗೆ ಜನವರಿ 13ರ ಸಂಜೆ ದೆಹಲಿ ಕರ್ನಾಟಕ ಸಂಘದಲ್ಲಿ ಸುಪ್ರಿಂಕೋರ್ಟ್‌ನ ನ್ಯಾಯಮೂರ್ತಿಗಳಾದ ಶ್ರೀ ಗೋಪಾಲಗೌಡರ ಅಧ್ಯಕ್ಷತೆಯಲ್ಲಿ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಶ್ರದ್ಧಾಂಜಲಿ ಕಾರ್ಯಕ್ರಮದಲ್ಲಿ ದೆಹಲಿಯ ಒಕ್ಕಲಿಗ ಗೌಡ ಸಮಾಜ ಹಾಗೂ ಇತರೆ ಸಂಘ ಸಂಸ್ಥೆಗಳು ಭಾಗವಹಿಸಿದ್ದವು.

ಸ್ವಾಮೀಜಿಯವರನ್ನು ಬಹಳ ಹತ್ತಿರದಿಂದ ಬಲ್ಲ ಸುಪ್ರೀಂಕೋರ್ಟ್‌ನ ಹಿರಿಯ ನ್ಯಾಯಮೂರ್ತಿಗಳಾದ ವಿ. ಗೋಪಾಲಗೌಡರು ಸ್ವಾಮೀಜಿಯವರ ಧೀಮಂತ ವ್ಯಕ್ತಿತ್ವವನ್ನು ಬಣ್ಣಿಸುತ್ತಾ "ಸಾಮಾನ್ಯ ರೈತ ಕುಟುಂಬದಿಂದ ಬಂದ ದಿವ್ಯ ಶಕ್ತಿ ಸ್ವಾಮೀಜಿಯವರು ರೈತರ ಬಗ್ಗೆ, ಜನಸಾಮಾನ್ಯರ ಬಗ್ಗೆ ವಿಶೇಷ ಕಾಳಜಿ, ಒಲವು ತೋರಿದವರು. ಸಮಾಜದ ಮಾರ್ಪಾಡಿಗಾಗಿ, ಬಡವರ ಏಳಿಗೆಗಾಗಿ ಹಾಗೂ ರೈತರ ಅಭಿವೃದ್ಧಿಗಾಗಿ ಅವರು ನೀಡಿದ ಕಾಣಿಕೆ ಅನುಪಮವಾದದ್ದು. ಕರ್ನಾಟಕದ ಗ್ರಾಮೀಣ ಜನತೆಗೆ ಅಂತಾರಾಷ್ಟ್ರೀಯ ಮಟ್ಟದ ವಿದ್ಯೆಯನ್ನು ನೀಡುವಲ್ಲಿ ಅಪಾರ ಶ್ರಮ ವಹಿಸಿದ್ದಾರೆ. ಬಡ ವಿದ್ಯಾರ್ಥಿಗಳಿಗೆ ವೈದ್ಯಕೀಯ ಶಿಕ್ಷಣ ನೀಡಲು ದೇಶ ವಿದೇಶಗಳನ್ನು ಸುತ್ತಿ ಕೋಟ್ಯಾಂತರ ರೂಪಾಯಿ ದೇಣಿಗೆ ತಂದು ಜನಸೇವೆ ಮಾಡಿದ್ದಾರೆ. ಆಧ್ಯಾತ್ಮಿಕ ಚಿಂತನೆ, ಕೃಷಿ ಅಭಿವೃದ್ಧಿ ಹಾಗೂ ಆರ್ಥಿಕ ಬೆಳವಣಿಗೆಗೆ ಅವರು ನೀಡಿದ ಸೇವೆ ಅದ್ವಿತೀಯ. ಬಹುಮತೀಯ ಸಮಾಜದ ವ್ಯವಸ್ಥೆಯಲ್ಲಿ ಜನರಿಗೆ ಮಾನವೀಯ ಮೌಲ್ಯಗಳನ್ನು, ಸಾಮಾಜಿಕ ಪರಿವರ್ತನೆಯನ್ನು ತಂದ ಮಹಾನ್ ಚೇತನ. ಶಿಕ್ಷಣ ರಂಗ, ಸಾಮಾಜಿಕ ರಂಗ, ಆಧ್ಯಾತ್ಮಿಕ ರಂಗದಲ್ಲಿ ಅವರು ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿದಿದ್ದಾರೆ" ಎಂದು ಗುಣಗಾನ ಮಾಡಿದರು. ಅವರು ಮಾಡಿದ ಜನಸೇವೆ ಎಂದೂ ಚರಿತ್ರಾರ್ಹವಾದದ್ದು, ಹಾಗೂ ಅವರ ಆದರ್ಶಗಳು ಎಂದಿಗೂ ಅನುಕರಣೀಯ ಎಂದು ಗೋಪಾಲಗೌಡರು ತಮ್ಮ ಭಕ್ತಿಪೂರ್ವಕ ನಮನಗಳನ್ನು ಸಲ್ಲಿಸಿದರು.

ದೆಹಲಿಯ ಕರ್ನಾಟಕ ಸರ್ಕಾರದ ವಿಶೇಷ ಸಮನ್ವಯಾಧಿಕಾರಿ ಬೈಕೆರೆ ನಾಗೇಶ್ ಅವರು ಸ್ವಾಮೀಜಿಯವರು ತೋರಿದ ಜಾತ್ಯಾತೀತ ಮನೋಭಾವ, ಸರ್ವಧರ್ಮ ಸಮನ್ವಯತೆ ಎಂದಿಗೂ ಅಭಿನಂದನೀಯ ಹಾಗೂ ಅನುಕರಣೀಯವಾದದ್ದು ಎಂದು ಮನದುಂಬಿ ನುಡಿದರು. ಸ್ವಾಮೀಜಿಯವರ ಆಶೀರ್ವಾದದಿಂದ ಇಂದು ಲಕ್ಷಾಂತರ ಮಂದಿ ವಿದ್ಯಾವಂತರಾಗಿ, ಉನ್ನತ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿರುವುದು ಶ್ಲಾಘನೀಯ ಎಂದರು.

ನ್ಯಾಯವಾದಿ ಇ.ಸಿ.ವಿದ್ಯಾಸಾಗರ್ ಅವರು ಸರಳ ವ್ಯಕ್ತಿತ್ವವುಳ್ಳ ಸ್ವಾಮೀಜಿಯವರ ತ್ಯಾಗ, ದೂರದೃಷ್ಟಿ ನಿಜಕ್ಕೂ ಹೆಮ್ಮೆ ಪಡುವಂತಹದ್ದು. ಶಾರೀರಿಕವಾಗಿ ಅವರು ಇಲ್ಲದಿದ್ದರೂ ಅವರ ಮಾನವ ಸೇವೆ ಎಂದೂ ಅಮರ ಎಂದು ತಮ್ಮ ಶ್ರದ್ಧಾಪೂರ್ವಕ ನಮನ ಸಲ್ಲಿಸಿದರು.

ಸ್ವತಃ ಕೃಷಿಕ ಮನೆತನದವರಾಗಿದ್ದ ಸ್ವಾಮೀಜಿಯವರು 5 ಕೋಟಿ ಮರಗಳನ್ನು ನೆಡುವ ಮೂಲಕ ತಮ್ಮ ಪರಿಸರ ಪ್ರೇಮವನ್ನು ಮೆರೆದಿದ್ದಾರೆ ಎಂದು ವಿ.ಆರ್.ಗುಡ್ಡೇಗೌಡ ಅವರು ನುಡಿದರು. ಜಾನಪದ ಸಂಸ್ಕೃತಿ, ಕಲೆಗಳನ್ನು ಉಳಿಸಿ, ಬೆಳೆಸುವಲ್ಲಿ ಸದಾ ಪ್ರೋತ್ಸಾಹ ನೀಡುತ್ತಿದ್ದ ಸ್ವಾಮೀಜಿಯವರ ಕೊಡುಗೆ ಅಪಾರ ಎಂದು ಅವರು ನುಡಿದರು.

ಭಾರತೀಯ ಸಂಸ್ಕೃತಿಯ ಮೂಲಕ ಆಧುನಿಕ ಮಾರ್ಗವನ್ನು ತೆರೆದಿಟ್ಟ ಸ್ವಾಮೀಜಿಯವರು ಕೃಷಿಕ್ ಸರ್ವೋದಯ ಫೌಂಡೇಶನ್‌ಗೆ ಸದಾ ಉತ್ತೇಜನ ನೀಡುತ್ತಾ ಮಾರ್ಗದರ್ಶಿಯಾಗಿದ್ದರು ಎಂಬುದಾಗಿ ಎನ್.ಎ.ಮಾಧವ ಅವರು ಸ್ಮರಿಸಿದರು.


ಸಂಘದ ಅಧ್ಯಕ್ಷ ಡಾ.ವೆಂಕಟಾಚಲ ಹೆಗಡೆ ಅವರು ಬಾಲಗಂಗಾಧರನಾಥ ಸ್ವಾಮೀಜಿಯವರು ಸಂಘದ ಹೊಸ ಕಟ್ಟಡಕ್ಕೆ ಶಂಕುಸ್ಥಾಪನೆ ಮಾಡಿದ್ದನ್ನು ಸ್ಮರಿಸುತ್ತಾ ಸಂಘದ ಶ್ರೇಯೋಭಿವೃದ್ಧಿಗೆ ಅವರ ಕೃಪಾಶೀರ್ವಾದ ಸದಾ ಇದೆ ಎಂಬುದಾಗಿ ಹೇಳಿದರು.

ವಸಂತ ಶೆಟ್ಟಿ ಬೆಳ್ಳಾರೆ, ಟಿವಿ–9ನ ಚಂದ್ರಮೋಹನ್, ಹಾಗೂ ಸಂಘದ ಕಾರ್ಯದರ್ಶಿ ಸಿ.ಎಂ.ನಾಗರಾಜ ಅವರು ಸ್ವಾಮೀಜಿಯವರ ದಿವ್ಯಸ್ಮರಣೆಯೊಂದಿಗೆ ತಮ್ಮ ಸಂತಾಪ ಸೂಚಿಸಿದರು.

ಸ್ವಾಮೀಜಿಯವರ ಅಪಾರ ಅಭಿಮಾನಿಗಳು ಹಾಗೂ ಎಲ್ಲ ಮಾಧ್ಯಮ ಮಿತ್ರರು ಈ ಸಭೆಯಲ್ಲಿ ಭಾಗವಹಿಸಿ ತಮ್ಮ ಶ್ರದ್ಧಾಂಜಲಿ ಸಲ್ಲಿಸಿದರು.

❑ ಉಷಾ ಭರತಾದ್ರಿ

# ಪ್ರಕೃತಿಯಲ್ಲಿ ಲೀನವಾದ ಮಹಾನ್ ಚೇತನ
# ಶ್ರೀ ಡಾ.ಬಾಲಗಂಗಾಧರನಾಥ ಮಹಾ ಸ್ವಾಮೀಜಿ



ಶಿಕ್ಷಣ, ಆರೋಗ್ಯ, ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರದಲ್ಲಿ ಮೇರು ಸೇವೆ ಸಲ್ಲಿಸಿರುವ ಆದಿಚುಂಚನಗಿರಿ ಮಹಾಸಂಸ್ಥಾನದ ಪೀಠಾಧ್ಯಕ್ಷ ಶ್ರೀ ಡಾ.ಬಾಲಗಂಗಾಧರನಾಥ ಮಹಾಸ್ವಾಮೀಜಿ ಅವರು ಜನವರಿ 13 ರಂದು ವಿಧಿವಶರಾದರು. ಆದಿಚುಂಚನಗಿರಿ ಮಠದ ಖ್ಯಾತಿಯನ್ನು ಅಂತಾರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದು ಕೀರ್ತಿಗೆ ಭಾಜನರಾಗಿದ್ದ ಶ್ರೀಗಳು, ಮೂತ್ರಪಿಂಡ ವೈಫಲ್ಯ ಹಾಗೂ ಹೃದಯಾಘಾತದಿಂದ ಕೆಂಗೇರಿ ಬಳಿಯ ಬಿಜಿಎಸ್ ಗ್ಲೋಬಲ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಭೌತಿಕ ಶರೀರ ತೊರೆದರು.

ರಾಮನಗರ ಜಿಲ್ಲೆ ಬಿಡದಿ ಸಮೀಪದ ಬಾನಂದೂರು ಗ್ರಾಮ ಸ್ವಾಮೀಜಿ ಅವರ ಹುಟ್ಟೂರು. ಚಿಕ್ಕಲಿಂಗಪ್ಪ–ಬೋರಮ್ಮ ದಂಪತಿಯ 3ನೇ ಮಗುವಾಗಿ 1945ರ ಜನವರಿ 18ರಂದು ಜನಿಸಿದರು. ಮೂಲ ಹೆಸರು ಗಂಗಾಧರಯ್ಯ. ಬಾನಂದೂರಿನಲ್ಲಿ ಪ್ರಾಥಮಿಕ, ಬಿಡದಿಯಲ್ಲಿ ಮಾಧ್ಯಮಿಕ ಶಾಲಾ ಶಿಕ್ಷಣ. ರಾಮನಗರದ ವಿವಿಧೋದ್ದೇಶ ಪ್ರೌಢಶಾಲೆಯಲ್ಲಿ ಪ್ರೌಢ ಶಿಕ್ಷಣ ಮುಗಿಸಿದರು. ಬೆಂಗಳೂರಿನ ಸರಕಾರಿ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ ವಿಜ್ಞಾನ ವಿಷಯದಲ್ಲಿ ಪದವಿ ಪೂರ್ವ ತರಗತಿಗೆ ಪ್ರವೇಶ. ನಂತರ ಬಿಎಸ್ಸಿ ಮುಗಿಸಿದರು. ಆ ವೇಳೆ ಸಾಧು ಸಂತರಿಗೆ ಆಶ್ರಯ ತಾಣವಾಗಿದ್ದ ಸಂಪಂಗಿ ರಾಮನಗರದ ಹತ್ತಿರದ ಚಿದ್ಗಗನಾನಂದಾಶ್ರಮದಲ್ಲಿ ಕೆಲ ವರ್ಷ ವಾಸವಿದ್ದರು. ಚಿಕ್ಕಂದಿನಿಂದಲೇ ಅಧ್ಯಯನ, ಆಧ್ಯಾತ್ಮ, ವೈದ್ಯಕೀಯ ವಿಷಯಗಳಲ್ಲಿ ಅತೀವ ಆಸಕ್ತಿ. ಯಾವುದನ್ನೂ ವಿಶ್ಲೇಷಿಸದೆ ನಂಬದ ವ್ಯಕ್ತಿತ್ವ, ವೈಚಾರಿಕ ಮನೋಭಾವ. ಬದುಕಿನ ಸಾರ್ಥಕತೆಯ ಬಗ್ಗೆ ನಡೆಯುತ್ತಿದ್ದ ಅವರ ಮನೋ ಮಥನ ಮುಂದೆ ಅವರು ಸ್ವೀಕರಿಸಿದ ಸನ್ಯಾಸ ವ್ರತ ಸ್ವೀಕಾರಕ್ಕೆ ಪ್ರೇರಣೆಯಾಗಿತ್ತು. ಊರಿನ ಸಮೀಪದ ಹಿಪ್ಪೆ ಮರ ಇವರಿಗೆ ಬೋಧಿ ವೃಕ್ಷ ದಷ್ಟೇ ಪವಿತ್ರವಾಗಿತ್ತು. ಲೌಕಿಕ ವಿಷಯಗಳಲ್ಲಿ ಅವರು ಅಂಟಿಯೂ ಅಂಟದಂತಿದ್ದರು. ಮನಸ್ಸಿಗೆ ಮೀರಿದ ಆಧ್ಯಾತ್ಮಿಕ ಪ್ರೀತಿ ಅವರಿಗೆ ಸಹಜ ವೈರಾಗ್ಯ ತಂದಿತ್ತು. ಬಿಎಸ್ಸಿ ಪದವಿಗೆ ಸೇರುವ ಮುನ್ನ ತಾವು ಓದಿದ ರಾಮನಗರದ ಪ್ರೌಢಶಾಲೆಯಲ್ಲಿ ಕೆಲ ತಿಂಗಳ ಕಾಲ ಗುಮಾಸ್ತರಾಗಿದ್ದರು. ಆಗ ಆದಿಚುಂಚನಗಿರಿ ಮಠಾಧೀಶರನ್ನು ಕಾಣಬಯಸಿ ಬರೆದ ಪತ್ರ ಅವರ ವಿನಯ, ಸಂಸ್ಕೃತಿ, ವಿದ್ಯೆ ಬಗೆಗಿನ ಆಸಕ್ತಿ ಹಾಗೂ ಅಧ್ಯಾತ್ಮಿಕ ಬಲವನ್ನು ತೋರಿಸುವಂತಿತ್ತು. 1968ರ ಫೆಬ್ರವರಿ 12ರಲ್ಲಿ ಸನ್ಯಾಸ ದೀಕ್ಷೆ ಸ್ವೀಕರಿಸಿದರು. ಅಂದಿನ ಪೀಠಾಧಿಪತಿ ಶ್ರೀ ರಾಮಾನಂದನಾಥ ಸ್ವಾಮೀಜಿ ಅವರು ಗಂಗಾಧರಯ್ಯನಿಗೆ ಮಂತ್ರೋಪದೇಶದೊಂದಿಗೆ ಸನ್ಯಾಸ ದೀಕ್ಷೆ ನೀಡಿ, 'ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ' ಎಂದು ಮರು ನಾಮಕರಣ ಮಾಡಿದರು. ಆ ಬಳಿಕ ಬೆಂಗಳೂರಿನ ಕೈಲಾಸಾಶ್ರಮದಲ್ಲಿ ಇದ್ದುಕೊಂಡು ಅದ್ವೈತ ವೇದಾಂತ ಸಂಸ್ಕೃತ ಪದವಿ ಪಡೆದರು. ಕೈಲಾಸಾಶ್ರಮದ ಶ್ರೀ ತಿರುಚ್ಚಿ ಸ್ವಾಮಿಗಳ ಸಾನ್ನಿಧ್ಯದಲ್ಲಿ ತತ್ವ ವಿಚಾರಗಳ ಅಧ್ಯಯನ. ನಂತರ ಗುರುಗಳ ಶುಶ್ರೂಷೆಗೆ ವಾಪಸಾದ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅವರು ಶ್ರೀ ರಾಮಾನಂದನಾಥ ಸ್ವಾಮೀಜಿಯ ನಿಧನಾನಂತರ 1974 ಸೆಪ್ಟೆಂಬರ್ 25ರಂದು ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ 71ನೇ ಪೀಠಾಧಿಪತಿಗಳಾಗಿ ಪಟ್ಟಕ್ಕೇರಿದರು.

ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಶ್ರೀ ಆದಿಚುಂಚನಗಿರಿ ಕ್ಷೇತ್ರದ 71ನೇ ಪೀಠಾಧ್ಯಕ್ಷರಾಗಿ ಪಟ್ಟಕ್ಕೆ ಬಂದ ನಂತರ ಮಾಡಿದ ಸಾಧನೆ ಅಪಾರ, ನಿರೀಕ್ಷೆಗೂ ನಿಲುಕದ್ದು. ಅವರ ಪಟ್ಟಾಭಿಷೇಕದ ಬಳಿಕ ಇಡೀ ಮಠದ ಚಿತ್ರಣವೇ ಬದಲಾಯಿತು. ಅಭಿವೃದ್ಧಿಗೊಂದು ಪಥ ಸಿಕ್ಕಿತು. ಪವಾಡ ಸದೃಶ ರೀತಿಯಲ್ಲಿ ಮಠ ಪುನರ್ ನಿರ್ಮಾಣಗೊಂಡಿತು. ಇಡೀ ದೇಶವೇ ಆದಿಚುಂಚನಗಿರಿಯತ್ತ ತಿರುಗಿ ನೋಡುವಂತೆ ಮಾಡಿದ ಕೀರ್ತಿ ಶ್ರೀಸ್ವಾಮೀಜಿ ಅವರದು. ಆ ಮೂಲಕ ನಾಗಮಂಗಲ ತಾಲೂಕಿನ ಚುಂಚನಗಿರಿಯನ್ನು ಚಿನ್ನದಗಿರಿಯನ್ನಾಗಿ ರೂಪಿಸಿದ ಸಾಧಕ, ಸದ್ಗುರು ಇವರು. 300 ವರ್ಷಗಳಲ್ಲಿ ಸಾಧಿಸಲಾಗದ್ದನ್ನು ಕೇವಲ ಮೂರೂವರೆ ದಶಕಗಳಲ್ಲಿ ಸಾಧಿಸಿದ ಪವಾಡ ಪುರುಷ ಇವರು. ಸ್ವಾಮೀಜಿಯವರು ಮೊದಲ ಆದ್ಯತೆ ನೀಡಿದ್ದು ಶಿಕ್ಷಣ ಕ್ಷೇತ್ರಕ್ಕೆ. ಹಳ್ಳಿಗರ ಉದ್ಧಾರ ಆಗಬೇಕಾದರೆ ನಮ್ಮ ಗ್ರಾಮೀಣ ಮಹಾಜನತೆ ಮೊದಲು ಅಕ್ಷರಸ್ಥರಾಗಬೇಕೆಂದು ಅವರು ಸಂಕಲ್ಪ ತೊಟ್ಟಿದ್ದರು. ಅದಕ್ಕಾಗಿ ದೀನ–ದಲಿತರು ಮತ್ತು ಹಿಂದುಳಿದ ವರ್ಗದ ಬಡವರಿಗಾಗಿ ಶಾಲೆಗಳನ್ನು, ಮಹಾವಿದ್ಯಾಲಯಗಳನ್ನು, ಶೈಕ್ಷಣಿಕ ಸಂಸ್ಥೆಗಳನ್ನು ತೆರೆಯುತ್ತಾ ಬಂದರು. ದೇಶದ 40ಕ್ಕೂ ಹೆಚ್ಚು ಕಡೆ ಶಾಖೆಗಳನ್ನು ಸ್ಥಾಪಿಸಿದ್ದಾರೆ. 460 ವಿದ್ಯಾ ಸಂಸ್ಥೆಗಳನ್ನು ಪ್ರಾರಂಭಿಸಿ 1 ಲಕ್ಷಕ್ಕೂ ಹೆಚ್ಚು ಮಕ್ಕಳಿಗೆ ಶಿಕ್ಷಣ ನೀಡುತ್ತಿರುವ ಕೀರ್ತಿಗೆ ಭಾಜನರಾದವರು. ಮಠದಲ್ಲಿರುವ ಶಾಲೆಯಲ್ಲಿ 5 ಸಾವಿರ ಮಕ್ಕಳಿಗೆ ಉಚಿತ ಶಿಕ್ಷಣ, ವಸತಿ ಮತ್ತು ಅನ್ನ ದಾಸೋಹ ನಡೆಸುತ್ತಿದ್ದರು.

ಈ ಕೈಂಕರ್ಯದಲ್ಲಿ ಗೌರಿಶಂಕರದ ಎತ್ತರಕ್ಕೆ ಬೆಳೆದ ಅವರು, ಅಖಂಡ ವಿಶ್ವವಿದ್ಯಾಲಯವಾಗಿ ತಲೆ ಎತ್ತಿ ನಿಂತರು. ಅವರ ದೂರದೃಷ್ಟಿಯ ಫಲ ಈ ಕ್ಷಣದಲ್ಲಿ ಉತ್ತರ ಕರ್ನಾಟಕವೂ ಸೇರಿದಂತೆ ರಾಜ್ಯದಾದ್ಯಂತ 50 ಶಾಲೆಗಳು ಕಾರ್ಯ ನಿರ್ವಹಿಸುತ್ತಿವೆ. 47,000ಕ್ಕೂ ಅಧಿಕ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ಅತ್ಯಾಧುನಿಕ ವೈದ್ಯಕೀಯ ಸೌಲಭ್ಯ ಕಡು ಬಡವರಿಗೆ ದೊಡ್ಡ–ದೊಡ್ಡ ಆಸ್ಪತ್ರೆಗೆ ಹೋಗಲು ಕಷ್ಟಸಾಧ್ಯ ಎಂದು ಅರಿತ ಸ್ವಾಮೀಜಿ, ಜವರಹಳ್ಳಿ ಎಂಬ ಕುಗ್ರಾಮ ಆರಿಸಿಕೊಂಡು ಬೃಹತ್ ಆಸ್ಪತ್ರೆ ತಾವೇ ಕಟ್ಟಿ ಬೆಂಗಳೂರಿನ ಹೈಟೆಕ್ ಆಸ್ಪತ್ರೆಯಲ್ಲಿ ದೊರೆಯುವ ಎಲ್ಲ ಸೌಲಭ್ಯಗಳನ್ನು ಗ್ರಾಮೀಣ ಪ್ರದೇಶದಲ್ಲಿ ದೊರೆಯುವಂತೆ ಮಾಡಿದವರು. ಅದರಲ್ಲೂ ಮುಖ್ಯವಾಗಿ ಗ್ರಾಮೀಣ ಮಹಿಳೆಯರು ಹೆರಿಗೆ ಸಂದರ್ಭದಲ್ಲಿ ಅನುಭವಿಸುತ್ತಿದ್ದ ನೋವು ಅರಿತು, ಅದಕ್ಕಾಗಿ ಬೆಳ್ಳೂರು ಕ್ರಾಸ್ ಬಳಿ ವಿಶೇಷ ಘಟಕ ತೆರೆದು ನಿರಂತರವಾಗಿ ನಡೆಸುತ್ತಾ ಬಂದವರು.

ತಮ್ಮ ಜೋಳಿಗೆ ಹಿಡಿದು ಒಂಬತ್ತು ಬಾರಿ ವಿಶ್ವ ಪರ್ಯಟನ ಮಾಡಿ ಶ್ರೀಮಠದಲ್ಲಿ ಓದಿ, ಮುಂದೆ ದೊಡ್ಡವರಾಗಿ ವಿದೇಶಗಳಲ್ಲಿ ನೆಲೆಸಿ, ವೈದ್ಯರಾಗಿಯೋ, ಎಂಜಿನಿಯರರಾಗಿಯೋ ಕಾರ್ಯ ನಿರ್ವಹಿಸುತ್ತಿದ್ದ ಅನಿವಾಸಿ ಭಾರತೀಯರಿಂದ ಹಣ ತಂದು, ಅದರಿಂದ ಕ್ಷೇತ್ರವನ್ನು ಸಂವರ್ಧನೆಗೆ ತಂದವರು. ಶೈಕ್ಷಣಿಕ ಕ್ಷೇತ್ರದ ಮಹಾನ್ ರೂವಾರಿ ಆದವರು. ಅವರ ದೂರದೃಷ್ಟಿ ಫಲ ಈ ಹೊತ್ತು ಕರ್ನಾಟಕದಲ್ಲಿ ಶ್ರೀ ಆದಿಚುಂಚನಗಿರಿ ಟ್ರಸ್ಟ್ ಹೆಸರಿನಲ್ಲಿ ನೂರಾರು ವಿದ್ಯಾಸಂಸ್ಥೆಗಳು ಜ್ಞಾನಸೇವೆ ಮಾಡುತ್ತಿವೆ. ಅಬಲೆಯರು ಸಬಲೆಯರಾಗಲು ಶ್ರೀ ಕ್ಷೇತ್ರದಲ್ಲಿ ಶ್ರೀ ಮಠದ ವತಿಯಿಂದ ಅನೇಕ ಕಾರ್ಯಕ್ರಮ ನಿಯೋಜಿಸಿದ್ದಾರೆ. ಅವೆಲ್ಲ ಸಾಂಗೋಪಾಂಗವಾಗಿ ನಡೆಯುತ್ತಿವೆ. ಅಂಧರಿಗಾಗಿ ರಾಮನಗರದ ಅರ್ಚಕರಹಳ್ಳಿ ಬಳಿ ಅಂಧ ಮಕ್ಕಳ ಶಾಲೆ ತೆರೆದು, ಅವರ ಸಮಗ್ರ ಅಭಿವೃದ್ಧಿಗಾಗಿ ವಸತಿ ವ್ಯವಸ್ಥೆ ಕಲ್ಪಿಸಿ, ಆಶ್ರಯ, ಅನ್ನ, ಬಟ್ಟೆ, ಪುಸ್ತಕ, ವಿದ್ಯೆ ಒದಗಿಸಿದ ಪುಣ್ಯಾತ್ಮರು. ಕೇವಲ ಓದಿದರೆ ಸಾಲದು ಅವರ ಕರಕುಶಲ ಕಲೆಗಳು ಅಭಿವೃದ್ಧಿ ಆಗಬೇಕು, ಕಲಾಭಿವ್ಯಕ್ತಿ ಬೆಳಗಿ ಬದುಕಿನಲ್ಲಿ ಬೆಳಗಬೇಕು ಎನ್ನುವ ಕಾರಣದಿಂದ ಬಗೆ–ಬಗೆ ಕಾರ್ಯಕ್ರಮ ರೂಪಿಸಿ ಅನುಷ್ಠಾನಕ್ಕೆ ತಂದವರು. ಕ್ಷೇತ್ರದಲ್ಲಿ ವರ್ಷಕ್ಕೆ ಮೂರು ಬಾರಿ ಜಾತ್ರೆ ನಡೆಸುತ್ತಾ, ರಾಜ್ಯದ ಮೂಲೆ–ಮೂಲೆಗಳಿಂದ ಬರುವ ಕಲಾ ತಂಡದ ಕಲಾವಿದರಿಗೆ ಆಶ್ರಯಕೊಟ್ಟು, ಪ್ರತಿಭೆ ಬೆಳಗಿಸಿ, ಮರಳಿ ಊರಿಗೆ ಕಳುಹಿಸುವಾಗ ಪ್ರತಿಯೊಬ್ಬರಿಗೆ ಪಂಚೆ, ವಲ್ಲಿ, ಅಂಗಿ, ಸೀರೆ–ಖಣ, ಮಂಗಳ ದ್ರವ್ಯ ಕೊಟ್ಟು, ಬಸ್ ಚಾರ್ಜ್ ವ್ಯವಸ್ಥೆ ಮಾಡಿ, ಸತ್ಕರಿಸಿ ಕಳುಹಿಸುತ್ತಿದ್ದ ಮಹಾನ್ ಚೇತನ ಇಂದು ನಮ್ಮೊಂದಿಗಿಲ್ಲ ಆದರೆ ಶ್ರೀಗಳು ತೋರಿದ ಬೆಳಕು ಇಡೀ ಮನುಕುಲವನ್ನು ಬೆಳಗುತ್ತಿರಲಿ.

❑ ವಿವಿಧ ಮೂಲಗಳಿಂದ

# ದಿವಂಗತ ಎಂ.ವೀರಪ್ಪ ಅವರಿಗೆ ಶ್ರದ್ಧಾಂಜಲಿ



ಜನವರಿ 6ರಂದು ನಿಧನರಾದ ದೆಹಲಿಯ ಹಿರಿಯ ಕನ್ನಡಿಗ, ನ್ಯಾಯವಾದಿ ಎಂ.ವೀರಪ್ಪ ಅವರಿಗೆ ದೆಹಲಿ ಕರ್ನಾಟಕ ಸಂಘ, ತುಳುನಾಡು ಅಭಿವೃದ್ದಿ ವೇದಿಕೆ, ಬಂಟ್ಸ್ ಕಲ್ಚರಲ್ ಅಸೋಸಿಯೇಷನ್ ಹಾಗು ದೆಹಲಿಯ ಇತರೆ ಕನ್ನಡ ಸಂಘ ಸಂಸ್ಥೆಗಳು ಶ್ರದ್ಧಾಂಜಲಿ ಸಭೆ ಸೇರಿ ನಮನ ಸಲ್ಲಿಸಲಾಯಿತು.

ಹಿರಿಯ ನ್ಯಾಯಮೂರ್ತಿ ವಿಶ್ವನಾಥ ಶೆಟ್ಟಿ, ಹಿರಿಯ ನ್ಯಾಯವಾದಿ ಎಸ್.ಕೆ.ಕುಲಕರ್ಣಿ, ನಾಗಾನಂದ್, ವಿದ್ಯಾಸಾಗರ್, ಎ.ಎಸ್.ಜಯಚಂದ್ರ ಮೊದಲಾದ ವಕೀಲರು ಸಭೆಯಲ್ಲಿ ಭಾಗವಹಿಸಿದ್ದರು. 1986ರಲ್ಲಿ ತಾವು ದೆಹಲಿಗೆ ಬರುವ ಮೊದಲೇ ವೀರಪ್ಪನವರ ಪರಿಚಯವಿತ್ತೆಂದು ಹೇಳಿದ ನ್ಯಾಯವಾದಿ ಎಸ್.ಕೆ.ಕುಲಕರ್ಣಿ ಅವರು ಆತ್ಮೀಯ ಸ್ನೇಹಿತನ ಬಗ್ಗೆ ಆತ್ಮೀಯ ನುಡಿಗಳನ್ನಾಡಿದರು. ಸರ್ಕಾರಿ ವಕೀಲರಾಗಿ ಸುದೀರ್ಘ ಸೇವೆ ಸಲ್ಲಿಸಿದ ವೀರಪ್ಪ ಅವರನ್ನು ಕೋರ್ಟ್‌ನಲ್ಲಿ ಪ್ರತಿಯೊಬ್ಬ ಜಡ್ಜ್ ಕೂಡ ಪ್ರೀತಿ, ಗೌರವದಿಂದ ಕಾಣುತ್ತಿದ್ದರು. ಕೊನೆಯ ದಿನದವರೆಗೂ ಸಕ್ರಿಯವಾಗಿ ಕೋರ್ಟ್‌ಗೆ ಬರುತ್ತಿದ್ದ ಅಜಾತ ಶತ್ರು ವೀರಪ್ಪನವರಂತಹ ಆತ್ಮೀಯ ಮಿತ್ರನನ್ನು ಕಳೆದುಕೊಂಡದ್ದು ತಮಗೆ ಅತೀವ ದು:ಖವನ್ನುಂಟು ಮಾಡಿದೆ ಎಂದು ಎಸ್.ಕೆ.ಕುಲಕರ್ಣಿ ಅವರು ಮನದುಂಬಿ ನುಡಿದರು. ಇದೇ ಸಂದರ್ಭದಲ್ಲಿ ಇತ್ತೀಚೆಗೆ ನಿಧನರಾದ ಪಿ.ವಿ.ಕುಲಕರ್ಣಿ ಅವರು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಹಾಗೂ ದೆಹಲಿ ಕರ್ನಾಟಕ ಸಂಘಕ್ಕೆ ಸಲ್ಲಿಸಿದ ಸೇವೆಯನ್ನು ಸ್ಮರಿಸುತ್ತಾ ಎಸ್.ಕೆ.ಕುಲಕರ್ಣಿ ಅವರು ತಮ್ಮ ಶ್ರದ್ಧಾಂಜಲಿ ಸಲ್ಲಿಸಿದರು. 1984ರಿಂದಲೂ ಪರಿಚಿತರಾದ ಎಂ.ವೀರಪ್ಪ ಅವರು ಜ್ಞಾನ ಭಂಡಾರವಾಗಿದ್ದರು ಹಾಗೂ ವಕೀಲಿ ಕ್ಷೇತ್ರದಲ್ಲಿ ಕನ್ನಡಿಗರ ಹೆಮ್ಮೆಯನ್ನು ಹೆಚ್ಚಿಸಿದವರು ಎಂದು ನ್ಯಾಯವಾದಿ ಇ.ಸಿ.ವಿದ್ಯಾಸಾಗರ್ ಅವರು ಸ್ಮರಿಸಿದರು.

30–35 ವರ್ಷಗಳ ಸ್ನೇಹ ಬಾಂಧವ್ಯವಿದ್ದ ವೀರಪ್ಪನವರು ಪ್ರತಿಯೊಬ್ಬರಿಗೂ ಪ್ರೋತ್ಸಾಹ, ಉತ್ತೇಜನ ನೀಡುತ್ತಿದ್ದ ಸ್ನೇಹಜೀವಿ ಎಂಬುದಾಗಿ ಹಿರಿಯ ನ್ಯಾಯಮೂರ್ತಿ ವಿಶ್ವನಾಥ ಶೆಟ್ಟಿ ಅವರು ನುಡಿದರು. ಯಾವುದೇ ಸರ್ಕಾರ ಬಂದರೂ ಯಾವುದೇ ಅಪವಾದವಿಲ್ಲದೇ ಸರ್ಕಾರಿ ವಕೀಲರಾಗಿ ಪ್ರಾಮಾಣಿಕ ಸೇವೆ ಸಲ್ಲಿಸಿದ ವೀರಪ್ಪನವರು ವಕೀಲ ಬಾಂಧವರ ಪ್ರೀತಿ, ಕಕ್ಷಿದಾರರ ಪ್ರೀತಿ ಹಾಗೂ ಜಡ್ಜ್‌ಗಳ ಪ್ರೀತಿಯನ್ನು ಗಳಿಸಿದ ಸ್ನೇಹ ಜೀವಿ ಎಂದು ಅವರು ನೆನೆದರು.

ಪ್ರಸಕ್ತ ರಾಜಕೀಯ ಬೆಳವಣಿಗೆ ಹಾಗೂ ಆಗುಹೋಗುಗಳ ಬಗ್ಗೆ ಆಳವಾದ ಅರಿವಿದ್ದ ವೀರಪ್ಪ ಅವರು ಮುಂದಿನ ಪೀಳಿಗೆಗೆ ಉತ್ತಮ ಮಾರ್ಗದರ್ಶಿಯಾಗಿದ್ದಾರೆ ಎಂದು ದೆಹಲಿ ಹೈಕೋರ್ಟ್‌ನ ರಿಜಿಸ್ಟ್ರಾರ್ ಎ.ಎಸ್.ಜಯಚಂದ್ರ ಅವರು ಗೌರವಪೂರ್ವಕ ನಮನ ಸಲ್ಲಿಸಿದರು.

ತಮ್ಮ ದಿಟ್ಟ, ನೇರ, ನಡೆ ನುಡಿಗಳಿಂದ ಉತ್ತರ ಭಾರತೀಯರ ನಡುವೆ ಕೂಡ ತಮ್ಮತನವನ್ನು ನಿರಂತರವಾಗಿ ಕಾಪಾಡಿಕೊಂಡು ಬಂದ ವೀರಪ್ಪನವರು ಕೋರ್ಟ್‌ನಲ್ಲಿ ಭದ್ರ ಗೋಡೆಯಂತೆ ಅಚಲವಾಗಿ ನಿಂತವರು ಎಂದು ನ್ಯಾಯವಾದಿ ಮೋಹನ್ ವಿ. ಕತರಕಿ ಅವರು ನುಡಿದರು.



ಎಂದೂ ಸಕಾರಾತ್ಮವಾಗಿ ಸ್ಪಂದಿಸುತ್ತಿದ್ದ ವೀರಪ್ಪ ಅವರು ಇತರರಿಗೆ ಸದಾ ಸಹಾಯಹಸ್ತ ಚಾಚುತ್ತಿದ್ದರು ಎಂದು ಹಿರಿಯ ಕೌನ್ಸಿಲರ್ ನಾಗಾನಂದ್ ಅವರು ಹೇಳಿದರು.

ಸರಳ, ಸಜ್ಜನಿಕೆಯ ವೀರಪ್ಪ ಅವರು ದೆಹಲಿ ಕನ್ನಡ ಶಾಲೆ, ದೆಹಲಿ ಕರ್ನಾಟಕ ಸಂಘ, ತುಳುನಾಡು ಅಭಿವೃದ್ದಿ ವೇದಿಕೆ ಹಾಗು ಇತರ ಕನ್ನಡ ಪರ ಸಂಘ ಸಂಸ್ಥೆಗಳಿಗೆ ಅಮೂಲ್ಯ ಸೇವೆ ನೀಡಿದ್ದಾರೆ ಎಂಬುದಾಗಿ ಕೆ.ಎಸ್.ಜಿ.ಶೆಟ್ಟಿ, ಎನ್.ಎ.ಮಾಧವ, ವಿ.ವಿ.ಬಿರಾದಾರ ಹಾಗೂ ಎಸ್.ಎಂ.ಗಲಗಲಿ ಅವರು ಸ್ಮರಿಸಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ.ವೆಂಕಟಾಚಲ ಹೆಗಡೆ ಅವರು ವೀರಪ್ಪನವರೊಡನೆ ತಮ್ಮ ಸುದೀರ್ಘ ಒಡನಾಟವನ್ನು ಸ್ಮರಿಸುತ್ತಾ ಹಿರಿಯ ನ್ಯಾಯವಾದಿ ಎಸ್.ಎಸ್.ಜವಳಿ ಹಾಗೂ ಮಾಜಿ ಅಧ್ಯಕ್ಷ ಐ.ರಾಮಮೋಹನ್ ರಾವ್ ಕಳುಹಿಸಿದ್ದ ಶೋಕ ಸಂದೇಶವನ್ನು ಸಭೆಗೆ ತಿಳಿಸಿದರು.

ಕೊನೆಯಲ್ಲಿ ವೀರಪ್ಪನವರ ಪುತ್ರ ನರೇನ್ ಅವರು ಬದುಕಿನಲ್ಲಿ ಸದಾ ಪ್ರಾಮಾಣಿಕತೆಯನ್ನು ಕಲಿಸಿದ ತಮ್ಮ ತಂದೆಯವರ ನಿಧನಕ್ಕೆ ಶ್ರದ್ಧಾಂಜಲಿ ಸಲ್ಲಿಸಿದ ಎಲ್ಲ ಹಿರಿಯರಿಗೆ ತಮ್ಮ ಕುಟುಂಬದ ಪರವಾಗಿ ವಂದನೆ ಸಲ್ಲಿಸಿದರು. ಅವರೊಡನೆ ವೀರಪ್ಪನವರ ಪುತ್ರಿ, ಸೊಸೆ ಹಾಗೂ ಕುಟುಂಬದ ಇತರ ಸದಸ್ಯರು ಸಹ ಭಾಗವಹಿಸಿದ್ದರು. ಇ.ಸಿ.ವಿದ್ಯಾಸಾಗರ್ ಅವರು ದೆಹಲಿಯ ಕನ್ನಡ ವಕೀಲರನ್ನು ಸೇರಿಸಿ ಶ್ರದ್ಧಾಂಜಲಿ ಸಭೆಯನ್ನು ನಿರ್ವಹಿಸಿದರು. ಈ ಸಂದರ್ಭದಲ್ಲಿ ವಕೀಲರುಗಳಾದ ಆರ್.ಎಸ್.ಹೆಗಡೆ, ಗಿರೀಶ್ ಅನಂತಮೂರ್ತಿ, ಸಂಜಯ್ ಆರ್ ಹೆಗಡೆ, ಸುಬ್ರಮಣಿಯಂ ಪ್ರಸಾದ್, ಸಿ.ಎನ್.ಅಂಗಡಿ, ರಾಘವೇಂದ್ರಶ್ರೀವತ್ಸ, ಬಾಲಾಜಿ ಶ್ರೀನಿವಾಸನ್, ಗುರುದತ್, ವಿ.ಎನ್. ರಘುಪತಿ, ಶ್ರೀಕಾಂತ್ ತೆರದಾಳ್, ಶಂಕರ್ ದಿವಟೆ, ಪರಮೇಶ್ವರನ್, ಅನಿತಾ ಶೆಣೈ ಇನ್ನೂ ಮೊದಲಾದವರು ಉಪಸ್ಥಿತರಿದ್ದರು.

❑ ಉಷಾ ಭರತಾದ್ರಿ

# ಶ್ರೀ ಪಿ ವಿ ಕುಲಕರ್ಣಿ ಅವರ ನಿಧನ



ಸುಮಾರು 39 ವರ್ಷಗಳ ಕಾಲ ದೆಹಲಿ ವಾಸಿಯಾಗಿದ್ದು, ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಶಿಕ್ಷಣ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ್ದ ಶ್ರೀ ಪಿ. ವಿ ಕುಲಕರ್ಣಿಯವರು ಕಳೆದ ಡಿಸೆಂಬರ್ 26ರಂದು ತಮ್ಮ ಹುಟ್ಟೂರಾದ ಗುಲಬರ್ಗಾ ಸಮೀಪದ ಭೂತಪುರದಲ್ಲಿ ನಿಧನರಾದರು.

ಜನವರಿ 12ರಂದು ನಡೆದ ಸಂತಾಪ ಸೂಚಕ ಸಭೆಯಲ್ಲಿ ಪಿ.ವಿ.ಕುಲಕರ್ಣಿ ಅವರ ಬಗ್ಗೆ ಹಿರಿಯ ನ್ಯಾಯವಾದಿ ಎಸ್. ಕೆ.ಕುಲಕರ್ಣಿ, ಡಾ.ವೆಂಕಟಾಚಲ ಹೆಗಡೆ, ವಿ.ವಿ.ಬಿರಾದಾರ ಮೊದಲಾದವರು ಮಾತನಾಡಿ ಶ್ರದ್ಧಾಂಜಲಿ ಸಲ್ಲಿಸಿದರು.

ಕುಲಕರ್ಣಿಯವರ ಪೂರ್ಣ ಹೆಸರು ಪ್ರಭಾಕರ ವೆಂಕಟರಾವ್ ಕುಲಕರ್ಣಿ. ಜನಿಸಿದ್ದು 1943ರ ಎಪ್ರಿಲ್ 8ರಂದು. ಅವರು ತಾಯಿಯ ಗರ್ಭದಲ್ಲಿರುವಾಗಲೇ ಅವರ ತಂದೆ ವೆಂಕಟ ರಾವ್ ಕುಲಕರ್ಣಿಯವರು ತೀರಿಕೊಂಡರು. ಮದುವೆಯಾದ ಮೂರನೇ ವರ್ಷದಲ್ಲಿ ವಿಧವೆಯಾದ ಅವರ ತಾಯಿಗೆ ಆಗಲೇ ಒಂದು ಗಂಡುಮಗುವಿತ್ತು. ಆ ಮಹಾತಾಯಿ ಎಲ್ಲ ಕಷ್ಟಗಳನ್ನು ಭರಿಸಿಕೊಂಡು ಮಕ್ಕಳನ್ನು ಬೆಳೆಸಿದರು.

ಶಿಕ್ಷಣದಲ್ಲಿ ಅಪಾರ ಆಸಕ್ತಿ ಇರಿಸಿಕೊಂಡಿದ್ದ ಕುಲಕರ್ಣಿಯವರು ಬಡತನದ ಬೇಗೆಯಲ್ಲಿಯೇ ಎಳವೆಯನ್ನು ಕಳೆದರು. ಆದರೆ ಅವರ ಜೀವನೋತ್ಸಾಹ ಮಾತ್ರ ವಿಶೇಷವಾಗಿತ್ತು. ಉತ್ಸಾಹದಿಂದಲೇ ಓದಲಾರಂಭಿಸಿದರು. ಶಿಷ್ಯವೇತನಗಳ ಸಹಾಯದಿಂದ ಗಣಿತ ಮತ್ತು ಭೌತ ಶಾಸ್ತ್ರದಲ್ಲಿ ಪದವಿ ಪಡೆದರು. ಆ ಸಮಯದಲ್ಲಿ ಶ್ರೀಮತಿ ಕಮಲಾ ಅವರೊಂದಿಗೆ ವಿವಾಹವಾದರು. ದೆಹಲಿಯ ಸೆಂಟ್ರಲ್ ರೋಡ್ ರಿಸರ್ಚ್ ಇನ್ಸ್ಟಿಟ್ಯೂಟ್‌ನಲ್ಲಿ ಕಿರಿಯ ಸಂಶೋಧನಾ ಸಹಾಯಕರಾಗಿ ಕೆಲಸ ಸೇರಿದರು.

ಕಷ್ಟದ ದಿನಗಳನ್ನು ಕಂಡಿದ್ದ ಅವರು ಎಂದೂ ಅದರಿಂದ ವಿಚಲಿತರಾಗಿರಲಿಲ್ಲ. ಮಕ್ಕಳಾದ ವೆಂಕಟೇಶ್, ವಿನಾಯಕ ಮತ್ತು ಪ್ರೇಮಾ ಅವರಿಗೆ ಒಳ್ಳೆಯ ಶಿಕ್ಷಣ ನೀಡಿ ಅವರೆಲ್ಲ ಇಂದು ತಮ್ಮ ಕಾಲ ಮೇಲೆ ತಾವೇ ನಿಂತುಕೊಳ್ಳುವಂತೆ ಮಾಡಿದರು. ಪ್ರತಿಷ್ಠಿತ 'ಲೈಬ್ರರಿ ಆಫ್ ಕಾಂಗ್ರೆಸ್' ನಲ್ಲಿ ಕೆಲಸಮಾಡುತ್ತಿದ್ದ ಶ್ರೀಮತಿ ಪ್ರೇಮಾ ದೇಸಾಯಿ ಅವರೀಗ ಅಮೇರಿಕಾದಲ್ಲಿ ನೆಲೆಸಿದ್ದಾರೆ.

ಶ್ರೀ ಕುಲಕರ್ಣಿಯವರು ಕನ್ನಡ ಶಾಲೆಯ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಶಾಲೆಗೆ ಕಂಪ್ಯೂಟರ್ ಸೈನ್ಸ್ ಬರಲು ಬಹುವಾಗಿ ಪ್ರಯತ್ನಿಸಿದ್ದರು. ಅದಕ್ಕೊಂದು ಕಟ್ಟಡವೂ ಸಿದ್ಧವಾಗುವಲ್ಲಿ ಕುಲಕರ್ಣಿಯವರ ಕೊಡುಗೆಯಿದೆ. ಕರ್ನಾಟಕ ಸಂಘದ ಕಾರ್ಯಕಾರೀ ಸಮಿತಿ ಸದಸ್ಯರಾಗಿದ್ದ ಅವಧಿಯಲ್ಲಿ ಸಾಂಸ್ಕೃತಿಕ ಸಮುಚ್ಚಯ ಮೇಲೇರತೊಡಗಿತ್ತು. ಹೀಗೆ ದೆಹಲಿ ಕನ್ನಡಿಗರ ಮಹತ್ವದ ಕೆಲಸಗಳ ನಡುವೆ ಅವರು ತಮ್ಮನ್ನು ಗುರುತಿಸಿಕೊಂಡಿದ್ದರು.

ಮೃದು ಸ್ವಭಾವದ, ಮಿತ ಮಾತಿನ ಶ್ರೀ ಕುಲಕರ್ಣಿಯವರ ನಿಧನಕ್ಕೆ ಅಭಿಮತ ತನ್ನ ತೀವ್ರ ಸಂತಾಪವನ್ನು ಪ್ರಕಟಪಡಿಸುತ್ತದೆ.

# ಭಾರತ ಸಂವಿಧಾನದ

## ಎಂಟನೇ ಪರಿಚ್ಛೇದಕ್ಕೆ ತುಳು ಭಾಷೆಯ ಸೇರ್ಪಡೆ

ದ್ರಾವಿಡ ಭಾಷಾ ವರ್ಗದಲ್ಲಿ ತುಳುವಿಗೆ ವಿಶಿಷ್ಟವಾದ ಸ್ಥಾನವಿದೆಯೆಂಬುದನ್ನು ಅಂತಾರಾಷ್ಟ್ರೀಯ ಖ್ಯಾತಿಯ ಭಾಷಾವಿಜ್ಞಾನಿಗಳು ಈಗಾಗಲೇ ಸ್ಪಷ್ಟ ಪಡಿಸಿದ್ದಾರೆ. ದ್ರಾವಿಡ ಭಾಷೆಗಳ ತೌಲನಿಕ ವ್ಯಾಕರಣವನ್ನು 1856 ರಷ್ಟು ಹಿಂದೆಯೇ ಬರೆದ ರಾಬರ್ಟ್ ಕಾಲ್ಡವೆಲ್‌ನು 'ತುಳು ಚೆನ್ನಾಗಿ ಅಭಿವೃದ್ಧಿ ಹೊಂದಿದ ಭಾಷೆ' ಎಂದು ಕೊಂಡಾಡಿದ್ದಾನೆ. ಪ್ರಖ್ಯಾತ ಭಾಷಾ ಶಾಸ್ತ್ರಜ್ಞರಾದ ಡಾ. ಪಿ ಎಸ್ ಸುಬ್ರಮಣ್ಯಂ ಅವರ ಪ್ರಕಾರ ಮೂಲ ದ್ರಾವಿಡದಿಂದ ಕ್ರಿ. ಶ. ಪೂರ್ವ 8ನೇ ಶತಮಾನದ ಹೊತ್ತಿಗೆ ಮೊದಲು ಬೇರೆಯಾದ ಭಾಷೆಯೇ ತುಳು, ಈಗ ಈ ಭಾಷೆಗೆ 2500 ವರ್ಷಗಳಿಗೂ ಅಧಿಕವಾದ ಶ್ರೀಮಂತ ಇತಿಹಾಸವಿದೆ. ಪುರಾತತ್ವ ಶಾಸ್ತ್ರಜ್ಞರು ತುಳುನಾಡಿನ ಜನರ ಇತಿಹಾಸವನ್ನು 25 ಶತಮಾನಗಳಷ್ಟು ಹಿಂದೆ ಕೊಂಡೊಯ್ದಿದ್ದಾರೆ. ಈ ಸುದೀರ್ಘ ಕಾಲಾವಧಿಯಲ್ಲಿ ತುಳುನಾಡಿನ ಗಡಿ ರೇಖೆಗಳು ಬದಲಾಗುತ್ತಲೇ ಇದ್ದುವು. ಚಾರಿತ್ರಿಕವಾಗಿ ಅದು ಪಶ್ಚಿಮದಲ್ಲಿ ಅರಬ್ಬೀ ಸಮುದ್ರ, ಪೂರ್ವದಲ್ಲಿ ಪಶ್ಚಿಮ ಘಟ್ಟ, ಉತ್ತರದಲ್ಲಿ ಸೀತಾನದಿ ಮತ್ತು ದಕ್ಷಿಣದಲ್ಲಿ ಚಂದ್ರಗಿರಿ ಹೊಳೆಯ ನಡುವಣ ಪ್ರದೇಶವಾಗಿತ್ತು. ಮಂಗಳೂರು ಇದರ ಕೇಂದ್ರ ಸ್ಥಾನ. ಪ್ರಸ್ತುತ ತಲಪಾಡಿಯಿಂದ ದಕ್ಷಿಣ ಭಾಗವು ಕಾಸರಗೋಡಾಗಿ ಕೇರಳಕ್ಕೆ ಸೇರಿದೆ. ಉಳಿದ ತುಳುನಾಡು ದಕ್ಷಿಣಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಗಳಾಗಿ ಒಡೆದಿವೆ. ವಲಸೆಗೆ ಹೆಸರಾದ ತುಳುವರು ಇಂದು ವಿಶ್ವದಾದ್ಯಂತ ಹರಡಿಕೊಂಡಿದ್ದಾರೆ. ಅದರಲ್ಲೂ ಮುಖ್ಯವಾಗಿ ಮುಂಬೈ ಮಹಾನಗರ ಮತ್ತು ದುಬೈ ದೇಶಗಳು ತುಳುವರ ಕರ್ಮ ಭೂಮಿ.

'ತುಳು' ಪದದ ಅರ್ಥ ನಿಷ್ಪತ್ತಿಯ ಬಗೆಗೆ ಈಗ ಅಂಥ ಗೊಂದಲವೇನೂ ಇದ್ದಂತಿಲ್ಲ. ಅದು 'ಜಲವಾಚಕ' ಎಂಬುದು ಈಗ ಖಚಿತವಾಗಿದೆ. ಗೋವಿಂದ ಪೈ ಮತ್ತು ಸೇಡಿಯಾಪು ಕೃಷ್ಣಭಟ್ಟರು 'ತುಳು' ಪದವು 'ಜಲಭರಿತ' ಎಂಬುದನ್ನು ಆಧಾರ ಪೂರ್ವಕ ಸ್ಥಾಪಿಸಿದ್ದಾರೆ. ತುಳುನಾಡಿನ ಮಣ್ಣಿನಗುಣ, ಬೀಳುವ ಮಳೆ ಮತ್ತು ಅಲ್ಲಿ ಹರಿಯುವ ನದಿಗಳನ್ನು ನೋಡಿದರೆ ಇದನ್ನು ಅಲ್ಲಗಳೆಯಲಾಗದು.

ತುಳುನಾಡಿನ ಕುರಿತು ಟಾಲೆಮಿ ಮಾಡಿದ ಉಲ್ಲೇಖಗಳು, ಗ್ರೀಕ್ ಪ್ರಹಸನದಲ್ಲಿ ಕಂಡು ಬರುವ ತುಳುಪದಗಳು, ಅಶೋಕನ ಶಾಸನದಲ್ಲಿ ಉಲ್ಲೇಖಿತವಾದ 'ಸತಿಯ ಪುತ', ತಮಿಳಿನ ಸಂಗಂ ಸಾಹಿತ್ಯದಲ್ಲಿ ದೊರೆಯುವ 'ಕೋಶರ್' ಜನವರ್ಗದ ಉಲ್ಲೇಖ, ಪಾಡ್ದನಗಳಲ್ಲಿ ಹಾಗೂ ತಮಿಳಿನ ಪ್ರಾಚೀನ ಕೃತಿಗಳಲ್ಲಿ ಕಂಡು ಬರುವ 'ಭೂತಾಳ ಪಾಂಡ್ಯ'ನ ಉಲ್ಲೇಖ ಇವೆಲ್ಲವುಗಳನ್ನು ಗಮನಿಸಿದರೆ, ತುಳು ಭಾಷೆಯನ್ನಾಡುವ ಜನಸಮುದಾಯವೊಂದು ಕ್ರಿಸ್ತಶಕದ ಹಿಂದು-ಮುಂದಿನ ಕಾಲದಲ್ಲಿ ಇಂದಿನ ಕೇರಳದ ಕಾಸರಗೋಡಿನಿಂದ ಭಟ್ಕಳದ ಸಮೀಪದ ಕಾಸರಕೋಡಿನವರೆಗೆ ಹರಡಿಕೊಂಡಿತ್ತೆಂದು ಭಾವಿಸಬಹುದು.

ತೌಳವ ಸಂಸ್ಕೃತಿಯ ಬಗ್ಗೆ ತಿಳಿದುಕೊಳ್ಳುವವರು ಅಲ್ಲಿನ ವಿಶಿಷ್ಟವಾದ ನಾಗಾರಾಧನೆ, ಭೂತಾರಾಧನೆ ಮತ್ತು ಯಕ್ಷಗಾನಗಳ ಬಗ್ಗೆಯೂ ತಿಳಿದುಕೊಳ್ಳಬೇಕು. ಇಲ್ಲಿಯ ಜನ ನಾಗನ ಭಕ್ತರು, ನಾಗಮಂಡಲ ಮತ್ತು ಡಕ್ಕೆ ಬಲಿಗಳು ಇಲ್ಲಿನ ವಿಶೇಷ. ತುಳುನಾಡಲ್ಲಿ ಎಲ್ಲ ಬಗೆಯ ಭೂತಗಳಿವೆ. ಉಚ್ಚ ಜಾತಿ, ನಿಮ್ನ ಜಾತಿ, ಪ್ರಾಣಿ ಮೂಲ, ಮುಸ್ಲಿಂ- ಹೀಗೆ ಅವು ವಿಭಿನ್ನ. ಈ ದೈವಗಳ ಹುಟ್ಟು, ಸಾಧನೆ ಮತ್ತು ಸಾವಿಗೆ ಸಂಬಂಧಿಸಿದ ಕಥನಗಳನ್ನು ಪಾಡ್ದನಗಳೆಂದು ಕರೆಯುತ್ತಾರೆ. ಪಾಡ್ದನಗಳು ತುಳುವಿನ ಅತ್ಯಂತ ಶ್ರೀಮಂತವಾದ ಮೌಖಿಕ ನಿರೂಪಣೆಗಳು. ತುಳುವರು ಯಕ್ಷಗಾನದ ಮೂಲಕ ಭಾರತೀಯ ಪುರಾಣಗಳನ್ನು ಪುನಾರಚಿಸಿಕೊಂಡಿದ್ದಾರೆ. ಈ ಪ್ರಕ್ರಿಯೆಯಲ್ಲಿ ಪುರಾಣದ ಖಳನಾಯಕರೆಲ್ಲ ನಾಯಕರಾಗಿ ಮಾರ್ಪಟ್ಟಿದ್ದಾರೆ.

ತುಳುನಾಡಿಗೆ ಮಾತ್ರ ಸೀಮಿತವಾಗಿರುವ ಇನ್ನೂ ಕೆಲವು ವಿಷಯಗಳಿವೆ. ಅದರಲ್ಲಿ ಕೆಲವು ಜನಪದ ಕುಣಿತಗಳು ಬಹಳ ಮುಖ್ಯವಾಗಿವೆ. ಆಟಿ ತಿಂಗಳಲ್ಲಿ ಮನೆ ಮನೆಗೆ ಸುತ್ತಾಡಿಕೊಂಡು ಬಂದು ಊರಿನ ರೋಗ ಕಳೆಯುವ 'ಆಟಿ ಕಳೆಂಜ', ಮೇರರ ದುಡಿ, ಕೊರಗರ ಡೋಲು, ಮುಂಡಾಲರ ಕಂಗಿಲು, ಗೌಡರ



'ಸಿದ್ಧವೇಶ' ಇತ್ಯಾದಿಗಳು ಬೇರೆ ಕಡೆ ಕಾಣಸಿಗದ ಕಲಾಪ್ರಕಾರಗಳಾಗಿವೆ. ಈ ಕುಣಿತಗಳ ಶೈಲಿ, ಕುಣಿತಗಳೊಂದಿಗಿರುವ ಹಾಡುಗಳು, ಸಂಗೀತವಾದ್ಯಗಳೆಲ್ಲ 'ತುಳು' ಪರಿಕಲ್ಪನೆಯನ್ನು ಸಾಕ್ಷಾತ್ಕರಿಸುವ ಮುಖ್ಯ ಘಟಕಗಳಾಗಿವೆ. ಮಾತೃ ಪ್ರಧಾನ ಕುಟುಂಬ ವ್ಯವಸ್ಥೆ ಇನ್ನೂ ಚಾಲ್ತಿಯಲ್ಲಿರುವ ಪ್ರದೇಶವಿದು.

ತುಳುನಾಡಿನ ಇನ್ನೊಂದು ಕುತೂಹಲದ ವಿಷಯವೆಂದರೆ ಅಲ್ಲಿನ ಸ್ಥಳನಾಮಗಳು. ಸುಬ್ರಹ್ಮಣ್ಯ ಸಮೀಪದಲ್ಲಿರುವ 'ಕನ್ನರ ಪಾಡಿ' ಪದದಲ್ಲಿನ 'ಕನ್ನರು' ಯಾರು? ಪ್ರಖ್ಯಾತ ಸಂಶೋಧಕರಾದ ಶ್ರೀ ಶಂಭಾ ಜೋಷಿಯವರು 'ಕನ್ನರ'ದಿಂದಲೇ ಕನ್ನಡ ಬಂದಿದೆ ಎಂದು ವಾದಿಸಿದ್ದಾರೆ. ಇದೇ ರೀತಿ ಗುತ್ತಿ (ಗುತ್ತಿಗಾರು), ಅಜೆ (ಕರ್ಮಜೆ), ಅಡ್ಕ (ಪೇರಡ್ಕ), ಪಳ್ಕೆ (ಕೊಸರ ಪಳ್ಕೆ), ಇಲ (ಕಮಿಲ, ಪುತ್ತಿಲ), ಪಾಡಿ (ಕಂದ್ರಪ್ಪಾಡಿ), ಕದರಿ, ಕೋಡಿ, ಕುಂಜ, ಮಾಳ, ಕಾರ್ (ಕಾರ್ಕಳ), ಮೊಗರು, ಮೊಗ್ರ, ಇಡ್ಯ, ಚಾರ್ವಾಕ, ಚೇರು, ಪನ್ನೆ, ಮೊದಲಾದ ಕುತೂಹಲಕಾರೀ ಪದಗಳಲ್ಲಿ ಹಲವು ಅತ್ಯಂತ ಪ್ರಾಚೀನ ದ್ರಾವಿಡ ಪದಗಳಾಗಿದ್ದು, ತುಳುವಿನಲ್ಲಿ ಇನ್ನೂ ನಮ್ಮ ನಡುವೆ ಉಳಿದುಕೊಂಡಿವೆ.

ಇಂದಿಗೆ 'ತುಳು ಸಂಸ್ಕೃತಿ' ಎಂಬುದು ಅನೇಕ ಸಂಸ್ಕೃತಿಗಳ ಒಂದು ಸಮುಚ್ಚಯ. ಚರಿತ್ರೆ ಪೂರ್ವ ಕಾಲದಲ್ಲಿ ವಾಸಿಸುತ್ತಿದ್ದ ಕೋಶರರು, ಕಡಲ ಕಾಳಗದಲ್ಲಿ ನಿಷ್ಣಾತರಾಗಿದ್ದ ಕದಂಬರು, ಕದಿರೆಯಲ್ಲಿ ವಾಸವಾಗಿದ್ದ ಬೌದ್ಧರು, ನಾಥರು, ಕಾರ್ಕಳ-ಮೂಡಬಿದಿರೆಗಳನ್ನಾಳಿದ ಜೈನರು, ಉಡುಪಿಯಲ್ಲಿ ಉದ್ಭವಗೊಂಡ ಮಾಧ್ವರು, ಮಂಗಳೂರನ್ನು ಬೆಳೆಸಿದ ಕ್ರೈಸ್ತರು, ಶತಮಾನಗಳಿಂದ ಕರಾವಳಿಯ ಬದುಕಿನ ಭಾಗವಾಗಿರುವ ಮುಸಲ್ಮಾನರು-ಇವರೆಲ್ಲ ತುಳು ಸಂಸ್ಕೃತಿಯನ್ನು ಬೆಳೆಸಿದವರು

ತಮಿಳು ಬ್ರಾಹ್ಮಿಯಿಂದ ಪ್ರೇರಣೆ ಪಡೆದಿದೆ ಎನ್ನಲಾದ ತುಳು ಭಾಷೆಯು ಇಂದು ನಾವು ಕಾಣುವ ಸ್ವತಂತ್ರ ತುಳು ಲಿಪಿಯನ್ನು ಸೃಷ್ಟಿಸಿಕೊಂಡಿತು. ಉಡುಪಿಯ ಮಠಗಳಲ್ಲಿ ತುಳು ಲಿಪಿ ಬಳಕೆಯಲ್ಲಿತ್ತು ಎಂದೂ ಹೇಳಲಾಗಿದೆ. ಈಚಿನ ದಿನಗಳಲ್ಲಿ ತುಳು ಲಿಪಿಯನ್ನು ಶಾಲೆಗಳಲ್ಲಿ ಕಲಿಸುವ ಪ್ರಯತ್ನಗಳು ದೊಡ್ಡ ಮಟ್ಟದಲ್ಲಿ ನಡೆಯುತ್ತಿದೆ.

ಕರ್ನಾಟಕದ ಇತರ ಭಾಗಗಳಿಗಿರುವ ವರ್ಣರಂಜಿತ ಇತಿಹಾಸ ಮಾತ್ರ ತುಳುನಾಡಿಗಿಲ್ಲ. ತುಳುನಾಡನ್ನಾಳಿದ ಅಳುಪರು, ಬಂಗರು, ಅಜಿಲರು, ಸಾವಂತರು, ಭೈರರಸರೇನೂ ಘಟ್ಟ ಹತ್ತಿ ಹೋಗಿ ರಾಜ್ಯ ವಿಸ್ತಾರ ಮಾಡಲಿಲ್ಲ. ಬೃಹತ್ ದೇಗುಲಗಳನ್ನೋ, ಕೋಟೆಗಳನ್ನೋ ಕಟ್ಟಲಿಲ್ಲ. ಬಸರೂರಿನ ತುಳುವ ವೀರರು ವಿಜಯನಗರದವರೆಗೆ ಹೋಗಿ ಅಲ್ಲೇ ನೆಲೆ ನಿಂತು, ನಿಧಾನವಾಗಿ 'ತುಳುವ ವಂಶ'ವನ್ನು ಸ್ಥಾಪಿಸಿ, ಅಲ್ಲಿ ಮೆರೆದದ್ದುಂಟು. 'ಕರ್ನಾಟಕ ರಾಜ್ಯ ರಮಾರಮಣ' ಎಂಬ ಬಿರುದಾಂಕಿತನಾದ ಶ್ರೀ ಕೃಷ್ಣದೇವರಾಯನು ತುಳುವ ವಂಶದವನಾಗಿದ್ದ ಎಂಬುದು ನಿಜ. ಕಾರ್ಕಳದ ಭೈರರಸರು ಮತ್ತು ವೇಣೂರಿನ

ಅಜಿಲರು ಕೆತ್ತಿಸಿದ ಎರಡು ಏಕಶಿಲಾ ಗೊಮ್ಮಟ ಮೂರ್ತಿಗಳೇ ತುಳುನಾಡಿನ ಇತಿಹಾಸದ ಮೈಲಿಗಲ್ಲುಗಳು. ರಾಣಿ ಅಬ್ಬಕ್ಕಳು ಪೋರ್ಚುಗೀಸರ ಆಕ್ರಮಣದ ವಿರುದ್ಧ ಹೋರಾಡಿದ ದಿಟ್ಟ ಮಹಿಳೆ.

ಟಿಪ್ಪೂವಿನ ಮರಣಾನಂತರ (1799) ಬ್ರಿಟಿಷರ ಆಳ್ವಿಕೆಗೆ ಒಳಪಟ್ಟ ತುಳುನಾಡು ಆಧುನಿಕತೆಗೆ ವೇಗವಾಗಿ ಒಳಗಾದ ಪ್ರದೇಶಗಳಲ್ಲೊಂದು. ಬಾಸೆಲ್ ಮಿಶನ್ನಿನ ಪಾದ್ರಿಗಳು ಮುದ್ರಣ ಯಂತ್ರ, ಹಂಚಿನ ಕಾರ್ಖಾನೆಗಳನ್ನು ಮಂಗಳೂರಲ್ಲಿ ಆರಂಭಿಸುವುದರೊಂದಿಗೆ ತುಳು ಜನಕ್ಕೆ 'ಉದ್ಯಮ ಶೀಲತೆ, 'ವ್ಯವಹಾರ ನೈಪುಣ್ಯ'ವನ್ನು ಕಲಿಸಿಕೊಟ್ಟರು. 20ನೇ ಶತಮಾನದ ಆರಂಭಕ್ಕೆ ಈ ಜಿಲ್ಲೆ 'ಆಧುನಿಕ ವಿದ್ಯೆ'ಗೆ ತನ್ನನ್ನು ತೆರೆದುಕೊಂಡಿತು. ಹೀಗೆ ಆಧುನಿಕತೆಗೆ ಒಳಗಾದ ತುಳುನಾಡು ತುಳು ಭಾಷೆಯನ್ನು ಮಾತ್ರ ಮರೆಯಲಿಲ್ಲ ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ಈ ಅರ್ಥದಲ್ಲಿ ತುಳು ಒಂದು ಆಧುನಿಕ ಭಾಷೆಯೂ ಹೌದು. ಅದು ನಶಿಸುತ್ತಿರುವ ಭಾಷೆಗಳ ಸಾಲಲ್ಲಿ ಇಲ್ಲ.

ತುಳು ಒಂದು ಜೀವಂತ ಭಾಷೆಯಾದ್ದರಿಂದ ಅದರಲ್ಲಿ ಅನೇಕ ಪ್ರಾದೇಶಿಕ ಮತ್ತು ಸಾಮಾಜಿಕ ಪ್ರಭೇಧಗಳು ಕಾಣಿಸಿಕೊಂಡಿವೆ. ಉದಾಹರಣೆಗೆ ಮಂಗಳೂರಿನ ಕಡೆ ಕನ್ನಡದ 'ತಲೆ'ಗೆ 'ತರೆ' ಎಂದರೆ, ಸುಳ್ಯದ ಕಡೆ 'ಅರೆ' ಅನ್ನುತ್ತಾರೆ. ಕಾಸರಗೋಡಿನ ಕಡೆ 'ಚರೆ' ಎಂದರೆ, ಬೆಳ್ತಂಗಡಿ ಕಡೆ 'ಸರೆ' ಎನ್ನುತ್ತಾರೆ. ಈ ನಡುವೆ 'ಹರೆ'ಯೂ ಬಳಕೆಯಲ್ಲಿದೆ. ಭಾಷಾಭ್ಯಾಸಿಗಳಿಗೆ ತುಳುನಾಡು ಒಂದು ಅದ್ಭುತವಾದ 'ಪ್ರಯೋಗ ಶಾಲೆ'. ತುಳುನಾಡಿನ ಕೇಂದ್ರವಾದ ಮಂಗಳೂರನ್ನು ತುಳುವರು 'ಕುಡಲ', 'ಕುಡ್ಲ' ಎಂದು ಕರೆದರೆ ಮಲೆಯಾಳಿಗಳಿಗೆ ಅದು 'ಮೈಕೆಲ್', ಇನ್ನು ಕೆಲವರಿಗೆ 'ಮಂಗಳಾವರಂ'. ಪೋರ್ಚುಗೀಸರಿಗೆ 'ಮಂಜರೂನ್'

ಇವತ್ತು ತುಳು ಭಾಷೆಯಲ್ಲಿ ಕನ್ನಡ ಲಿಪಿಯನ್ನು ಉಪಯೋಗಿಸಿಕೊಂಡು ಪ್ರತಿವರ್ಷ ನೂರಾರು ಪುಸ್ತಕಗಳು ಪ್ರಕಟವಾಗುತ್ತಿವೆ. ಮಂದಾರ ರಾಮಾಯಣದಂತಹ ತುಳು ಮಹಾಕಾವ್ಯಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಿದೆ. ಮಂಗಳೂರು ವಿಶ್ವವಿದ್ಯಾಲಯದಲ್ಲಿ ತುಳು ಪೀಠವೊಂದು ಕಾರ್ಯನಿರ್ವಹಿಸುತ್ತಿದೆ. ಅಲ್ಲಿನ ಕನ್ನಡ ವಿಭಾಗದ ವಿದ್ಯಾರ್ಥಿಗಳು ತುಳುವನ್ನು ಒಂದು ವಿಷಯವಾಗಿ ಆಯ್ದುಕೊಂಡು ಅಭ್ಯಾಸ ಮಾಡುತ್ತಿದ್ದಾರೆ. ಎಂ.ಫಿಲ್ ಮತ್ತು ಪಿಎಚ್.ಡಿ ಪದವಿಗಳಿಗಾಗಿ ತುಳು ಭಾಷೆ ಮತ್ತು ಸಂಸ್ಕೃತಿಗೆ ಸಂಬಂಧಿಸಿದ ಗಂಭೀರವಾದ ಅಧ್ಯಯನಗಳು ನಡೆಯುತ್ತಿವೆ. ಮಂಗಳೂರಿನ ಬಾಸೆಲ್ ಮಿಶನ್ ತನ್ನ ತುಳು ಪ್ರೇಮವನ್ನು ಇಂದಿಗೂ ಮುಂದುವರೆಸಿಕೊಂಡು ಬರುತ್ತಿದೆ. ಕಣ್ಣೂರು, ಕಲ್ಲಿಕೋಟೆ, ಚೆನ್ನೈ, ಅಣ್ಣಾಮಲೈ, ಮಧುರೈ, ಕುಪ್ಪಂ, ಒಸ್ಮಾನಿಯಾ, ಹೈದರಾಬಾದ್, ಮತ್ತು ಮುಂಬೈಗಳಲ್ಲಿ ತುಳುವಿನ ಕುರಿತಾದ ಸಂಶೋಧನೆಗಳು ನಿರಂತರವಾಗಿ ನಡೆಯುತ್ತವೆ. ಜರ್ಮನಿಯ ಟ್ಯೂಬಿಂಜನ್ ವಿವಿ ಮತ್ತು ಫಿನ್ಲೆಂಡಿನ ತುರ್ಕು ವಿವಿಗಳಲ್ಲಿ ತುಳುವಿನ ಕುರಿತಾದ ಸಂಶೋಧನೆಗಳು ನಡೆಯುತ್ತಿವೆ. ಡಾ. ಪೀಟರ್ ಕ್ಲಾಸ್, ಡಾ. ಮಾರ್ತಾ ಆಷ್ಟನ್, ಪ್ರೊ.. ಹೈಡ್ರೂನ್ ಬ್ರೂಕ್ನರ್, ಪ್ರೊ. ಲಾರಿ ಹಾಂಕೊ ಮೊದಲಾದ ಅಂತಾರಾಷ್ಟ್ರೀಯ ಖ್ಯಾತಿಯ ಸಂಶೋಧಕರು ತುಳುವಿನ ಬಗ್ಗೆ ನಡೆಸಿದ ಸಂಶೋಧನೆಗಳು ತುಳು ಭಾಷೆಯನ್ನು ಜಗತ್ತಿನ ಎಲ್ಲೆಡೆ ಜನಪ್ರಿಯಗೊಳಿಸಿವೆ. ಟೋಫೆಲ್ ಪರೀಕ್ಷೆಗಾಗಿ ಪಟ್ಟಿಮಾಡಿದ ಜಗತ್ತಿನ 133 ಭಾಷೆಗಳಲ್ಲಿ ಭಾರತದ 17 ಭಾಷೆಗಳು ಸೇರ್ಪಡೆಗೊಂಡಿದ್ದು ಅದರಲ್ಲಿ ತುಳುವೂ ಒಂದು. ಮಂಗಳೂರು ಆಕಾಶವಾಣಿಯು ತುಳು ವಾರ್ತೆಯ ಜೊತೆಗೆ ಅನೇಕ ಜನಪ್ರಿಯ ಕಾರ್ಯಕ್ರಮಗಳನ್ನು 1976ರಿಂದಲೂ ಪ್ರಸಾರ ಮಾಡುತ್ತಿದೆ. ಬೆಂಗಳೂರಿನ ದೂರದರ್ಶನ ಕೇಂದ್ರವು ತುಳು ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸುತ್ತಿದೆ. 1994 ರಲ್ಲಿ ಸ್ಥಾಪಿತಗೊಂಡ ತುಳು ಸಾಹಿತ್ಯ ಅಕಾಡೆಮಿಯು ನೂರಾರು ಉಪಯುಕ್ತ ಕಾರ್ಯಕ್ರಮಗಳನ್ನು ನಡೆಸುತ್ತಲೇ ಬಂದಿದೆ. ತುಳು ಚಲನಚಿತ್ರಗಳು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪ್ರಶಸ್ತಿಗಳನ್ನು ಬಾಚಿಕೊಂಡಿವೆ. ತುಳು ನಾಟಕ ಮತ್ತು ಯಕ್ಷಗಾನಗಳು ತುಳು ಭಾಷೆಯ ಸೊಗಸನ್ನು ಇನ್ನಷ್ಟು ಹೆಚ್ಚಿಸಿವೆ. ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರವು ಹೊರತಂದ ತುಳು ನಿಘಂಟುವಿಗೆ ಅಂತಾರಾಷ್ಟ್ರೀಯ ಮನ್ನಣೆ ಪ್ರಾಪ್ತಿಸಿದೆ. ಹೀಗೆ ತುಳುವಿನ ಹಿರಿಮೆ ದೊಡ್ಡದು.

ಆದರೂ ಭಾರತೀಯ ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ತುಳು ಭಾಷೆಯನ್ನು ಸೇರಿಸಿ, ಆ ಭಾಷೆಗೊಂದು ಅಧಿಕೃತ ಮಾನ್ಯತೆಯನ್ನು ತಂದುಕೊಳ್ಳಲು ಇದುವರೆಗೆ ನಮಗೆ ಸಾಧ್ಯ ಆಗಿಲ್ಲ. ಭಾಷೆಯೊಂದು ಯಾವುದೇ ರಾಜ್ಯದ ಅಧಿಕೃತವಾದ ಭಾಷೆಯೆಂದು ಘೋಷಿಸಲ್ಪಟ್ಟಾಗ ಅದು ಸಹಜವಾಗಿ ಎಂಟನೇ ಪರಿಚ್ಛೇದಕ್ಕೆ ಸೇರುತ್ತದೆ. ಕಾರಣ ಸಂವಿಧಾನ ಅಸ್ತಿತ್ವಕ್ಕೆ ಬಂದಾಗ 14 ಭಾಷೆಗಳನ್ನು ಪಟ್ಟಿಗೆ ಸೇರಿಸಲಾಯಿತು. ಮುಂದೆ 1967ರಲ್ಲಿ ಸಿಂಧಿ, 1992ರಲ್ಲಿ ಕೊಂಕಣಿ, ಮಣಿಪುರಿ, ಮತ್ತು ನೇಪಾಲಿ ಭಾಷೆಗಳನ್ನು ಸೇರಿಸಲಾಯಿತು. ಆದರೆ 2003ರಲ್ಲಿ ಭಾರತದ ಸಂವಿಧಾನದಲ್ಲಿ ಬದಲಾವಣೆ ಮಾಡಿ, ಯಾವುದೇ ರಾಜ್ಯದ ಆಧಿಕೃತ ಭಾಷೆಗಳಲ್ಲದ ಬೋಡೋ, ಡೋಗ್ರಿ, ಸಂತಾಲಿ ಮತ್ತು ಮೈಥಿಲಿ ಭಾಷೆಗಳನ್ನು ಸೇರಿಸಲಾಯಿತು, ಈ ಭಾಷೆಗಳಿಗೆ ಮನ್ನಣೆ ಸಿಗಲು ಅಟಲ್ ಬಿಹಾರಿ ವಾಜಪೇಯಿ, ಎಲ್. ಕೆ ಆದ್ವಾನಿ, ಮತ್ತು ಡಾ. ಕರಣ್ ಸಿಂಗ್ ಅವರಂತವರೇ ಹೋರಾಡಿದರು. ತುಳುವಿಗೆ ಈ ಮಟ್ಟದ ಹೋರಾಟಗಾರರು ಸಿಗಲಿಲ್ಲವಾದ್ದರಿಂದ ಕನಸು ಹಾಗೆಯೇ ಉಳಿಯಿತು.

ತುಳುವನ್ನು ಎಂಟನೇ ಪರಿಚ್ಛೇದದಲ್ಲಿ ಸೇರಿಸುವ ಕುರಿತು 2003ರಲ್ಲಿ ದೆಹಲಿಯಲ್ಲಿ ನಡೆದ ರಾಷ್ಟ್ರೀಯ ಸಮಾವೇಶದ ಅನಂತರ ಶ್ರೀ ಜನಾರ್ದನ ಪೂಜಾರಿ ಅವರು ಕೇಂದ್ರ ಗೃಹ ಖಾತೆಗೆ ಆ ಕುರಿತು ಪ್ರಶ್ನೆ ಕೇಳಿದಾಗ ಗೃಹ ಖಾತೆಯ ರಾಜ್ಯ ಸಚಿವ ಪಿ.ಡಿ. ಸ್ವಾಮಿ ಅವರು ಅದಕ್ಕೆ ಉತ್ತರಿಸಿ 'ತುಳುವರ ಬೇಡಿಕೆಯು ಸರ್ಕಾರದ ಗಮನಕ್ಕೆ ಬಂದಿದೆ. ಆದರೆ ಹೀಗೆ ಒಂದು ಭಾಷೆಯನ್ನು ಸಂವಿಧಾನಕ್ಕೆ ಸೇರಿಸಲು ಬೇಕಾದ ನಿಯಮಾವಳಿಗಳನ್ನು ನಾನಿನ್ನೂ ರೂಪಿಸಿಲ್ಲ. ಈಗೊಂದು ಉನ್ನತ ಮಟ್ಟದ ಸಮಿತಿ ರಚನೆ ಆಗಿದೆ. ಅದರ ಶಿಫಾರಸನ್ನು ಇದಿರು ನೋಡುತ್ತಿದ್ದೇನೆ' ಎಂದು ವಿವರ ನೀಡಿದರು. ಸರಕಾರವು ಆಗ ಪ್ರಖ್ಯಾತ ಲೇಖಕ ಸೀತಾಕಾಂತ ಮಹಾಪಾತ್ರ ಅಧ್ಯಕ್ಷತೆಯಲ್ಲಿ ನಿಯಾಮಾವಳಿಗಳನ್ನು ಸೂಚಿಸಲು ಸಮಿತಿ ರಚಿಸಿತ್ತು ನಿಜ. ಆದರೆ ಈ ಸಮಿತಿ ರಚನೆಯಾಗಿ ಹತ್ತು ವರ್ಷ ಕಳೆದರೂ ಅದು ವರದಿ ಸಲ್ಲಿಸಿಲ್ಲ. ಸರಕಾರೀ ಮೂಲಗಳ ಪ್ರಕಾರ ಈಗ 32 ಭಾಷೆಗಳು ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ ಸೇರಲು ಕಾದು ಕುಳಿತಿವೆ. ಪ್ರಖ್ಯಾತ ಭಾಷಾ ತಜ್ಞ ಪ್ರೊ.. ಬ್ರಜ್ ಕಚ್ರೂ ಅವರ ಪ್ರಕಾರ ಭಾರತದ 72 ಭಾಷೆಗಳು ಎಂಟನೇ ಪರಿಚ್ಛೇದಕ್ಕೆ ಸೇರಬೇಕಾಗಿವೆ. ಭೋಜಪುರಿ ಮತ್ತು ರಾಜಸ್ಥಾನಿ ಭಾಷೆಗಳು ಈ ಪಟ್ಟಿಯ ಮುಂಚೂಣಿಯಲ್ಲಿವೆ. ಭೋಜಪುರಿಯ ಬಗ್ಗೆ ಸ್ವತ: ಶ್ರೀಮತಿ ಸೋನಿಯಾ ಗಾಂಧಿ ಅವರೇ ಆಸಕ್ತಿ ತೋರಿಸಿದ್ದಾರೆ ಎನ್ನಲಾಗುತ್ತದೆ. ಎಂಟನೇ ಪರಿಚ್ಛೇದಕ್ಕೆ ಸೇರುವ ಭಾಷೆಗಳಲ್ಲಿ ಕೇಂದ್ರ ಲೋಕಸೇವಾ ಆಯೋಗ ಪರೀಕ್ಷೆಗಳನ್ನು ನಡೆಸಬೇಕಾಗಿಲ್ಲ ಎಂಬ ತಿದ್ದುಪಡಿಗೆ ಸದ್ಯದಲ್ಲಿಯೇ ಪಾರ್ಲಿಮೆಂಟ್ ಅನುಮೋದನೆ ನೀಡಲಿದೆಯಂತೆ. ಈ ವಿಷಯಗಳು ತುಳುವಿಗೆ ಅನುಕೂಲಕರವಾಗಿ ಪರಿಣಮಿಸಲಿದೆ.

ನಮ್ಮ ಈ ಪ್ರಯತ್ನಗಳಿಗೆ ಪೂರಕವಾಗಿ 2013ರ ಫೆಬ್ರವರಿ 24 ರಂದು ದೆಹಲಿಯಲ್ಲಿ ಬೃಹತ್ 'ದೆಹಲಿ ತುಳು ಸಿರಿ" ಸಮಾವೇಶವನ್ನು ಆಯೋಜಿಸಲಾಗಿದೆ. ತುಳು ಭಾಷೆಯನ್ನು ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ಸೇರಿಸಲು ಒತ್ತಡ ಹೇರುವುದು ಸಮಾವೇಶದ ಗುರಿ. ಕನ್ನಡದ ನೆರಳಿನಲ್ಲಿ ಬೆಳೆದು ಬರುತ್ತಿರುವ ತುಳುವಿನ ಅಭಿವೃದ್ಧಿಗೆ ಎಲ್ಲ ಕನ್ನಡಿಗರ ಬೆಂಬಲ ಅಗತ್ಯ.

ಡಾ.ಪುರುಷೋತ್ತಮ ಬಿಳಿಮಲೆ



# ಕೊಡಗಿನ ಕಣ್ಮಣಿ ಸೊಹೇಲ್‌ಗೆ ಶೌರ್ಯ ಪ್ರಶಸ್ತಿ



2012ನೇ ಸಾಲಿನ 'ರಾಷ್ಟ್ರಿಯ ಶೌರ್ಯ ಪ್ರಶಸ್ತಿ'ಯು ಕರ್ನಾಟಕದ ಏಕೈಕ ಬಾಲಕನಿಗೆ ದೊರೆತಿದೆ. ಅವನೇ ಕೊಡಗಿನ ಭಾಗಮಂಡಲದ ಬಾಲಕ – ಸೊಹೇಲ್. 2011ರ ನವೆಂಬರ್ ತಿಂಗಳು. ಕೊಡಗಿನ ಗಿರಿಕಂದರಗಳಲ್ಲಿ ಧಾರಾಕಾರ ಮಳೆ ಸುರಿಯುತ್ತಿತ್ತು. ಕಾವೇರಿ ಒಡಲು ತುಂಬಿ ಹರಿಯುತಿತ್ತು. ಬಿರುಸು ಮಳೆಯಲ್ಲೇ ಶಾಲೆಗೆ ಹೊರಟಿದ್ದ ಹುಡುಗರ ಗುಂಪೊಂದು ಸೇತುವೆ ದಾಟುವಾಗ ವಿದ್ಯಾರ್ಥಿಯೊಬ್ಬ ಶರ್ಟ್‌ಗೆ ಮೆತ್ತಿದ್ದ ಕೆಸರು ತೊಳೆಯಲು ನೀರಿಗಿಳಿದು ಕೊಚ್ಚಿಕೊಂಡು ಹೋಗುತ್ತಿದ್ದ. ಇದನ್ನು ಗಮನಿಸಿದ ಇನ್ನೊಬ್ಬ ತಕ್ಷಣ ನದಿಗೆ ಜಿಗಿದು ಮುಳುಗುತ್ತಿದ್ದ ಗೆಳೆಯನನ್ನು ದಡಕ್ಕೆಳೆದು ತಂದು ಪ್ರಾಣ ಉಳಿಸಿದ.

ಈ ಘಟನೆ ನಡೆದಿದ್ದು ಭಾಗಮಂಡಲದಲ್ಲಿ ನವೆಂಬರ್ 3ರಂದು ಬೆಳಿಗ್ಗೆ. ನೀರಿನಲ್ಲಿ ಮುಳುಗುತ್ತಿದ್ದ ಫಾರೂಕ್ ಹಾಗೂ ಆತನ ಜೀವ ಉಳಿಸಿದ ಸೊಹೇಲ್ ಇಬ್ಬರೂ ಕಾವೇರಿ ಜೂನಿಯರ್ ಕಾಲೇಜಿನ 8ನೇ ತರಗತಿ ವಿದ್ಯಾರ್ಥಿಗಳು. ಸೊಹೇಲ್ ನುರಿತ ಈಜುಗಾರನಲ್ಲ. ಆತನಿಗೂ ಈಜು ಬರುವುದಿಲ್ಲ. ಆದರೂ ಧೈರ್ಯ ಮಾಡಿ ಸಾವಿನ ದವಡೆಗೆ ಸಿಕ್ಕಿದ್ದ ಗೆಳೆಯನನ್ನು ಉಳಿಸಲು ಹೋರಾಡಿ ಸಫಲನಾದ. ಗೆಳೆಯ ಫಾರೂಕ್ ಪ್ರಾಣ ಉಳಿಸಿದ ಸೊಹೇಲ್‌ಗೆ 2012ನೇ ಸಾಲಿನ 'ರಾಷ್ಟ್ರೀಯ ಶೌರ್ಯ ಪ್ರಶಸ್ತಿ' ದೊರೆತಿದೆ.

ಸೊಹೇಲ್ ಗಣರಾಜ್ಯೋತ್ಸವದ ಮುನ್ನಾ ದಿನ ಇತರ ಮಕ್ಕಳ ಜತೆ ಪ್ರಧಾನಿ ಮನಮೋಹನ್ ಸಿಂಗ್ ಅವರಿಂದ ಪ್ರಶಸ್ತಿ ಸ್ವೀಕರಿಸಿದ. ವೀರ ಬಾಲಕ ಸೊಹೇಲ್‌ಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾಗೂ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು.

(ಜನವರಿ 25ರಂದು ಸಂಜೆ ದೆಹಲಿ ಕರ್ನಾಟಕ ಸಂಘದಲ್ಲಿ ಅಭಿನಂದಿಸಲು ಸೊಹೇಲ್ ಹಾಗು ಅವರ ಭಾವ ಷಂಷುದ್ದೀನ್ ಅವರನ್ನು ಆಹ್ವಾನಿಸಲಾಗಿತ್ತು. ಆದರೆ ಅನಿವಾರ್ಯ ಕಾರಣಾಂತರದಿಂದಾಗಿ ಸೊಹೇಲ್ ಬರಲಾಗಲಿಲ್ಲ)

# ದೆಹಲಿ ಒಕ್ಕಲಿಗ ಗೌಡ ಸಂಘದಿಂದ ವನಭೋಜನ ಮತ್ತು ಚುನಾವಣೆ

ಡಿಸೆಂಬರ್ 16, 2012ರಂದು ದೆಹಲಿ ಒಕ್ಕಲಿಗ ಗೌಡ ಸಂಘದ ಸದಸ್ಯರೆಲ್ಲ ನೆಹರೂ ಪಾರ್ಕಿನಲ್ಲಿ ವನಭೋಜನ ಮತ್ತು ಸಂಘದ ನೂತನ ಕಾರ್ಯಕಾರಿ ಸಮಿತಿಗೆ ಚುನಾವಣಾ ಕಾರ್ಯಕ್ರಮವನ್ನಿಟ್ಟುಕೊಂಡಿದ್ದರು. ವನಭೋಜನದಲ್ಲಿ ಆಟೋಟಸ್ಪರ್ಧೆ ಹಾಗೂ ಭೋಜನವನ್ನು ಏರ್ಪಡಿಸಲಾಗಿತ್ತು. ಹಾಗೆಯೇ 2013–15ನೇ ಸಾಲಿಗೆ ನೂತನ ಕಾರ್ಯಕಾರಿ ಸಮಿತಿಗೆ ಚುನಾವಣೆ ನಡೆದು ಈ ಕೆಳಕಂಡ ಹೊಸ ಸಮಿತಿಯು ಅವಿರೋಧವಾಗಿ ಆಯ್ಕೆಯಾಯಿತು.

ಅಧ್ಯಕ್ಷರು : ಎನ್.ಎ.ಮಾಧವ, ಉಪಾಧ್ಯಕ್ಷರು : ಗಣೇಶ್ ಪಿ.ಎಂ. ಮತ್ತು ಗುರುದೇವ್

ಕಾರ್ಯದರ್ಶಿ : ವಿ.ಆರ್.ಗುಡ್ಡೇಗೌಡ, ಜಂಟೀ ಕಾರ್ಯದರ್ಶಿ : ಎ.ಟಿ.ಶ್ರೀನಿವಾಸ್ ಮತ್ತು ಭಾರತಿ ನಾಗರಾಜ್, ಖಜಾಂಚಿ : ಬಿ.ನಾರಾಯಣ

ಸದಸ್ಯರುಗಳು: ಆಂಜನೀಗೌಡ, ಲಿಂಗರಾಜು, ಬೆಳ್ಳಿಯಪ್ಪ, ಮೀನಾ ವಸಂತ, ಪೂರ್ಣಿಮಾ, ದಿವಾಕರ, ಶ್ರೀನಿವಾಸ್ ಪಿ.ಸಿ., ಅಶ್ವತ್ಥಗೌಡ

❑ ಶ್ರೀನಿವಾಸ್ ಪಿ.ಸಿ.




# Saujanya Printing Press

**A HOUSE OF QUALITY PRINTING**

**D-47, Okhla Industrial Area, Phase-I,**
**New Delhi - 110 020**
**Phone : 40520770, 26815778**
**Mobile : 9811104398, 9811604398**
**e-mail : saujanyapp2010@gmail.com / hpgp2006@gmail.com**

**ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ**
**ಬಹುವರ್ಣದ ಸುಸಜ್ಜಿತ ಮುದ್ರಣಾಲಯ**

**ಸೌಜನ್ಯ ಪ್ರಿಂಟಿಂಗ್ ಪ್ರೆಸ್** ಮತ್ತು **ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್**

ನಾವು ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು, ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡುತ್ತೇವೆ.

ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು, ಬೈಂಡಿಂಗ್ ಕೆಲಸಗಳಿಗಾಗಿ ನಮ್ಮನ್ನು ದಯವಿಟ್ಟು ಸಂಪರ್ಕಿಸಿರಿ.

**ಮುದ್ರಣವೂ ಒಂದು ಕಲೆ, ಅದುವೇ ನಮ್ಮ ನೆಲೆ**

# ಆಧುನಿಕ ಕನ್ನಡದ 'ಪೂರ್ಣಕುಂಭ'



ಪ್ರೊ.ಎಸ್.ವಿ.ಪರಮೇಶ್ವರ ಭಟ್ಟರು ತಮ್ಮ ವಿಪುಲ ಸಾಹಿತ್ಯದ ಮೂಲಕ ಆಧುನಿಕ ಕನ್ನಡದ ದೀಪ ಬೆಳಗಿದವರು. ಕನ್ನಡ ಸಾಹಿತ್ಯದ ಮಹಾನ್ ದಿಗ್ಗಜಗಳ ಸಾಲಿನಲ್ಲಿ ಸೇರಬಹುದಾದ ಈ ಆಚಾರ್ಯರನ್ನು ಅವರ ಜನ್ಮ ಶತಮಾನೋತ್ಸವ ವರ್ಷದ ಈ ಸಂದರ್ಭದಲ್ಲಿ ತುಂಬು ಗೌರವದಿಂದ ನೆನೆಯುತ್ತಾ ಅವರ ಸಾಹಿತ್ಯ ಸೇವೆಯ ಕಿರುಪರಿಚಯ ಸಾಹಿತ್ಯಾಸಕ್ತರಿಗಾಗಿ.....

'ಹಟ್ಟಿ ತುಂಬಾ ಹಸು, ಹಾಲು ಮಾತ್ರ ತುಸು', 'ಬುದ್ಧಿ ಹೇಳಿದರೆ ಯುದ್ಧಕ್ಕೆ ಬಂದ', 'ಹೋದಾಗ ಬಿಕ್ಕಿ ಬಿಕ್ಕಿ ಅತ್ತ, ಇದ್ದಾಗ ಕುಕ್ಕಿ ಕುಕ್ಕಿ ಕೊಂದ', 'ಕಸಬು ಕಸಾಯಿ, ಹೆಸರು ದಯಾಮಯಿ'– ಇಂಥ ನೂರಾರು ಗಾದೆಗಳನ್ನು ಸೃಷ್ಟಿಸುವ ಮೂಲಕ 'ಗಾದೆಗಳು ಸಮೂಹಸೃಷ್ಟಿ' ಎಂಬ ಸಾಮಾನ್ಯ ನಂಬಿಕೆಯನ್ನು ಸುಳ್ಳುಮಾಡಿದವರು ಪ್ರೊ. ಎಸ್.ವಿ. ಪರಮೇಶ್ವರಭಟ್ಟರು. 'ಕನ್ನಡದ ಕಾಳಿದಾಸ' ಎನ್ನುವುದು ಅವರ ಹೆಸರಿಗೆ ಅಂಟಿರುವ ವಿಶೇಷಣ. ಅವರೀಗ ನಮ್ಮೊಂದಿಗೆ ಇದ್ದಿದ್ದರೆ ಇದೇ ಫೆಬ್ರುವರಿ 8ಕ್ಕೆ ತೊಂಬತ್ತೊಂಬತ್ತು ದಾಟಿ ನೂರನೇ ವರ್ಷಕ್ಕೆ ಕಾಲಿಡುತ್ತಿದ್ದರು.

ಕವಿ, ವಿದ್ವಾಂಸ, ವಾಗ್ಮಿ, ಪ್ರಾಧ್ಯಾಪಕ, ಅನುವಾದಕ ಎಂದೆಲ್ಲ ಖ್ಯಾತರಾದ ಅವರು ಎಲ್ಲಕ್ಕಿಂತ ಹೆಚ್ಚಾಗಿ ತಮ್ಮ ಸರಸ, ಸಜ್ಜನಿಕೆ, ವಿನಯದ ಮೂಲಕ ಜನಮನ್ನಣೆ ಗಳಿಸಿದ್ದರು. ಅವರ ಸಹಜಸ್ಫೂರ್ತ ಹಾಸ್ಯ ಮತ್ತು ವಾಕ್ ಚಾತುರ್ಯವೂ ಜನಪ್ರಿಯ. ಅವರು ಸಹಸ್ರಾರು ಶಿಷ್ಯರ ಪ್ರೀತಿಯ ಪ್ರಾಧ್ಯಾಪಕರಾಗಿದ್ದರು.

ಶೃಂಗೇರಿ ವಿದ್ಯಾರಣ್ಯಪುರ ಪರಮೇಶ್ವರಭಟ್ಟರು, ಸದಾಶಿವರಾಯರು ಮತ್ತು ಲಕ್ಷ್ಮಮ್ಮನವರ ಪುತ್ರರಾಗಿ ತೀರ್ಥಹಳ್ಳಿ ತಾಲ್ಲೂಕಿನ ಮಾಳೂರಿನಲ್ಲಿ 1914ರ ಫೆ.8ರಂದು ಜನಿಸಿದರು. ತೀರ್ಥಹಳ್ಳಿಯಲ್ಲಿ ಪ್ರೌಢ ವಿದ್ಯಾಭ್ಯಾಸ. ಬೆಂಗಳೂರು–ಮೈಸೂರಿನಲ್ಲಿ ಉನ್ನತ ವಿದ್ಯಾಭ್ಯಾಸದ ಸಂದರ್ಭದಲ್ಲಿ ಎ.ಆರ್.ಕೃಷ್ಣಶಾಸ್ತ್ರಿ, ವಿ.ಸೀತಾರಾಮಯ್ಯ, ಕೆ.ವೆಂಕಟರಾಮಪ್ಪ, ಬಿ.ಎಂ.ಶ್ರೀಕಂಠಯ್ಯ, ಟಿ.ಎಸ್. ವೆಂಕಣ್ಣಯ್ಯ, ತೀ.ನಂ.ಶ್ರೀಕಂಠಯ್ಯ ಮತ್ತು ಡಿ.ಎಲ್. ನರಸಿಂಹಾಚಾರ್ ಅವರಂಥ ವಿದ್ವನ್ಮಣಿಗಳು ಗುರುಗಳಾಗಿ ದೊರೆತ ಭಾಗ್ಯ ಪರಮೇಶ್ವರ ಭಟ್ಟರದಾಗಿತ್ತು. ವರ್ಡ್ಸ್‌ವರ್ತ್ ಕವಿಯ ಮೈಕೇಲ್ ಕವನವನ್ನು 'ಮಾಚಯ್ಯ' ಶೀರ್ಷಿಕೆಯಲ್ಲಿ ಅನುವಾದಿಸಿ ಶ್ರೀಯವರ ಸ್ವರ್ಣಪದಕ ಪಡೆದರು.

1939ರಲ್ಲಿ ಮೈಸೂರಿನಲ್ಲಿ ಕನ್ನಡ ಅಧ್ಯಾಪಕರಾಗಿ ತಮ್ಮ ವೃತ್ತಿಜೀವನ ಆರಂಭಿಸಿದ ಭಟ್ಟರು, ತುಮಕೂರು– ಶಿವಮೊಗ್ಗೆಗಳಲ್ಲಿ ಸೇವೆ ಸಲ್ಲಿಸಿ 1950ರಲ್ಲಿ ಮೈಸೂರಿನ ಮಹಾರಾಜ ಕಾಲೇಜಿಗೆ ಬಂದರು. 1968ರವರೆಗೂ ಅಲ್ಲಿ ಮತ್ತು ಮಾನಸಗಂಗೋತ್ರಿಯಲ್ಲಿ ಅಧ್ಯಾಪಕರಾಗಿ, ಉಪಪ್ರಾಧ್ಯಾಪಕರಾಗಿ ಕಾರ್ಯ ನಿರ್ವಹಿಸಿದರು. 1968ರಲ್ಲಿ ಮಂಗಳೂರಿನ ಸ್ನಾತಕೋತ್ತರ ಕೇಂದ್ರದ ನಿರ್ದೇಶಕರಾಗಿ ತೆರಳಿ ಆರು ವರ್ಷಗಳ ಕಾಲ ಅಲ್ಲಿ ಬೋಧನೆ ಮತ್ತು ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡಿದ್ದರು. ನಿವೃತ್ತಿಯ ನಂತರ ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಯು.ಜಿ.ಸಿ. ಪ್ರಾಧ್ಯಾಪಕರಾಗಿ ಐದು ವರ್ಷ ಕೆಲಸ ಮಾಡಿ, 'ರಸಋಷಿ ಕುವೆಂಪು' ಎಂಬ ಕುವೆಂಪು ಕೃತಿಗಳ ಸಮಗ್ರ ದರ್ಶನ ಮಾಡಿಸುವ ಬೃಹತ್ ಕೃತಿ ರಚಿಸಿದರು. ಆರೋಗ್ಯ ಅಷ್ಟೇನೂ ಸರಿ ಇಲ್ಲದಿದ್ದಾಗಲೂ 'ಕವಿಕೌಮುದಿ', 'ಭವಭೂತಿ ಸಂಪುಟ', 'ಹರ್ಷ ಸಂಪುಟ', 'ಸಂಜೆಮಲ್ಲಿಗೆ' ಕೃತಿಗಳನ್ನು ರಚಿಸುತ್ತ ಕೊನೆಯವರೆಗೂ ಕ್ರಿಯಾಶೀಲರಾಗಿಯೇ ಇದ್ದರು. ನಿಧನರಾದಾಗ (ಅ.27, 2000) ಅವರಿಗೆ ಎಂಬತ್ತೇಳು ವರ್ಷ.

## ಎಸ್.ವಿ.ಪಿ. ಸಾಹಿತ್ಯ

ಎಸ್.ವಿ.ಪಿ. ಅವರದು ಗುಣ ಮತ್ತು ಗಾತ್ರ ಎರಡೂ ದೃಷ್ಟಿಯಿಂದಲೂ ಸಮೃದ್ಧ ಸಾಹಿತ್ಯ. ಅವರ ಸ್ವತಂತ್ರ ಕೃತಿಗಳಲ್ಲಿ ಕಾವ್ಯ, ವಚನ, ವಿಮರ್ಶೆ, ಗಾದೆ–ಒಗಟುಗಳಿವೆ. ಅನುವಾದ ಕೃತಿಗಳಲ್ಲಿ ಸಂಸ್ಕೃತದಿಂದ, ಇಂಗ್ಲಿಷಿನಿಂದ, ಪ್ರಾಕೃತದಿಂದ ಕನ್ನಡಕ್ಕೆ ಅನುವಾದಿಸಿದ ಕೃತಿಗಳಿವೆ. ಸಂಸ್ಕೃತದ ಮೇರು ಕವಿಗಳಾದ ಕಾಳಿದಾಸ, ಭಾಸ, ಭವಭೂತಿ, ಹರ್ಷ ಇವರ ಸಮಗ್ರ ಕೃತಿಗಳನ್ನು ಕನ್ನಡಕ್ಕೆ ತಂದ ಸಾಧನೆ ಅವರದು.

ಎಸ್.ವಿ.ಪಿ. ಸಾಹಿತ್ಯಕ್ಷೇತ್ರ ಪ್ರವೇಶಿಸಿದ್ದು 'ರಾಗಿಣಿ' ಕವನ ಸಂಕಲನದ ಮೂಲಕ, 1940ರಲ್ಲಿ. ಕುವೆಂಪು ಅವರ ಪದ್ಯರೂಪದ ಮುನ್ನುಡಿಯನ್ನು ಹೊತ್ತು ಹೊರಬಂದ ಈ ಕವನಸಂಕಲನದಲ್ಲಿ ನವೋದಯದ ಕನಸುಗಾರಿಕೆ, ಪ್ರಕೃತಿಪ್ರೇಮ, ಗಂಡು ಹೆಣ್ಣಿನ ಒಲವು, ಬದುಕಿನ ನೋವು ನಲಿವುಗಳೆಲ್ಲವೂ ಸುಕುಮಾರವಾದ ಅಭಿವ್ಯಕ್ತಿಯನ್ನು ಪಡೆದುಕೊಂಡಿವೆ. ಕುವೆಂಪು ಹೇಳುವಂತೆ ಅದರೊಳಾಡುತಿರುವುದು 'ಬಾಳುವೆದೆಯುಸಿರು'... 'ಪ್ರೀತಿಯ ಕರೆ ಕೇಳಿ ಆತ್ಮನ ಮೊರೆ ಕೇಳಿ ನೀ ಬಂದು ನಿಂದಿಲ್ಲಿ ದೀಪ ಹಚ್ಚಾ', 'ತಿಳಿಮುಗಿಲತೊಟ್ಟಿಲಲಿ ಮಲಗಿದ್ದ ಚಂದಿರನ...' ಎನ್ನುವ ಜನಪ್ರಿಯ ಗೀತೆಗಳು ಈ ಸಂಕಲನದಲ್ಲಿವೆ.

ಕವಿಯಾಗಿ ಎಸ್.ವಿ.ಪಿ. ಅವರ ಬೆಳವಣಿಗೆಯನ್ನು ನಿಚ್ಚಳವಾಗಿ ತೋರುವ ಕೃತಿ 'ಗಗನಚುಕ್ಕಿ'. ಮೂರನೆಯ ಕವನಸಂಕಲನವಾದ 'ಅಂಚೆಯ ಪೆಟ್ಟಿಗೆ'ಯಲ್ಲಿ ಸಮಾಜದ, ದೇಶದ ಒಳಿತಿಗೆ ಕಾರಣರಾದ, ಭಾಷಾ ಸಾಹಿತ್ಯಗಳಿಗೆ ಅನುಪಮ ಸೇವೆ ಸಲ್ಲಿಸಿದ ಗಾಂಧಿ, ಬುದ್ಧ, ವೇದವ್ಯಾಸ, ವೆಂಕಣ್ಣಯ್ಯನವರು, ಮುಂತಾದ ಮಹನೀಯರನ್ನು ಕುರಿತ ಚೆಲುವಾದ ಸಾನೆಟ್‌ಗಳಿವೆ. ನಾಲ್ಕನೆಯ ಕವನಸಂಕಲನ 'ಇಂದ್ರಗೋಪ'ದಲ್ಲಿ ಕೂಡ ಪ್ರಕೃತಿ ಚಿತ್ರಗಳೇ ಹೆಚ್ಚು. ದೈವಾರಾಧನೆ, ಅನುಭಾವದ ಕವನಗಳೂ ಇವೆ. 'ಕೃಷ್ಣಮೇಘ' ಸಾಂಗತ್ಯಛಂದಸ್ಸಿನ ಐದು ದೀರ್ಘಕವನಗಳ ಗುಚ್ಛ.

ಈ ಸಂಕಲನದಲ್ಲಿನ 'ಮೈಸೂರು ವಿಶ್ವವಿದ್ಯಾನಿಲಯದ ಚಿನ್ನದ ಹಬ್ಬ', 'ಚಂದ್ರಲೋಕಕ್ಕೆ ಮನುಷ್ಯನ ಉಡ್ಡಾಣ', ಮೊದಲಾದ ದೀರ್ಘ ಕವನಗುಚ್ಛಗಳ ರಚನೆಯ ಮೂಲಕ ಕಾವ್ಯವಸ್ತುವಿಗೆ ಸಂಬಂಧಪಟ್ಟಂತೆ ಮಾಡಿರುವ ಪ್ರಯೋಗ ವಿಶಿಷ್ಟವಾದುದು. ಒಟ್ಟಾರೆ ಭಟ್ಟರ ಈ ಸ್ವತಂತ್ರ ಕವನಗಳ ಲೋಕ ಒಂದು ರಮ್ಯ, ಸೌಮ್ಯ ಪ್ರಪಂಚ. ಅಲ್ಲಿ ದುಷ್ಟತನ, ಕಷ್ಟಕಾರ್ಪಣ್ಯಗಳು, ದುಃಖದುಮ್ಮಾನ, ಸಾವು ಸೆಡವುಗಳಿಗೆ ಎಡೆಯಿಲ್ಲ. ಅಷ್ಟರಮಟ್ಟಿಗೆ ಅದೊಂದು ಮಿತಿ ಎನ್ನಬೇಕು.

## ಮುಕ್ತಕಗಳ ಮೌಲಿಕ ಕೊಡುಗೆ

'ತುಂಬೆ ಹೂ', 'ಸುರಗಿ ಸುರಹೊನ್ನೆ', 'ಇಂದ್ರಚಾಪ', 'ಚಂದ್ರವೀಧಿ', 'ಚಿತ್ರಪಥ', 'ಮಳೆಬಿಲ್ಲು'– ಈ ಕಾವ್ಯ ಸಂಪುಟಗಳಲ್ಲಿ ಸಂಗ್ರಹಿತವಾಗಿರುವ ಸುಮಾರು ಮೂರು ಸಾವಿರ ಮುಕ್ತಕಗಳು ಭಟ್ಟರು ಕನ್ನಡಸಾಹಿತ್ಯಕ್ಕೆ ನೀಡಿದ ಮೌಲಿಕ ಕೊಡುಗೆಗಳು. ಕನ್ನಡದ ದೇಸೀ ಛಂದೋರೂಪಗಳಾದ ಏಳೆ, ತ್ರಿಪದಿ, ಸಾಂಗತ್ಯಗಳಲ್ಲಿ ಇವು ರಚಿತವಾಗಿವೆ. ಈ ಪ್ರಾಚೀನ ಛಂದೋರೂಪಗಳನ್ನು ಜೀರ್ಣೋದ್ಧಾರ ಮಾಡಿದ ಶ್ರೇಯಸ್ಸು ಅವರಿಗೇ ಸಲ್ಲಬೇಕು.

ಭಟ್ಟರ ಕಾವ್ಯಜೀವನದಲ್ಲಿ 'ಇಂದ್ರಚಾಪ' ಒಂದು ಮಹತ್ತರ ಮೈಲಿಗಲ್ಲು. 'ಸ್ವವಿಚಾರಲಹರಿ ಮತ್ತು ಸುಭಾಷಿತಸಾರ' ಎಂದು ಸಾರುವ ಇದರಲ್ಲಿ ಮೊದಲ ಮುನ್ನೂರು ಪದ್ಯಗಳಲ್ಲಿ ಕವಿಯ ವೈಯಕ್ತಿಕ ಬದುಕಿನ ಕಷ್ಟಕಾರ್ಪಣ್ಯಗಳ ವಿಷಾದಪೂರ್ಣ ಚಿತ್ರಣವಿದ್ದರೆ ಉಳಿದ ಒಂಬೈನೂರು ಪದ್ಯಗಳು ಸಂಸ್ಕೃತದಿಂದ, ಇಂಗ್ಲಿಷಿನಿಂದ ಅನುವಾದಿಸಿದವುಗಳ ಜೊತೆಗೆ ಸ್ವಂತದ ಸುಭಾಷಿತಗಳು, ಸರಸೋಕ್ತಿಗಳು, ಚಾಟೂಕ್ತಿಗಳು, ಆದಿಪ್ರಾಸರಹಿತವಾದ ಸರಸ ಸಾಂಗತ್ಯದ ರೂಪತಾಳಿವೆ. ಇವುಗಳಲ್ಲಿ ಕಲ್ಪನೆ, ವಿನೋದ, ಹಾಸ್ಯ, ಉಲ್ಲಾಸ, ರಸಿಕತೆ ಎಲ್ಲ ಇವೆ. ಉದಾಹರಣೆಗೆ ಒಂದೆರಡನ್ನು ನೋಡಬಹುದು:

ಮೇಲಕೆ ಹತ್ತಿರಿ ಮುಂದಕೆ ಬನ್ನಿರಿ
ಎಂದು ಕಂಡಕ್ಟರು ಕರೆಯೆ
ಉಳಿದೆಲ್ಲ ಕಡೆಯೊಳು ಹಿಂದಕೆ ತಳ್ಳಿಸಿ
ಕೊಂಡವನಾನಂದಕೆಣೆಯೆ.

ನೀವೊಂದು ಸೀರೆಯ ನೆನಗಾಗಿ ತಂದಂತೆ
ನಾ ಕಂಡೆ ಕನಸನು ನಿನ್ನೆ.
ನಾಳೆ ಆ ಸೀರೆಯ ನೀನುಟ್ಟು ನಲಿದಂತೆ
ಕನಸನು ಕಾಣೆನ್ನ ಚೆನ್ನೆ..

ಮೊದಲನೆಯ ಪದ್ಯದಲ್ಲಿ ಸಮಾಜದಲ್ಲಿ ಪ್ರತಿಭೆಗೆ ಬಂದ ದುರವಸ್ಥೆಯನ್ನು ಅನ್ಯೋಕ್ತಿಯ ರೂಪದಲ್ಲಿ ಹೇಳಲಾಗಿದೆ. ಎರಡನೆಯದರಲ್ಲಿ ಹಾಸ್ಯವಿದೆ, ಪರಿಹಾಸ್ಯವಿದೆ, ವ್ಯಂಗ್ಯವಿದೆ, ಬಡತನದ ಬವಣೆಗಳಿವೆ.

'ಚಂದ್ರವೀಧಿ' ಅವರ ಸ್ವತಂತ್ರ ಶೃಂಗಾರ ಮುಕ್ತಕಗಳ ಸಂಕಲನ. ತರುಣವಯಸ್ಸಿನ ದಂಪತಿಗಳ ಸಂಸಾರದ ಸರಸವಿರಸಗಳು, ಪ್ರಣಯಿಗಳ ಆಮೋದ ಪ್ರಮೋದಗಳು, ಲಜ್ಜೆ–ಭೀತಿಗಳು, ಮುನಿಸು ಕನಸುಗಳು, ವಿರಹ–ವಿಲಾಸಗಳು ಇಲ್ಲಿ ಸುಂದರ ಸಾಂಗತ್ಯಗಳಲ್ಲಿ ಅಭಿವ್ಯಕ್ತಿಯನ್ನು ಪಡೆದುಕೊಂಡಿವೆ.

## ಸಾಧನೆಯ ಸಿದ್ಧಿಶೃಂಗ

ಭಟ್ಟರು ಮುಕ್ತಕಗಳ ರಚನೆಯಲ್ಲಿ ಹೇಗೆ ಒಂದು ಎತ್ತರವನ್ನು ಮುಟ್ಟಿದರೋ ಅದಕ್ಕೂ ಒಂದು ಕೈ ಮಿಗಿಲು ಎನ್ನುವಂಥ ಎತ್ತರವನ್ನು ಮುಟ್ಟಿದ್ದು ವಚನಗಳ ರಚನೆಯಲ್ಲಿ. ಎಸ್.ವಿ. ರಂಗಣ್ಣ, ಬೇಂದ್ರೆ, ಕುವೆಂಪು, ಜ.ಚ.ನಿ., ಸಿದ್ದಯ್ಯ ಪುರಾಣಿಕರಂತೆ ಎಸ್.ವಿ.ಪಿ ಕೂಡ ಆಧುನಿಕ ಕಾಲದಲ್ಲಿ ವಚನರಚನೆಯಲ್ಲಿ ಸಿದ್ಧಹಸ್ತರು. 2100ರಷ್ಟಿರುವ ಅವರ ವಚನಗಳು 'ಉಪ್ಪುಕಡಲು', 'ಪಾಮರ', 'ಉಂಬರ' ಎಂಬ ಮೂರು ಸಂಕಲನಗಳಲ್ಲಿ ಸಂಗ್ರಹಿತವಾಗಿವೆ. ವಿವಿಧ ಬಗೆಯ ಪ್ರಾಸಾನುಪ್ರಾಸಗಳಿಂದ, ಲಯಗಾರಿಕೆಯಿಂದ, ಪ್ರಾಚೀನರ ವಚನಗಳಿಗೆ ಹತ್ತಿರವಾದ ಇವು ಭಟ್ಟರ ಲೋಕಾನುಭವಕ್ಕೆ ಹಿಡಿದ ಕನ್ನಡಿಗಳಾಗಿವೆ. ಸರಳತೆ, ಸುಭಗತೆ, ಧ್ವನಿರಮ್ಯತೆಗಳಿಂದ ಇವು ಮುದನೀಡುತ್ತವೆ. ಹೊಸಕಾಲದ ಸಂವೇದನೆಗಳು ವಚನದ ರೂಪದಲ್ಲಿ ಸುಂದರವಾಗಿ ರೂಪುಗೊಂಡಿವೆ. ಹಾ.ಮಾ.ನಾಯಕರ ಮಾತಿನಲ್ಲಿ 'ಉಪ್ಪುಕಡಲು ಆಧುನಿಕ ಕನ್ನಡದ ಶ್ರೇಷ್ಠ ಗ್ರಂಥ. ಅವರ ಪರಿಣತ ಕೃತಿ.'

## ಅನುವಾದದ ಹೊಸ ಸೋಪಾನ

ಭಟ್ಟರ ಸ್ವಂತ ಸಾಹಿತ್ಯ ಸೃಷ್ಟಿಯಷ್ಟೇ ಅಥವಾ ಅದಕ್ಕೂ ಒಂದು ಕೈ ಮೇಲು ಎನ್ನುವ ಹಾಗೆ ಅವರ ಅನುವಾದ ಸಾಹಿತ್ಯವಿದೆ. ಸಂಸ್ಕೃತದ ಕಾಳಿದಾಸ, ಭಾಸ, ಭವಭೂತಿ, ಹರ್ಷ ಇವರುಗಳ ಸಮಗ್ರ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿರುವುದೇ ಅಲ್ಲದೆ ಹಾಲನ 'ಗಾಥಾ ಸಪ್ತಶತಿ', ಅಮರು ಕವಿಯ 'ಅಮರುಶತಕ', ಭರ್ತೃಹರಿಯ 'ಶತಕತ್ರಯ', ಜಯದೇವನ 'ಗೀತಗೋವಿಂದ', ಕಲ್ಯ ಲಕ್ಷ್ಮೀನರಸಿಂಹಕವಿಯ 'ಕವಿಕೌಮುದಿ', ಅಶ್ವಘೋಷನ 'ಬುದ್ಧಚರಿತೆ'ಗಳನ್ನು ಕನ್ನಡಕ್ಕೆ ತಂದಿದ್ದಾರೆ. ಹೀಗೆ ಇಷ್ಟೊಂದು ಸಂಸ್ಕೃತ ಕವಿ–ಕೃತಿಗಳನ್ನು ಒಬ್ಬರೇ ಅನುವಾದಿಸಿದ ಇನ್ನೊಂದು ಉದಾಹರಣೆ ಭಾರತದಲ್ಲಿಯೇ ಇಲ್ಲ. ಕನ್ನಡದ ಜಾಯಮಾನಕ್ಕೆ ಹೊಂದುವಂತೆ ಲಲಿತವಾಗಿ ಸರಳವಾಗಿ, ಮಂದಾನಿಲ, ಲಲಿತ, ಉತ್ಸಾಹ, ಭಾಮಿನಿಯೇ ಮೊದಲಾದ ವಿವಿಧ ಬಗೆಯ ಲಯಗಳಲ್ಲಿ ಇವನ್ನು ಅನುವಾದಿಸಿದ್ದಾರೆ. ಇಂಗ್ಲಿಷಿನಿಂದ ಅಡಿಸನ್, ಸ್ಟೀಲ್, ಚಾರ್ಲ್ಸ್ ಲ್ಯಾಂಬ್ ಮೊದಲಾದ ಇಂಗ್ಲಿಷ್‌ನ ಶ್ರೇಷ್ಠ ಪ್ರಬಂಧಕಾರರ ಪ್ರಬಂಧಗಳನ್ನು 'ಕೆಲವು ಇಂಗ್ಲಿಷ್ ಪ್ರಬಂಧಗಳು' ಹೆಸರಿನಲ್ಲಿ ಅನುವಾದಿಸಿದ್ದಾರೆ.


## ರಸಜ್ಞ ವಿಮರ್ಶಕ

ಸೃಜನಶೀಲ ಸಾಹಿತ್ಯ ಮತ್ತು ಅನುವಾದಗಳಷ್ಟೇ ಅವರ ಗದ್ಯಸಾಹಿತ್ಯವೂ ವಿಪುಲವಾಗಿದೆ. ಭಾವಗೀತೆಯ ಲಕ್ಷಣಗಳನ್ನು ಸೋದಾಹರಣವಾಗಿ ನಿರೂಪಿಸುವ 'ಭಾವಗೀತೆ' ಚಿಕ್ಕದಾದರೂ ಚೊಕ್ಕದಾದ ಕೃತಿ. 'ಅಕ್ಕಮಹಾದೇವಿ', 'ಸೀಳುನೋಟ' ಮತ್ತು ಇತರ ಕೃತಿಗಳು ಅವರ ಚಿಂತನದ ಗಾಢತೆ ಮತ್ತು ಮಂಥನದ ವೈಶಾಲ್ಯಕ್ಕೆ ನಿದರ್ಶನಗಳಾಗಿವೆ. 'ರಸಋಷಿ' ಐದು ಸಂಪುಟಗಳಲ್ಲಿ ರಚಿತವಾಗಿದ್ದು ಕುವೆಂಪು ಸಮಗ್ರ ಕೃತಿಲೋಕಕ್ಕೆ ಸಹೃದಯರನ್ನು ಕರೆದೊಯ್ಯುವ ವಿವರಪೂರ್ಣ ಕೃತಿ. ವಿಮರ್ಶೆಯಲ್ಲಿ ಅವರದು ರಸವಿಮರ್ಶೆಯ ಹಾದಿ. ಕರ್ನಾಟಕದ ಕೆಲವೇ ಅತ್ಯುತ್ತಮ ವಾಗ್ಮಿಗಳಲ್ಲಿ ಅವರೊಬ್ಬರಾಗಿದ್ದರು. ಅವರ ವಾಗ್ಸರಿಯೆಂದರೆ ನಯವಾಗಿ ನವುರಾಗಿ ಎಳೆಎಳೆಯಾಗಿ ಉಪಮೆ, ರೂಪಕ, ಗಾದೆ, ಚಾಟುನುಡಿಗಳನ್ನು ಒಳಗೊಂಡು ಸಾಗುವ ಮಹಾನದಿಯ ಹಾಗೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಅನುವಾದ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ವಿಶೇಷ ಪುರಸ್ಕಾರ, ಚಾವುಂಡರಾಯ ಪ್ರಶಸ್ತಿ, ಕುವೆಂಪು ಮತ್ತು ಮೈಸೂರು ವಿಶ್ವವಿದ್ಯಾಲಯಗಳ ಗೌರವ ಡಾಕ್ಟರೇಟ್, 'ಪೂರ್ಣಕುಂಭ', 'ಪರಮೇಶ್ವರ' ಅಭಿನಂದನಾ ಗ್ರಂಥಗಳ ಸಮರ್ಪಣೆ– ಇವು ಭಟ್ಟರ ಸಾಹಿತ್ಯ ಸಾಧನೆಗೆ ಸಂದಿರುವ ಕೆಲವು ಗೌರವಗಳು.

ಯಾವ ಸದ್ದುಗದ್ದಲವಿಲ್ಲದೆ ಅಬ್ಬರ ಆಡಂಬರಗಳಿಲ್ಲದೆ ತಾವಿದ್ದೆಡೆಯಲ್ಲಿಯೇ ಪರಮೇಶ್ವರ ಭಟ್ಟರು ಆಧುನಿಕ ಕನ್ನಡದ ದೀಪ ಬೆಳಗಿಸಿದವರು. ಈ ಆಚಾರ್ಯರನ್ನು ಅವರ ಶತಮಾನೋತ್ಸವ ವರ್ಷದಲ್ಲಿ ನೆನೆದು ಅವರ ಸಾಹಿತ್ಯಸೇವೆಗೆ ಕೃತಜ್ಞತೆ ಸಲ್ಲಿಸುವ ಸಾರ್ಥಕ ಕೆಲಸವನ್ನು ಕನ್ನಡದ ಜನ ಮತ್ತು ಸರ್ಕಾರ ಮಾಡಬೇಕಿದೆ. ಕುವೆಂಪು ಭಾಷಾಭಾರತಿ ಪರಮೇಶ್ವರಭಟ್ಟರ ಅನುವಾದಿತ ಕೃತಿಗಳ ಸಮಗ್ರ ಸಂಪುಟ ಪ್ರಕಟಿಸುವ ಯೋಜನೆ ಹಮ್ಮಿಕೊಂಡಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಭಟ್ಟರ ಸ್ವತಂತ್ರ ಕೃತಿಗಳ ಸಮಗ್ರ ಸಂಪುಟಗಳನ್ನು ಹೊರತರುವ ಯೋಜನೆ ಹಮ್ಮಿಕೊಳ್ಳುತ್ತದೆಂದು ಆಶಿಸೋಣ.

❑ ಡಾ. ಆರ್. ಲಕ್ಷ್ಮೀನಾರಾಯಣ

ಕೃಪೆ: ಪ್ರಜಾವಾಣಿ





# ದೆಹಲಿ ಕರ್ನಾಟಕ ಸಂಘ

## ಅಭಿನಂದನೆ

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ
ಕವಿ, ನಾಟಕಕಾರ



ಡಾ.ಎಚ್.ಎಸ್ ಶಿವಪ್ರಕಾಶ್ ಅವರಿಗೆ
ಫೆಬ್ರವರಿ 22, ಶುಕ್ರವಾರ
ಸಂಜೆ 6 ಗಂಟೆಗೆ
ಸ್ಥಳ: ಸಂಘದ ಸೆಮಿನಾರ್ ಹಾಲ್
ಎಲ್ಲರಿಗೂ ಸುಸ್ವಾಗತ

ಡಾ.ವೆಂಕಟಾಚಲ ಹೆಗಡೆ
ಅಧ್ಯಕ್ಷರು

ಸಿ.ಎಂ.ನಾಗರಾಜ
ಪ್ರಧಾನ ಕಾರ್ಯದರ್ಶಿ

# ‘ನೀರು ಮತ್ತು ಪ್ರೀತಿ’ಯ ಅಗ್ರಹಾರ ಕೃಷ್ಣಮೂರ್ತಿ ಅವರಿಗೆ ಬೀಳ್ಕೊಡುಗೆ

ಕೇಂದ್ರ ಸಾಹಿತ್ಯ ಅಕಾಡೆಮಿಯ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿ ಈಗ ನಿವೃತ್ತರಾಗಿ ಬೆಂಗಳೂರಿಗೆ ತೆರಳುತ್ತಿರುವ ಶ್ರೀ ಅಗ್ರಹಾರ ಕೃಷ್ಣಮೂರ್ತಿ ಅವರನ್ನು ಶನಿವಾರ ಫೆಬ್ರವರಿ 2ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಆತ್ಮೀಯವಾಗಿ ಬೀಳ್ಕೊಡಲಾಯಿತು. ಕರ್ನಾಟಕದ ಸಂಸ್ಕೃತಿಯನ್ನು ಸಮಗ್ರವಾಗಿ ನೋಡಿದವರಲ್ಲಿ ಅಗ್ರಹಾರರು ಪ್ರಮುಖವಾಗಿ ನಿಲ್ಲುತ್ತಾರೆ. ಜಾನಪದ, ವಿಮರ್ಶೆ, ಅನುವಾದ, ಕಾವ್ಯ, ಕಾದಂಬರಿ ಹೀಗೆ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ಅತ್ಯಂತ ನಿಷ್ಠೆಯಿಂದ ದುಡಿದಿರುವ ಅಗ್ರಹಾರರಿಗೆ ಪುಸ್ತಕ ಲೋಕವೇ ಬದುಕು. ಅನೇಕ ದೇಶ ವಿದೇಶಗಳನ್ನು ಸುತ್ತಿ ಹಲವಾರು ಉಪನ್ಯಾಸಗಳನ್ನು ನೀಡಿದ್ದಾರೆ, ಚರ್ಚಾಕೂಟ, ವಿಷಯಮಂಡನೆಗಳಲ್ಲಿ ಭಾಗವಹಿಸಿರುತ್ತಾರೆ. ವೃತ್ತಿ ಬದುಕಿನಿಂದ ನಿವೃತ್ತರಾಗಿ ತಾಯ್ನಾಡಿಗೆ ತೆರಳುತ್ತಿರುವ ಅಗ್ರಹಾರ ಕೃಷ್ಣಮೂರ್ತಿ ಅವರ ಕನ್ನಡದ ಸೇವೆ ನಿರಂತರವಾಗಿರಲಿ ಎಂದು ಹಾರೈಸಿದ ಸಾಹಿತ್ಯ ಸಮಿತಿ ಅಧ್ಯಕ್ಷ ಡಾ.ಪುರುಷೋತ್ತಮ ಬಿಳಿಮಲೆ ಅವರು ಕಾರ್ಯಕ್ರಮಕ್ಕೆ ಸ್ವಾಗತ ಕೋರಿದರು.

ಕೇಂದ್ರ ಸಚಿವಾಲಯದ ಹಿರಿಯ ಗ್ರಂಥಪಾಲಕರಾದ ಡಾ.ಅವನೀಂದ್ರನಾಥ್ ರಾವ್ ಅವರು ಅಗ್ರಹಾರ ಕೃಷ್ಣಮೂರ್ತಿ ಅವರೊಂದಿಗಿನ ತಮ್ಮ ಒಡನಾಟ, ಅವರ ಸಹೃದಯತೆ, ಮೆಲುಮಾತು, ಕರ್ತವ್ಯನಿಷ್ಠೆಗಳನ್ನು ಅನೇಕ ಘಟನೆಗಳ ಮೂಲಕ ಮೆಲುಕು ಹಾಕಿದರು. ಬೀಳ್ಕೊಡುಗೆ ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ದೆಹಲಿ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕರಾದ ಡಾ.ಟಿ.ಎಸ್.ಸತ್ಯನಾಥ್ ಅವರು ತಮ್ಮ ಆಪ್ತ ಸ್ನೇಹಿತ ಅಗ್ರಹಾರರೊಂದಿಗಿನ ತಮ್ಮ ಸುದೀರ್ಘ 35 ವರ್ಷಗಳ ಸ್ನೇಹ, ಪುಂಡಾಟ, ಸಾಹಿತ್ಯವೇ ಪ್ರಧಾನವಾದ ಸ್ನೇಹದಲ್ಲಿ ಜೊತೆಯಾಗಿ ಕಳೆದ ಸಾಹಿತ್ಯದ ಬದುಕು, ಬರಹ, ಚರ್ಚೆ, ಸಂವಾದ, ಹಾಸ್ಯದ ಕ್ಷಣಗಳನ್ನು ಆಪ್ಯಾಯವಾಗಿ ನೆನೆದರು. ಕೀರಂ, ಕೆ.ವಿ.ಎನ್, ಡಿ.ಆರ್, ಶ್ರೀನಿವಾಸ ರಾಜು ಮುಂತಾದ ಸಾಹಿತಿ ದಿಗ್ಗಜರ ಯೋಚನಾಕ್ರಮ, ದಟ್ಟ ಪ್ರಭಾವದಲ್ಲಿ ಅಗ್ರಹಾರರು ಯಾವುದೇ ಪಾರಂಪರಿಕ ಚೌಕಟ್ಟಿಗೆ ಒಳಪಡದೇ ‘ಬೆಳದಿಂಗಳಪ್ಪನ ಪೂಜೆ’ – ವಿಮರ್ಶಾ ವಿಧಾನ ಮತ್ತು ‘ಬಹುವಚನ’ ಕೃತಿಯಲ್ಲಿ ಅಂತರ್ಮುಖಿ ಸಾಂಕೇತಿಕತೆಯ ತೌಲನಿಕ ಚೌಕಟ್ಟು ಕಂಡುಬರುತ್ತದೆ ಎಂಬ ಅಂಶವನ್ನು ವಿವರಿಸಿದರು. ತಮ್ಮ ಪ್ರಿಯ ಗೆಳೆಯನಿಗೆ ಹೀಗೆ ದಿಢೀರ್ ಬೀಳ್ಕೊಡುಗೆ ಕಾರ್ಯಕ್ರಮ ಆಯೋಜಿಸಿ ಚಕಿತಗೊಳಿಸಿದ ಸತ್ಯನಾಥ್‌ರ ತುಂಟತನದಲ್ಲಿ ಮಗುವಿನ ಮುಗ್ಧತೆ ಸೂಸುತ್ತಿತ್ತು.



ನಂತರ ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷ ಬಿ.ಕೆ.ಬಸವರಾಜು ಅವರು ಅಗ್ರಹಾರ ಕೃಷ್ಣಮೂರ್ತಿ ಅವರು ಶಾಲು ಹೊದೆಸಿ, ಕಾರ್ಯದರ್ಶಿ ಸಿ.ಎಂ.ನಾಗರಾಜ ಪುಷ್ಪಗುಚ್ಛವನ್ನು ನೀಡಿ ಶುಭಾಶಯ ಕೋರಿದರು. ಅಗ್ರಹಾರ ಕೃಷ್ಣಮೂರ್ತಿ ಅವರು ತಮ್ಮ ನೂರಾರು ಪುಸ್ತಕಗಳನ್ನು ಸಂಘದ ಗ್ರಂಥಾಲಯಕ್ಕೆ ಕೊಡುಗೆಯಾಗಿ ನೀಡಿದರು. ಜಂಟಿ ಕಾರ್ಯದರ್ಶಿ ಶ್ರೀನಾಥ್ ಪುಸ್ತಕಗಳನ್ನು ಸೀಕರಿಸಿ ನಾಡಿಗೆ ತೆರಳಲಿರುವ ಅಗ್ರಹಾರರಿಗೆ ಶುಭಕೋರಿದರು. ತದನಂತರ ಗೌರವ ಸ್ವೀಕರಿಸಿ ಮಾತನಾಡಿದ ಅಗ್ರಹಾರ ಕೃಷ್ಣಮೂರ್ತಿಯವರು ಮಾತಿನ ಅರ್ಥಕ್ಕಿಂತಲೂ ಮೌನದ ಅರ್ಥವೇ ಹೆಚ್ಚು ಮೌಲ್ಯವುಳ್ಳದ್ದು ಎಂದು ಭಾವಪೂರಿತರಾಗಿ ನುಡಿದ ಅವರು ತಮ್ಮ ಅಂತರಂಗದ ಮಾತುಗಳನ್ನು ಹಂಚಿಕೊಂಡರು. ತಮ್ಮನ್ನು ಪ್ರೀತಿಪೂರ್ವಕವಾಗಿ ಕರೆಸಿಕೊಂಡ ದೆಹಲಿ ಕರ್ನಾಟಕ ಸಂಘಕ್ಕೆ, ಪ್ರೀತಿಪೂರ್ವಕವಾಗಿ ಈ ಕಾರ್ಯಕ್ರಮವನ್ನು ರೂಪಿಸಿದ ಗೆಳೆಯ ಟಿ.ಎಸ್.ಸತ್ಯನಾಥ್, ಡಾ.ಪುರುಷೋತ್ತಮ ಬಿಳಿಮಲೆ ಅವರಿಗೆ ಹಾಗೂ ಸಂಘದ ಎಲ್ಲ ಪದಾಧಿಕಾರಿಗಳಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು. ಸಂಘದ ಪ್ರಧಾನ ಕಾರ್ಯದರ್ಶಿ ಸಿ.ಎಂ.ನಾಗರಾಜ ವಂದಿಸಿದರು. ಸಾಹಿತ್ಯ ಸಮಿತಿ ಸಂಚಾಲಕ ಪಿ.ಸಿ.ಶ್ರೀನಿವಾಸ ಕಾರ್ಯಕ್ರಮವನ್ನು ನಿರೂಪಿಸಿದರು.

❑ ರೇಣುಕಾ ನಿಡಗುಂದಿ



**ಕರ್ನಾಟಕ ಸರ್ಕಾರ ನೀಡಿರುವ ಒಂದು ಕೋಟಿ ಅನುದಾನದಲ್ಲಿ ನಡೆದ ಕೆಲಸ ಕಾರ್ಯಗಳನ್ನು ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಶ್ರೀ ಬಸವರಾಜ್ ಅವರು ಫೆಬ್ರವರಿ 2ರಂದು ಸಂಘಕ್ಕೆ ಭೇಟಿ ನೀಡಿ ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು ಹಾಗೂ ಸಂಘದಲ್ಲಿ ಒಳ್ಳೆಯ ಕೆಲಸಗಳು ನಡೆಯುತ್ತಿವೆ, ಅದು ಹೀಗೆಯೇ ಮುಂದುವರಿಯಲಿ, ನಾವು ಯಾವಾಗಲೂ ತಮಗೆ ಸಹಕರಿಸುತ್ತೇವೆ ಎಂಬುದಾಗಿ ತಿಳಿಸಿದರು.**

## ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿ

ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿ 2012–13ನ್ನು ಮಾರ್ಚ್ ತಿಂಗಳ 17ನೇ ತಾರೀಖಿನಿಂದ ಏಪ್ರಿಲ್ 14ರೊಳಗೆ ಪೂರ್ಣಗೊಳಿಸಲಾಗುವುದು. ಎಲ್ಲ ಕನ್ನಡ ಕ್ರಿಕೆಟ್ ತಂಡದ ಆಟಗಾರರು ತಮ್ಮ ತಮ್ಮ ತಂಡಗಳನ್ನು ಸಿದ್ಧಗೊಳಿಸಿ, ತಂಡದ ಹೆಸರನ್ನು ಸಂಘದ ಕಚೇರಿಗೆ ನೀಡಬೇಕಾಗಿ ಕೇಳಿಕೊಳ್ಳಲಾಗಿದೆ. ಮಾರ್ಚ್ 10ರಂದು ಟೈಸ್ ಸಂಘದ ಆವರಣದಲ್ಲಿ ಹಾಕಲಾಗುವುದು.

ಸೂಚನೆ: ಸಂಘದ ಸದಸ್ಯರಾಗಿರಬೇಕು. ಪ್ರತಿ ತಂಡದ ನೋಂದಣಿ ಶುಲ್ಕ ರೂ.1,000/–

ಎನ್.ಆರ್.ಶ್ರೀನಾಥ್
ಸಂಚಾಲಕರು, ಆಟೋಟ ಉಪಸಮಿತಿ

## ಉಚಿತ ವೈದ್ಯಕೀಯ ತಪಾಸಣೆ

ಫೆಬ್ರವರಿ 24 ರ ಭಾನುವಾರದಂದು ಡಾ. ಭೀಮಭಟ್ ಅವರಿಂದ ಉಚಿತ ವೈದ್ಯಕೀಯ ತಪಾಸಣೆ ನಡೆಯಲಿದೆ. ದೆಹಲಿ ಕನ್ನಡಿಗರು ಈ ವೈದ್ಯಕೀಯ ಸೇವೆಯನ್ನು ಸದುಪಯೋಗಪಡಿಸಿ ಕೊಳ್ಳಬೇಕಾಗಿ ವಿನಂತಿ.

## You are not mobile, if you are not KBL Mobile

**KBL Mobile**

Safe.
Simple.
Speedy.



**Features of KBL Mobile Banking**

- Quick and easy registration
- Instant activation
- User Friendly
- Send or receive funds anytime, anywhere.
- Bill payments

*Register now for "Lifestyle changing Banking"*



**MoneyClick™**
Internet Banking

## Experience the joy of online banking wherever you are

Services accessible:

- Inquiries and Requests • Funds Transfer
- Corporate Services • Trade Finance
- Utility Bill Payment • SMS Banking / Alert

# KBL GOLD LOAN



## LESS GOLD MORE LOAN

Low rate of Interest • Quick Sanction

# FREE SMS TO KNOW YOUR TRANSACTIONS!!!




Get instant details of transactions with available balance in account

**Your convenience is our concern!!!**

*Condition apply

Karnataka Bank Ltd.
Your Family Bank. Across India.

Regd. & Head Office: Mangalore - 575 002
E-mail: info@ktkbank.com Visit us at: www.karnatakabank.com

Delhi Karnataka Sangha's Abhimatha Monthly,
February -2013, Price Rs.1/- RNI Regn. No. 53405/91, DL-SW-1/4016/13-15
Printout Date : February 8th / 9th, Postal Date :10th / 11th, Total Pages-24

ಭಾರತದ ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ತುಳು ಭಾಷೆಯ ಸೇರ್ಪಡೆಗಾಗಿ

# ಜಾಗತಿಕ ತುಳುವರ ಬೃಹತ್ ಸಮಾವೇಶ

**ದೆಹಲಿ ಕನ್ನಡ ಶಾಲೆಯ ಆವರಣ, ಲೋಧಿ ಎಸ್ಟೇಟ್, ನವದೆಹಲಿ**

ದೆಹಲಿ ತುಳು ಸಿರಿ
ತುಳು ಜಾಗತಿಕ ಸಮಾವೇಶ

## 24 ಫೆಬ್ರವರಿ 2013 ಮುಂಜಾನೆ 10 ಗಂಟೆಗೆ

### ಉದ್ಘಾಟನಾ ಸಮಾರಂಭ

**ಎಂ. ವೀರಪ್ಪ ಮಹಾದ್ವಾರ** | **ಎಂ.ಕೆ. ಧರ್ಮರಾಜ ಮಂಟಪ**

ಪ್ರಾಸ್ತಾವಿಕ
**ಶ್ರೀ ಆಸ್ಕರ್ ಫರ್ನಾಂಡಿಸ್,** *ಮಾನ್ಯ ರಾಜ್ಯ ಸಭಾ ಸದಸ್ಯರು*

ಉದ್ಘಾಟನೆ
**ಡಾ. ಎಂ. ವೀರಪ್ಪ ಮೊಯಿಲಿ,** *ಮಾನ್ಯ ಕೇಂದ್ರ ಸಚಿವರು*
*ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆ*

ಅಧ್ಯಕ್ಷತೆ
**ಡಾ. ಬಿ.ಎ. ವಿವೇಕ ರೈ,***ವಿದ್ವಾಂಸರು*
*ವಿಶ್ರಾಂತ ಉಪ ಕುಲಪತಿ, ಕನ್ನಡ ವಿಶ್ವ ವಿದ್ಯಾನಿಲಯ ಹಂಪಿ*

ಮುಖ್ಯ ಅತಿಥಿಗಳು

**ಶ್ರೀ ಮಲ್ಲಿಕಾರ್ಜುನ ಖರ್ಗೆ,** *ಮಾನ್ಯ ಕೇಂದ್ರ ಸಚಿವರು*
*ಕಾರ್ಮಿಕ ಮತ್ತು ಉದ್ಯೋಗ ಖಾತೆ*

**ಶ್ರೀ ಕೆ. ರೆಹಮಾನ್ ಖಾನ್,** *ಮಾನ್ಯ ಕೇಂದ್ರ ಸಚಿವರು*
*ಅಲ್ಪ ಸಂಖ್ಯಾತ ವ್ಯವಹಾರಗಳ ಖಾತೆ*

**ಶ್ರೀ ಕೆ.ಎಚ್. ಮುನಿಯಪ್ಪ,** *ಮಾನ್ಯ ಕೇಂದ್ರ ಸಚಿವರು*
*ಸಣ್ಣ ಮತ್ತು ಮಧ್ಯಮ ಕೈಗಾರಿಕೆ ಖಾತೆ*

**ಶ್ರೀ ಡಿ.ವಿ. ಸದಾನಂದ ಗೌಡ**
*ಮಾನ್ಯ ಮಾಜಿ ಮುಖ್ಯಮಂತ್ರಿಗಳು, ಕರ್ನಾಟಕ ಸರಕಾರ*

**ಶ್ರೀ ಕೋಟ ಶ್ರೀನಿವಾಸ ಪೂಜಾರಿ,** *ಮಾನ್ಯ ಸಚಿವರು*
*ಬಂದರು, ಒಳನಾಡು ಜಲಸಾರಿಗೆ, ಮುಜರಾಯಿ ಇಲಾಖೆ, ಕರ್ನಾಟಕ ಸರಕಾರ*

**ಶ್ರೀ ಸುರೇಶ್ ಶೆಟ್ಟಿ,** *ಮಾನ್ಯ ಸಚಿವರು*
*ಸಾರ್ವಜನಿಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಮಹಾರಾಷ್ಟ್ರ ಸರಕಾರ*

**ಶ್ರೀ ಡಿ. ಸುರೇಂದ್ರ ಕುಮಾರ್**, *ಧರ್ಮಸ್ಥಳ*
*ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಟ್ರಸ್ಟಿ*

**ಡಾ. ಎಂ. ಮೋಹನ್ ಆಳ್ವ**
*ಅಧ್ಯಕ್ಷರು, ಆಳ್ವಾಸ್ ಶಿಕ್ಷಣ ಪ್ರತಿಷ್ಠಾನ*

**ಶ್ರೀ ಬೈಕೆರೆ ನಾಗೇಶ್**
*ಕರ್ನಾಟಕ ಸರಕಾರದ ವಿಶೇಷ ಸಮನ್ವಯಕರು, ನವ ದೆಹಲಿ*

ವಿಶೇಷ ಉಪಸ್ಥಿತಿ
**ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ,** *ಮಾನ್ಯ ಲೋಕ ಸಭಾ ಸದಸ್ಯರು* ,**ಶ್ರೀ ನಳಿನ್ ಕುಮಾರ್ ಕಟೀಲು,** *ಮಾನ್ಯ ಲೋಕ ಸಭಾ ಸದಸ್ಯರು*
**ಶ್ರೀ ಉಮಾನಾಥ ಎ. ಕೋಟ್ಯಾನ್,** *ಅಧ್ಯಕ್ಷರು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ*

ವಿಶೇಷ ಉಪನ್ಯಾಸಗಳು
**ತುಳುನಾಡ ಸಿರಿ: ಸಂಸ್ಕೃತಿ ಮತ್ತು ಭಾಷೆ**
**ಡಾ. ನಿತ್ಯಾನಂದ ಬಿ. ಶೆಟ್ಟಿ** *ಪ್ರಾಧ್ಯಾಪಕರು, ತುಮಕೂರು ವಿಶ್ವ ವಿದ್ಯಾಲಯ*
**ಶ್ರೀ ನರೇಂದ್ರ ರೈ ದೇರ್ಲ**, *ಪ್ರಾಧ್ಯಾಪಕರು ಮತ್ತು ಪರಿಸರಾಸಕ್ತ ಕೃಷಿಕರು*

### ಸಾಂಸ್ಕೃತಿಕ ಸಮಾರಂಭ

ಉದ್ಘಾಟನೆ
**ಶ್ರೀಮತಿ ಜಯಮಾಲ,**
*ಮಾಜಿ ಅಧ್ಯಕ್ಷರು ಕರ್ನಾಟಕ ಚಲನ ಚಿತ್ರ ಮಂಡಲಿ*

ಚಿತ್ರ ಲಹರಿ
**ಶಿವಧ್ವಜ್,** *ಚಿತ್ರ ನಟರು*
**ಗುರು ಕಿರಣ್,** *ಸಂಗೀತ ನಿರ್ದೇಶಕರು*
**ಅನುಷ್ಕಾ ಶೆಟ್ಟಿ,** *ಚಿತ್ರ ನಟಿ*
**ಸೌಂದರ್ಯ,** *ಚಿತ್ರ ನಟಿ*
**ದುನಿಯಾ ರಶ್ಮಿ,** *ಚಿತ್ರ ನಟಿ*
**ಮತ್ತಿತರರು**

ತುಳುನಾಡ ವೈಭವ ದೃಶ್ಯ ರೂಪಕ
*ನಿರ್ದೇಶನ ಮತ್ತು ಪರಿಕಲ್ಪನೆ*
**ಚಂದ್ರಹಾಸ ಸುವರ್ಣ**

ತುಳುಗೀತೆಗಳು
**ಶಶಿಧರ್ ಕೋಟೆ** *ಅವರಿಂದ*

ತುಳು ಯಕ್ಷಗಾನ
**ಯಕ್ಷ ಮಂಜೂಷ,**
**ಮಂಗಳೂರು** *ತಂಡದಿಂದ*

**ಸಹಕಾರ**
ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಸರಕಾರ
ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಮತ್ತು ದೆಹಲಿಯ ಎಲ್ಲಾ ಸ್ಥಳೀಯ ಸಂಘ ಸಂಸ್ಥೆಗಳು

**ಕಾರ್ಯಕಾರಿ ಸಮಿತಿ, ದೆಹಲಿ ತುಳು ಸಿರಿ 2013**
ಅಧ್ಯಕ್ಷರು : **ಐ. ರಾಮಮೋಹನ ರಾವ್**
ಕಾರ್ಯಕ್ರಮ ನಿರ್ದೇಶಕರು : **ಡಾ. ಪುರುಷೋತ್ತಮ ಬಿಳಿಮಲೆ**
ಸಂಚಾಲಕರು : **ವಸಂತ ಶೆಟ್ಟಿ ಬೆಳ್ಳಾರೆ**

# ಎಲ್ಲರಿಗೂ ಆತ್ಮೀಯ ಆಮಂತ್ರಣ

**ವಿ.ಸೂ.** ಕಾರ್ಯಕ್ರಮಕ್ಕೆ ಬಂದು ಹೋಗಲು ವಾಹನದ ವ್ಯವಸ್ಥೆ ಮಾಡಲಾಗಿದೆ. * ಉಪಹಾರ ಮತ್ತು ಊಟದ ವ್ಯವಸ್ಥೆ ಮಾಡಲಾಗಿದೆ.ಉದ್ಘಾಟನಾ ಕಾರ್ಯಕ್ರಮವು ಕನ್ನಡದಲ್ಲಿರುತ್ತದೆ
ವಿವರಗಳಿಗೆ ಸಂಪರ್ಕಿಸಿ 9958697823 delhitulusiri@gmail.com

Editor: Smt.Usha Bharatadri, Printed & Published by C.M. Nagaraja General Secretary on behalf of Delhi Karnataka Sangha (R)
Rao Tularam Marg, Sector-12, R.K.Puram, New Delhi-110022, Tel: 26109615 and printed at Saujanya Printing Press
C-95, Okhla Industrial Area, Phase-I, New Delhi-110020, Tel: 26815778, 40520770